ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 25 ಗುರುವಾರ 2025

₹4

46

ಸಂಪುಟ: 46 | ಸಂಚಿಕೆ: 159 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23

ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com

ಜಾಹೀರಾತು: ad@mysurumithra.com, website: www.mysurumithra.com



ಭಾವನೆಗಳಿಗೆ ಅಕ್ಷರ ರೂಪ ನೀಡಿದಾಗ ಕವಿತೆ ಜನನ!

ದಸರಾ ಪ್ರಚುರ ಕವಿಗೋಷ್ಠಿಗೆ ಲೇಖಕ ಶಿವಾನಂದ ತಗಡೂರು ಚಾಲನೆ



ದಸರಾ ಕವಿಗೋಷ್ಠಿಯಲ್ಲಿ 2ನೇ ದಿನದ 'ಪ್ರಚುರ ಕವಿಗೋಷ್ಠಿ'ಯನ್ನು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷರೂ ಆದ ಲೇಖಕ ಶಿವಾನಂದ ತಗಡೂರು ಉದ್ಘಾಟಿಸಿದರು.

ಮೈಸೂರು, ಸೆ.24(ಎಂಕೆ)– ಮನದ ಭಾವ ಕಲಕುವ, ಹೃದಯಕ್ಕೆ ತಾಕುವ ಶಕ್ತಿ ಕಾವ್ಯಕ್ಕಿದ್ದು, ನೊಂದ ಜೀವಕ್ಕೆ ಕವಿತೆಯ ಸಾಲುಗಳು ಸಮಾಧಾನ ನೀಡಲಿವೆ ಎಂದು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷರೂ ಆದ ಲೇಖಕ ಶಿವಾನಂದ ತಗಡೂರು ಅಭಿಪ್ರಾಯಪಟ್ಟರು.

ಮೈಸೂರು ವಿವಿ ಮಾನಸಗಂಗೋತ್ರಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಬಿ.ಎಂ.ಶ್ರೀ ಸಭಾಂಗಣದಲ್ಲಿ ದಸರಾ ಕವಿಗೋಷ್ಠಿ ಉಪಸಮಿತಿ ವತಿಯಿಂದ ಆಯೋಜಿಸಿರುವ ದಸರಾ ಕವಿಗೋಷ್ಠಿಯಲ್ಲಿ 2ನೇ ದಿನದ 'ಪ್ರಚುರ ಕವಿಗೋಷ್ಠಿ'ಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಕವಿತೆ ಹುಟ್ಟುವುದೇ ವಿಭಿನ್ನ. ಕವಿತೆಗಳು ಯಾರನ್ನು ಹೇಳಿ ಕೇಳಿ ಹುಟ್ಟಲ್ಲ. ಅನುಭವದ ಸಾರದೊಂದಿಗೆ ಪದಪುಂಜಗಳ ಮೆರಗಿನೊಂದಿಗೆ ಕವಿತೆಗಳು ಸೃಷ್ಟಿಯಾಗಲಿವೆ ಎಂದರು.

ಮನದೊಳಗಿನ ಭಾವನೆಗಳಿಗೆ ಅಕ್ಷರ ರೂಪ ಕೊಡುವುದು ಬಹಳ ಕಷ್ಟ. ಭಾಷೆ ಮತ್ತು ಬರವಣಿಗೆಯ ಮೇಲೆ ಹಿಡಿತ ವಿದ್ದರೆ ಮಾತ್ರವೇ ಕವಿತೆಗಳನ್ನು ಬರೆಯಲು ಸಾಧ್ಯ. ಸಾವಿನಂಚಿನಲ್ಲಿದ್ದ ಕೆಲ ಕವಿಗಳು ತಾವೇ ರಚಿಸಿದ ಕವಿತೆಗಳನ್ನು ಹಾಡಿನ ರೂಪದಲ್ಲಿ ಪದೇಪದೆ ಕೇಳಲು ಬಯಸಿ ಕೊನೆಯುಸಿರೆಳೆದ ಉದಾಹರಣೆಗಳಿವೆ ಎಂದು ಹೇಳಿದರು.

ಬರವಣಿಗೆಗಳೆಲ್ಲಾ ಕವಿತೆಯಾಗಲ್ಲ, ಕಲ್ಲನ್ನು ಕೆತ್ತಿ ಶಿಲೆ ಮಾಡಿದಂತೆ ಬರೆದು ಬರೆದು ಭಾವನೆಗಳಿಗೆ, ಘಟನೆಗಳಿಗೆ ಸ್ವರೂಪ ನೀಡುವ ಕಲೆಗಾರಿಕೆ ಕವಿಗಳಿಗಿರಬೇಕು ಎಂದು ಯುವ ಕವಿಗಳಿಗೆ ಸಲಹೆ ನೀಡಿದ ಅವರು, ಇಸ್ರೇಲ್ ಯುದ್ಧಭೂಮಿಗೆ ಭೇಟಿ ನೀಡಿದ್ದ ವೇಳೆ ರಚಿಸಿದ್ದ 'ನೆತ್ತರು' ಹಾಗೂ ಈ ಬಾರಿಯ ದಸರಾ ಉದ್ಘಾಟಿಸಿದ ಬೂಕರ್ ಪ್ರಶಸ್ತಿ ವಿಜೇತೆ ಬಾನು ಮುಷ್ತಾಕ್ ಅವರನ್ನು ಕುರಿತ 'ಬಾನು ಬೆಳಗಿತು' ಶೀರ್ಷಿಕೆಯ ಕವಿತೆಗಳನ್ನು ವಾಚಿಸಿದರು.


ಕವಯತ್ರಿ ಡಾ.ಸುಕನ್ಯ ಮಾರುತಿ ಪ್ರಚುರ ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದರು. ಲೇಖಕ ರಾಜೇಂದ್ರ ಪ್ರಸಾದ್, ದಸರಾ ಕವಿಗೋಷ್ಠಿ ಉಪ ಸಮಿತಿ ಉಪವಿಶೇಷಾಧಿಕಾರಿ ಸೋಮಶೇಖರ್, ಕಾರ್ಯಾಧ್ಯಕ್ಷೆ ಪ್ರೊ.ಎನ್.ಕೆ. ಲೋಲಾಕ್ಷಿ, ಅಧ್ಯಕ್ಷ ಸುರೇಶ್, ಉಪಾಧ್ಯಕ್ಷರಾದ ಡಾ.ಮಹೇಶ್ ದಳಪತಿ, ಮರಿದೇವಯ್ಯ, ಕಾರ್ಯದರ್ಶಿಗಳಾದ ಚೇತನ್ ಬಾಬು, ರಾಘವೇಂದ್ರ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಕವಿತೆಗಳಲ್ಲಿ ಕನ್ನಡಪ್ರೇಮ ಅನಾವರಣ...

ರಾಜ್ಯದ ವಿವಿಧ ಜಿಲ್ಲೆಗಳಿಂದ ಆಗಮಿಸಿದ 43 ಕವಿಗಳು ಸಮೃದ್ಧ ಕನ್ನಡ, ನಾಡು–ನುಡಿ, ದೇಶಪ್ರೇಮ, ಅನ್ನದಾತ, ಮಹಿಳೆಯರ ಮೇಲಿನ ದೌರ್ಜನ್ಯ, ತಂದೆ–ತಾಯಿ, ಗ್ಯಾರಂಟಿ ಯೋಜನೆ, ಗಡಿಗಳಲ್ಲಿನ ಸಮರ ಸೇರಿದಂತೆ ಹಲವು ವಿಚಾರಗಳ ಕುರಿತು ತಮ್ಮದೇ ದಾಟಿಯಲ್ಲಿ ಪದಗುಚ್ಛಗಳನ್ನು ಪೋಣಿಸಿ ಬರೆದು ತಂದಿದ್ದ ಸುಂದರ ಕವಿತೆಗಳನ್ನು ವಾಚಿಸಿ ಕನ್ನಡ ಪ್ರೇಮವನ್ನು ಅನಾವರಣಗೊಳಿಸಿದರು. ಒಡನಾಡಿ ಸಂಸ್ಥೆಯ ಬಿಕಾಂ ವಿದ್ಯಾರ್ಥಿನಿ ಚೈತ್ರ, ತಾಯಿ ಕುರಿತು ಕವಿತೆ ವಾಚಿಸಿದರೆ, ಶ್ರವಣದೋಷವುಳ್ಳ ಹಾವೇರಿ ಮೂಲದ ಸಂಶೋಧನಾ ವಿದ್ಯಾರ್ಥಿನಿ ಮಧು ಕಾರಗಿ, ಕನ್ನಡ ನಾಡಿನ ಪರಂಪರೆ ಕುರಿತು ಕವಿತೆ ವಾಚಿಸಿ ಚಪ್ಪಾಳೆ ಗಿಟ್ಟಿಸಿಕೊಂಡರು. ಹಾಗೆಯೇ ಫಿಜಿಯೋಥೆರಪಿಸ್ಟ್ ಡಾ.ಅಭಿಷೇಕ್ ನಂಜಪ್ಪ, ಉಪನ್ಯಾಸಕ ಡಾ.ಚಂದ್ರಗುಪ್ತ, ಜಿಪಂ ಲೆಕ್ಕ ಅಧೀಕ್ಷಕ ಕೆ.ಆರ್.ಪ್ರವೀಣ್ ಪಟೇಲ್ ಸೇರಿದಂತೆ 43 ಮಂದಿ ಯುವ ಕವಿಗಳು ಕವನಗಳನ್ನು ವಾಚಿಸಿ ಗಮನ ಸೆಳೆದರು.

ವೃತ್ತಿಪರ ಶಿಕ್ಷಣಕ್ಕೆ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಸುಜ್ಞಾನನಿಧಿ ಶಿಷ್ಯವೇತನ, ವಿದ್ಯಾರ್ಥಿವೇತನ ವಿತರಣೆ

ವಿದ್ಯಾರ್ಥಿಗಳು ದೇಶದ ಆಸ್ತಿಯಾಗಬೇಕು: ಶಾಸಕ ಜಿಟಿಡಿ



ಮೈಸೂರಿನ ಶ್ರೀ ಮಂಜುನಾಥಸ್ವಾಮಿ ಕಲ್ಯಾಣ ಮಂಟಪದಲ್ಲಿ ಏರ್ಪಡಿಸಿದ್ದ ವೃತ್ತಿಪರ ಶಿಕ್ಷಣಕ್ಕೆ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಸುಜ್ಞಾನನಿಧಿ ಶಿಷ್ಯವೇತನ, ವಿದ್ಯಾರ್ಥಿವೇತನ ವಿತರಣಾ ಕಾರ್ಯಕ್ರಮವನ್ನು ಶಾಸಕ ಜಿ.ಟಿ.ದೇವೇಗೌಡರು ಉದ್ಘಾಟಿಸಿದರು.

ಮೈಸೂರು,ಸೆ.24(ಜಿಎ)–ಪೋಷಕರು ಬಹಳ ಕಷ್ಟಪಟ್ಟು ಮಕ್ಕಳನ್ನೇ ಆಸ್ತಿಯಾಗಿ ಮಾಡಲು ಯತ್ನಿಸುತ್ತಿದ್ದಾರೆ. ಅದನ್ನು ಅರಿತು ವಿದ್ಯಾರ್ಥಿಗಳು ದೇಶದ ಆಸ್ತಿಯಾಗಬೇಕು ಎಂದು ಶಾಸಕ ಜಿ.ಟಿ. ದೇವೇಗೌಡರು ಕಿವಿಮಾತು ಹೇಳಿದರು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ ವತಿಯಿಂದ ನಗರದ ಜಯಲಕ್ಷ್ಮೀಪುರಂ ಶ್ರೀ ಮಂಜುನಾಥಸ್ವಾಮಿ ಕಲ್ಯಾಣ ಮಂಟಪದಲ್ಲಿ ಬುಧವಾರ ಏರ್ಪಡಿಸಿದ್ದ ವೃತ್ತಿಪರ ಶಿಕ್ಷಣಕ್ಕೆ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಸುಜ್ಞಾನನಿಧಿ ಶಿಷ್ಯವೇತನ, ವಿದ್ಯಾರ್ಥಿ ವೇತನ ವಿತರಣಾ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಪೋಷಕರ ಕಷ್ಟ ಹಾಗೂ ತ್ಯಾಗ ಅರ್ಥ ಮಾಡಿಕೊಂಡು ಚೆನ್ನಾಗಿ ಓದಿ ಗುರಿ ತಲುಪಿ. ಪ್ರಸ್ತುತ ಪ್ರತಿಭೆ ಇದ್ದರಷ್ಟೇ ಉದ್ಯೋಗ ಸಿಗುತ್ತಿದೆ. ಆದ್ದರಿಂದ ಚೆನ್ನಾಗಿ ಓದಬೇಕು. ಸ್ವಯಂ ಉದ್ಯೋಗ ಆರಂಭಿಸುವ ಕಡೆಗೂ ಗಮನ ನೀಡಬೇಕು. ಯಾರಿಗೂ ಮುಂದೆ ಗುರಿ, ಹಿಂದೆ ಗುರು ಇಲ್ಲದೇ ಆತ ಎತ್ತರಕ್ಕೆ ಬೆಳೆಯಲಾರ. ಆದ್ದರಿಂದ ಓದುವುದನ್ನು ಆದ್ಯತೆಯಾಗಿ ಪರಿಗಣಿಸಿ ಎಂದರು.

ಯಾರನ್ನು ದ್ವೇಷಿಸಬಾರದು. ಪರಸ್ಪರ ಪ್ರೀತಿಸಬೇಕು. ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಳ್ಳಬೇಕು. ಡಾ.ಬಿ.ಆರ್. ಅಂಬೇಡ್ಕರ್ ಅವರು ಹೇಳಿರುವಂತೆ ದನಿ ಇಲ್ಲದವರಿಗೆ, ಶೋಷಿತರಿಗೆ, ದಮನಿತರಿಗೆ ದನಿಯಾಗಬೇಕು ಎಂದು ತಿಳಿಸಿದರು.

ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯು ಆರೋಗ್ಯ, ಶಿಕ್ಷಣ ಕ್ಷೇತ್ರದಲ್ಲಿ ಉತ್ತಮ ಕೆಲಸ ಮಾಡುತ್ತಿದೆ. ರೈತರು ಹಾಗೂ ಮಹಿಳೆಯರ ಆರ್ಥಿಕ ಪ್ರಗತಿಗೆ ಸಾಕಷ್ಟು ಶ್ರಮಿಸುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಮಾಜಿ ಮೇಯರ್ ಶಿವಕುಮಾರ್ ಮಾತನಾಡಿ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯು ಧರ್ಮಾಧಿಕಾರಿ ಡಾ.ಡಿ. ವೀರೇಂದ್ರ ಹೆಗ್ಗಡೆ ಅವರ ನೇತೃತ್ವದಲ್ಲಿ ಹತ್ತು ಹಲವಾರು ಸಮಾಜಮುಖಿ ಕಾರ್ಯಕ್ರಮಗಳನ್ನು ನಡೆಸುತ್ತಿದೆ. ಇವುಗಳಲ್ಲಿ ಮಹಿಳೆಯರಿಗೆ ಆರ್ಥಿಕ ನೆರವು, ಮಕ್ಕಳಿಗೆ ಯೋಗ ಹಾಗೂ ಸಂಸ್ಕೃತ ಕಲಿಕೆ, ಆಸ್ಪತ್ರೆಗಳು, ಕೆರೆಗಳು ಹಾಗೂ ದೇವಸ್ಥಾನಗಳ ಪುನರುಜ್ಜೀವನ ಸೇರಿವೆ. ಇಂತಹ ಧರ್ಮಸ್ಥಳ ಹಾಗೂ ಧರ್ಮಾಧಿಕಾರಿಗಳ ಬಗ್ಗೆ ಅಪಪ್ರಚಾರ ನಡೆಸಲಾಯಿತು. ಸತ್ಯ ಏನೆಂಬುದು ಈಗ ಇಡೀ ಪ್ರಪಂಚಕ್ಕೆ ಗೊತ್ತಾಗಿದೆ ಎಂದರು. ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಶಾಲಾ ಶಿಕ್ಷಣ ಇಲಾಖೆ ನಿವೃತ್ತ ನಿರ್ದೇಶಕ ಬಿ.ಕೆ. ಬಸವರಾಜು, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಸಾಮಾಜಿಕ ಕಾರ್ಯಕರ್ತ ವಿಕಾಸ್ ಶಾಸ್ತ್ರಿ, ರವಿ ಮಂಚೇಗೌಡನಕೊಪ್ಪಲು, ಕಮಲಮ್ಮ, ಸಾವಿತ್ರಿ, ಟ್ರಸ್ಟಿನ ಜಿಲ್ಲಾ ನಿರ್ದೇಶಕ ವಿಜಯಕುಮಾರ್ ನಾಗನಾಳ, ಎ.ಜಿ.ಪ್ರವೀಣ್, ಶಶಿರೇಖಾ ಮತ್ತಿತರರು ಉಪಸ್ಥಿತರಿದ್ದರು.



ಸನ್ಮಾನ...

ಮೈಸೂರಿನ ಬೋಗಾದಿ ಪಟ್ಟಣ ಪಂಚಾಯಿತಿಯಲ್ಲಿ ಪೌರಕಾರ್ಮಿಕರ ದಿನಾಚರಣೆ ಕಾರ್ಯಕ್ರಮದಲ್ಲಿ ಶಾಸಕ ಜಿ.ಟಿ.ದೇವೇಗೌಡರು ಪೌರಕಾರ್ಮಿಕರಿಗೆ ವಿಶೇಷ ಭತ್ಯೆ ನೀಡಿದರಲ್ಲದೆ, ಉತ್ತಮ ಸೇವೆ ಸಲ್ಲಿಸಿರುವ ಪೌರಕಾರ್ಮಿಕರನ್ನು ಸನ್ಮಾನಿಸಿದರು. ಈ ವೇಳೆ ಬೋಗಾದಿ ಪಪಂ ಮುಖ್ಯಾಧಿಕಾರಿ ಸುಜಯ್ ಕುಮಾರ್, ಆರೋಗ್ಯ ನಿರೀಕ್ಷಕ ಪುನೀತ್‌ಕುಮಾರ್, ಜೆಡಿಎಸ್ ಮುಖಂಡರು ಮತ್ತಿತರರಿದ್ದರು.

ಸಮೀಕ್ಷೆ ವೇಳೆ ವಿಶ್ವಕರ್ಮ ಎಂದು ಬರೆಸಲು ಮನವಿ

ಮೈಸೂರು,ಸೆ.24(ಜಿಎ)–ರಾಜ್ಯ ಸರ್ಕಾರದ ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಸಮೀಕ್ಷೆ ವೇಳೆ ವಿಶ್ವಕರ್ಮ ಸಮುದಾಯದವರು ಧರ್ಮ ಕಾಲಂನಲ್ಲಿ ಹಿಂದೂ, ಜಾತಿ ಕಾಲಂನಲ್ಲಿ ವಿಶ್ವಕರ್ಮ ಎಂದೇ ಬರೆಸಬೇಕೆಂದು ಮೈಸೂರು ಜಿಲ್ಲಾ ವಿಶ್ವಕರ್ಮ ಯುವ ಜಾಗೃತಿ ವೇದಿಕೆ ಅಧ್ಯಕ್ಷ ಕೆ. ಕೆಂಡಗಣ್ಣ ವಿಶ್ವಕರ್ಮ ಮನವಿ ಮಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರವರ್ಗ ಕಾಲಂನ 2ಎ ನಲ್ಲಿ ಈಗ ತಿಳಿಸಿದ ರೀತಿ ಭರ್ತಿ ಮಾಡಬೇಕು. ಸಮುದಾಯ ಗೊಂದಲಕ್ಕೆ ಒಳಗಾಗಿ ಯಾವುದೇ ಉಪಜಾತಿಯನ್ನು ಬರೆಯಿಸಬಾರದು. ಇದರಿಂದ ಸಮುದಾಯದ ಒಟ್ಟಾರೆ ಜನಸಂಖ್ಯೆ ಮಾಹಿತಿ ದೊರೆತು ಸೌಲಭ್ಯ, ಸವಲತ್ತು ಪಡೆಯಲು ಸಹಕಾರಿಯಾಗುತ್ತದೆ ಎಂದರು.

ಕೆಲವರು ವಿಶ್ವಕರ್ಮ ಬ್ರಾಹ್ಮಣ ಎಂದು ನಮೂದಿಸಿ ಎಂದೆಲ್ಲ ದಿಕ್ಕು ತಪ್ಪಿಸುತ್ತಿದ್ದು, ಇದನ್ನು ನಿರ್ಲಕ್ಷಿಸಬೇಕೆಂದು ಕೋರಿದರು. ಸುದ್ದಿಗೋಷ್ಠಿಯಲ್ಲಿ ಹುನುಗನಹಳ್ಳಿ ನಿಂಗಾಚಾರ್, ಚಂದ್ರು ವಿಶ್ವಕರ್ಮ ಹೆಬ್ಬಾಳು, ಮಹೇಶ್, ರಾಮಚಂದ್ರಚಾರ್ ಹೆಬ್ಬಾಳು, ಆನಂದೂರು ಪುಟ್ಟಸ್ವಾಮಾಚಾರ್, ಶ್ರೀಲಕ್ಷ್ಮಿ ಸರಸ್ವತಿ ಉಪಸ್ಥಿತರಿದ್ದರು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು: ಮೈಸೂರಿನ ಕುರುಹಿನ ಶೆಟ್ಟಿ ಶ್ರೀರಾಮ ಸೇವಾ ಸಂಘದ ವತಿಯಿಂದ 2024–25ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಶೇ.85ಕ್ಕಿಂತ ಹೆಚ್ಚು ಅಂಕ ಗಳಿಸಿರುವ ಕುರುಹಿನ ಶೆಟ್ಟಿ ಜನಾಂಗದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲು ಅರ್ಜಿ ಆಹ್ವಾನಿಸಲಾಗಿದೆ. ಅರ್ಹ ವಿದ್ಯಾರ್ಥಿಗಳು ಹೆಚ್ಚಿನ ಮಾಹಿತಿಗೆ ಮೊ.ಸಂ. 94484 33921, 99641 80018 ಸಂಪರ್ಕಿಸಬಹುದು.

ದಸರಾ ಸೈಕ್ಲಿಂಗ್ ಸ್ಪರ್ಧೆ: ಬೆಳಗಾವಿಯ ಶ್ರೀನಿವಾಸ್ ರಜಪೂತ್, ಮೈಸೂರಿನ ಗ್ಲಿಯೋನ ಏಂಜಲ್ ಡಿಸೋಜಾಗೆ ಚಿನ್ನ



ದಸರಾ ಅಂಗವಾಗಿ ಉತ್ತನಹಳ್ಳಿ ರಿಂಗ್ ರಸ್ತೆಯಲ್ಲಿ ಆಯೋಜಿಸಿದ್ದ ರಾಜ್ಯಮಟ್ಟದ ದಸರಾ ಸೈಕ್ಲಿಂಗ್ ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದ ಸೈಕ್ಲಿಸ್ಟ್‌ಗಳು.

ಮೈಸೂರು,ಸೆ.24(ಎಂಟಿವೈ)– ದಸರಾ ಕ್ರೀಡಾಕೂಟದ ಅಂಗವಾಗಿ ಮೈಸೂರಲ್ಲಿ ಬುಧವಾರ ಆಯೋಜಿಸಿದ್ದ ರಾಜ್ಯ ಮಟ್ಟದ ದಸರಾ ಸೈಕ್ಲಿಂಗ್ ಸ್ಪರ್ಧೆಯಲ್ಲಿ ಬೆಳಗಾವಿ ವಿಭಾಗದ ಶ್ರೀನಿವಾಸ್ ರಜಪೂತ್ ಹಾಗೂ ಮೈಸೂರು ವಿಭಾಗದ ಗ್ಲಿಯೋನ ಏಂಜಲ್ ಡಿಸೋಜಾ ಚಿನ್ನದ ಪದಕ ಪಡೆದರು.

ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನ ಉತ್ತನಹಳ್ಳಿ ಬಳಿ ರಿಂಗ್ ರಸ್ತೆಯಲ್ಲಿ ಆಯೋಜಿಸಿದ್ದ ರಾಜ್ಯಮಟ್ಟದ ದಸರಾ ಸೈಕ್ಲಿಂಗ್ ಸ್ಪರ್ಧೆಯಲ್ಲಿ ರಾಜ್ಯದ ವಿವಿಧೆಡೆಯಿಂದ ಆಗಮಿಸಿದ್ದ ಸೈಕ್ಲಿಸ್ಟ್‌ಗಳು ಪಾಲ್ಗೊಂಡು ಗಮನ ಸೆಳೆದರು. ಉತ್ತನಹಳ್ಳಿ ಜಂಕ್ಷನ್‌ನಿಂದ ತಿನರಸೀಪುರ ರಸ್ತೆ ಜಂಕ್ಷನ್‌ನ ವೈದ್ಯರ ಭವನದವರೆಗೆ 10ಕಿ.ಮೀ. ಲ್ಯಾಪ್ (ಒಂದು ಸುತ್ತು)ಅನ್ನು ಸ್ಪರ್ಧೆಗೆ ಗುರುತಿಸಲಾಗಿತ್ತು. ಪುರುಷರ ವಿಭಾಗದ ಸ್ಪರ್ಧಿಗಳು 7 ಲ್ಯಾಪ್‌ಗಳನ್ನು ಪೂರ್ಣಗೊಳಿಸಿ 70 ಕಿ. ಮೀ. ರೇಸ್ ಯಶಸ್ವಿಯಾಗಿ ಪೂರ್ಣಗೊಳಿಸಿದರು. ಮಹಿಳೆಯರು 3 ಸುತ್ತು ಮುಕ್ತಾಯ ಗೊಳಿಸಿ 30 ಕಿ.ಮೀ. ರೇಸ್ ಅನ್ನು ಪೂರ್ಣಗೊಳಿಸಿದರು. ಮಹಿಳೆಯ ವಿಭಾಗದಲ್ಲಿ ರಾಜ್ಯದ ಹಲವು ಜಿಲ್ಲೆಗಳಿಂದ ಒಟ್ಟು 37ಕ್ಕೂ ಹೆಚ್ಚು ಹಾಗೂ ಪುರುಷರ ವಿಭಾಗದಲ್ಲಿ 45ಕ್ಕೂ ಹೆಚ್ಚು ಸ್ಪರ್ಧಿಗಳು ಭಾಗವಹಿಸಿದ್ದು ವಿಶೇಷ.

ಪುರುಷರ ವಿಭಾಗದಲ್ಲಿ ಶ್ರೀನಿವಾಸ್‌ಗೆ ಚಿನ್ನ: ಪುರುಷರ ದಸರಾ ಸೈಕ್ಲಿಂಗ್ ಸ್ಪರ್ಧೆಯಲ್ಲಿ 1:56 ಗಂಟೆ(1 ಗಂಟೆ 56 ನಿಮಿಷ)ಯಲ್ಲಿ 70 ಕಿ.ಮೀ. ಸೈಕಲ್ ರೇಸ್ ಪೂರ್ಣಗೊಳಿಸಿದ ಶ್ರೀನಿವಾಸ್ ರಜಪೂತ್ ಚಿನ್ನದ ಪದಕ ಪಡೆದು ಮಿಂಚಿದರು. ನಂತರ ಗುರಿ ತಲುಪಿದ ಯಲಗುರಪ್ಪ ಗಡ್ಡಿ (2:00:23.61 ಸೆ.)ಬೆಳ್ಳಿಯ ಪದಕ ಪಡೆದರು. ರಾಜೀವ್ ಸೊನ್ನದ್ ಅವರು 2:00:24 ಸೆಕೆಂಡ್‌ಗಳಲ್ಲಿ ರೇಸ್ ಪೂರ್ಣಗೊಳಿಸಿ 3ನೇ ಬಹುಮಾನ ಪಡೆದರು.

ಮಹಿಳಾ ವಿಭಾಗದಲ್ಲಿ ಗ್ಲಿಯಾನಾ ಮಿಂಚು: ಮಹಿಳೆಯರ ದಸರಾ ಸೈಕ್ಲಿಂಗ್‌ಗಲ್ಲಿ 1:04:35 ಸೆಕೆಂಡ್‌ಗಳಲ್ಲಿ 30 ಕಿ.ಮೀ. ರೋಡ್ ರೇಸ್ ಪೂರ್ಣಗೊಳಿಸಿದ ಗ್ಲಿಯೋನ ಏಂಜಲ್ ಡಿಸೋಜಾ ಅವರು ಚಿನ್ನದ ಪದಕ ಪಡೆದರು.

1:04:36 ಸೆಕೆಂಡ್‌ಗಳಲ್ಲಿ ಸೈಕ್ಲಿಂಗ್ ರೇಸ್ ಮುಕ್ತಾಯಗೊಳಿಸಿದ ಕೀರ್ತಿ ನಾಯಕ್ ಬೆಳ್ಳಿ, 1:04:36 ಸೆಕೆಂಡ್‌ಗಳಲ್ಲಿ ಗುರಿ ತಲುಪಿದ ಕಿಯಾನಾ ಬುರಾಹ್ ಅವರು ಕಂಚಿನ ಪದಕ ಪಡೆದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

25.09.2025 ಗುರುವಾರ, ಮಳೆ ನಕ್ಷತ್ರ: ಉತ್ತರಾ 14.09.2025 ರಿಂದ 26.09.2025 ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯಣ, ಶರದ್ ಋತು, ಅಶ್ವಿನಿ ಮಾಸ, ಶುಕ್ಲ ಪಕ್ಷ, ತಿಥಿ: ಚೌತಿ, ನಕ್ಷತ್ರ: ಸ್ವಾತಿ, ರಾಹುಕಾಲ: ಮಧ್ಯಾಹ್ನ 1.30ರಿಂದ 3 ಗಂಟೆಯವರೆಗೆ

- **ಐಶ್ವಸೂರ್ಯ ರಿಯಾಲಿಟೀಸ್:** ಚಾಮುಂಡೇಶ್ವರಿ ಸೆಲೆಬ್ರಿಟಿ ಪ್ರೀಮಿಯರ್ ಲೀಗ್, ವೈಟ್ ಬಾಲ್ ಕ್ರಿಕೆಟ್ ಟೂರ್ನಮೆಂಟ್, ಸ್ಥಳ: ಗ್ಲೆಡ್ಸ್ ಮೈದಾನ, ಮೈಸೂರು ವಿವಿ, ಬೆಳಗ್ಗೆ 8.30ಕ್ಕೆ.
- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಸಂಧಿವಾತ, ಶರದ್ ವಿರೇಚನ–ಪಂಚಕರ್ಮ ಚಿಕಿತ್ಸಾ ಶಿಬಿರ. ಬೊಜ್ಜು ನಿವಾರಣಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ, ಆಲನಹಳ್ಳಿ ಬೆಳಗ್ಗೆ 9ರಿಂದ.
- **ಶ್ರೀ ಸುಬ್ಬರಾಯ ದಾಸರ ಶ್ರೀ ಪ್ರತಿನಾಮ ಗೋಪಾಲ ಒಡೆಯರ್ ಶ್ರೀ ಪ್ರಸನ್ನ, ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನ:** ನವರಾತ್ರಿ ಬ್ರಹ್ಮೋತ್ಸವ. ಬೆಳಗ್ಗೆ ಕಂಕಣ ಬಂಧನ ಉತ್ಸವ, ಸಾಯಂಕಾಲ ಅಂಕುರಾರ್ಪಣ ಉತ್ಸವ, ಮಹಾಮಂಗಳಾರತಿ, ಸ್ಥಳ ದೇವಸ್ಥಾನದ ಆವರಣ, ಕೃಷ್ಣವಿಲಾಸ ರಸ್ತೆ, ದೇವರಾಜ ಮೊಹಲ್ಲಾ.
- **ಶೃಂಗೇರಿ ಶ್ರೀ ಶಂಕರ ಮಠ, ಅಭಿನವ ಶಂಕರಾಲಯ:** ಶ್ರೀ ಶಾರದಾ ಶರನ್ನವರಾತ್ರೋತ್ಸವ–2025. ಚತುರ್ಥಿ ಶ್ರೀ ವೈಷ್ಣವೀ (ಗರುಡವಾಹಿನಾಲಂಕಾರ), ಸಹಸ್ರಮೋದಕ ಗಣಪತಿ ಹೋಮ, ಸ್ಥಳ: ಅಭಿನವ ಶಂಕರಾಲಯ, ಪೋರ್ಟ್ ಮೊಹಲ್ಲಾ. ಬೆಳಗ್ಗೆಯಿಂದ.
- **ಶ್ರೀ ಚಂದ್ರಮೌಳೇಶ್ವರ ಸ್ವಾಮಿ ದೇವಸ್ಥಾನಂ ಚಾರಿಟಬಲ್ ಟ್ರಸ್ಟ್:** ಶರನ್ನವರಾತ್ರಿ ಉತ್ಸವ–2025. ಬೆಳಗ್ಗೆ 9ಕ್ಕೆ ಶ್ರೀ ಮಹಾಗಣಪತಿ ಹೋಮ, ಶ್ರೀ ವೈಷ್ಣವೀ (ಗರುಡವಾಹಿನಿ ಅಲಂಕಾರ), ಸ್ಥಳ: ದೇವಸ್ಥಾನದ ಪ್ರಾಂಗಣ, ದೇವಸ್ಥಾನದ ರಸ್ತೆ, ವಾಣಿವಿಲಾಸ ಮೊಹಲ್ಲಾ.
- **ಪ್ರೀತಿ ಕ್ಯಾನ್ಸರ್ ಸೆಂಟರ್ :** ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ, ಸ್ಥಳ: ಪ್ರೀತಿ ಕ್ಯಾನ್ಸರ್ ಸೆಂಟರ್, ಲಕ್ಷ್ಮೀಪುರಂ, ಬೆಳಗ್ಗೆ 10 ರಿಂದ.
- **ಕಾವೇರಿ ಆಯುರ್ವೇದ ಆಸ್ಪತ್ರೆ:** ಯುವಕರ ಮಾನಸಿಕ ಆರೋಗ್ಯ ಜಾಗೃತಿ, ಗರ್ಭಸಂಸ್ಕಾರ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ. ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ಗಂಟೆಯಿಂದ.
- **ವಿವೇಕಾನಂದನಗರ ಬ್ರಾಹ್ಮಣ ಮಹಾಸಭಾ:** ಶರನ್ನವರಾತ್ರಿ, ಬಾಲ ಪ್ರತಿಭೆ ಕುಮಾರಿ ಸಾನ್ವಿ ಆರ್ ಅವರಿಂದ ದೇವರನಾಮ, ಸ್ಥಳ: ಶ್ರೀ ಶಂಕರ ಪ್ರಾರ್ಥನಾ ಮಂದಿರ.
- **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** ಶ್ರೀದೇವಿ ನವರಾತ್ರಿ ಕಾರ್ಯಕ್ರಮ. ಬೆಳಗ್ಗೆ 9 ರಿಂದ ಶ್ರೀ ದೇವಿ ಪಲ್ಲಕ್ಕಿ ಉತ್ಸವ, ಕುಮಾರಿ ಪೂಜೆ, ಶ್ರೀಚಕ್ರ ಪೂಜೆ, ನವಾವರಣ ಪೂಜೆ, ವಿದುಷಿ ಶ್ರೀ ಲಕ್ಷ್ಮಿ ಬೆಳ್ಮಣ್ಣು ಅವರಿಂದ ಹಿಂದೂಸ್ಥಾನಿ ಸಂಗೀತ ಗಾಯನ, ಮಧ್ಯಾಹ್ನ 12ಕ್ಕೆ ಅನ್ನಾರ್ಚನೆ, ಮೀನಾಕ್ಷಿ ಪೂಜೆ, ಹೋಮ ಪೂರ್ಣಾಹುತಿ, ಸಂಜೆ 4ಕ್ಕೆ ಮಹಾಮಂಗಳಾರತಿ, ಡೋಲೋತ್ಸವ, ಸುವಾಸಿನಿ ಪೂಜೆ, ಸಂಜೆ 6ಕ್ಕೆ ಶ್ರೀ ಸ್ವಾಮೀಜಿಯವರಿಂದ ದೇವಿ ಭಜನೆ ಮತ್ತು ಪ್ರವಚನ, ಸ್ಥಳ: ನಾದಮಂಟಪ, ಗಣಪತಿ ಸಚ್ಚಿದಾನಂದ ಆಶ್ರಮ. ಊಟಿ ರಸ್ತೆ.
- **ವ್ಯವಸ್ಥಾಪಕರು:** ಪೇಪರ್ ಪಲ್ಪ್ ಉಪಯೋಗಿಸಿ ಕೆ.ಎಸ್.ರಾಘವೇಂದ್ರ ಅವರು ಕೈಯ್ಯಿಂದ ಮಾಡಿದ 500ಕ್ಕೂ ಹೆಚ್ಚು ಬೊಂಬೆಗಳ ಮೂಲಕ ಶ್ರೀನಿವಾಸ ಕಲ್ಯಾಣ, ಶ್ರೀ ರಾಘವೇಂದ್ರ ಸ್ವಾಮಿಯವರ ಮಹಿಮೆ, ದಶಾವತಾರದಲ್ಲಿ ಶ್ರೀ ಬಾಲಕೃಷ್ಣ ಲೀಲೆ ಕುರಿತು ಪ್ರದರ್ಶನ. ಸ್ಥಳ: ಇಂಚರ ಕಲಾಕ್ಷೇತ್ರ ಮಹದೇಶ್ವರ ನಗರ, ಬೆಳಗ್ಗೆ 10 ರಿಂದ.
- **ರಾಮ್‌ಸನ್ಸ್ ಬೊಂಬೆ ಮನೆ:** ಬೊಂಬೆ ಪ್ರದರ್ಶನ. ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ಗಂಟೆಯಿಂದ.
- **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀಮದ್ಭಗವದ್ಗೀತಾ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.
- **ಉಷಾ ಸಾಹಿತ್ಯಮಾಲೆ ಮತ್ತು ಸಂವಹನ : ಪ್ರಕಾಶಕರು :** ಡಾ.ಎಚ್.ಎಸ್. ರುದ್ರೇಶ್ ಅವರ ಆರಾಧನೆ ಮತ್ತು ಎತ್ತಣ ಮಾಮರ ಎತ್ತಣ ಕೋಗಿಲೆ ಕಾದಂಬರಿಗಳ ಬಿಡುಗಡೆ ಸಮಾರಂಭ, ಕೃತಿಗಳ ಲೋಕಾರ್ಪಣೆ : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಅಧ್ಯಕ್ಷತೆ : ಹಿರಿಯ ವಿದ್ವಾಂಸ ಡಾ. ಚಂದ್ರಶೇಖರಯ್ಯ, ಕೃತಿ ಕುರಿತು : ಡಾ. ಸಿ.ಜಿ.ಉಷಾದೇವಿ, ಡಾ. ಮಹೇಂದ್ರಮೂರ್ತಿ ದೇವನೂರು, ಉಪಸ್ಥಿತರು : ಡಾ. ಎಚ್.ಎಸ್. ರುದ್ರೇಶ್, ಡಿ.ಎನ್. ಲೋಕಪ್ಪ, ಸ್ಥಳ: ರೋಟರಿ ಎ.ಸಿ. ದೇವೇಗೌಡ ಹಾಲ್, ಮುಡಾ ಎದುರು, ಜೆಎಲ್‌ಬಿ ರಸ್ತೆ, ಬೆಳಗ್ಗೆ 11ಕ್ಕೆ.
- **ಶ್ರೀ ಅಮೃತೇಶ್ವರ ದೇವಸ್ಥಾನ :** ಶ್ರೀ ಶ್ರೀ ದಕ್ಷಿಣಾಮ್ನಾಯ ಶೃಂಗೇರಿ ಶಾರದಾಪೀಠದ ಉಭಯ ಜಗದ್ಗುರುಗಳ ಅನುಗ್ರಹಗಳೊಂದಿಗೆ ಶರನ್ನವರಾತ್ರಿ ಪ್ರಯುಕ್ತ 75ನೇ ವರ್ಷದ ಸಹಸ್ರ ಚಂಡೀ ಮಹಾಯಾಗ, ವಿಸ್ತಾರ ಸಹಸ್ರಚಂಡಿ ಅಮೃತ ಮಹೋತ್ಸವ, ಬೆಳಗ್ಗೆ 9.30ಕ್ಕೆ ಸಹಸ್ರ ಚಂಡಿಕಾಯಾಗ, ಕೂಷ್ಮಾಂಡದೇವಿಯ ಆರಾಧನೆ, ಮಧ್ಯಾಹ್ನ 12ಕ್ಕೆ ಪೂರ್ಣಾಹುತಿ, ಪ್ರಸಾದ ವಿನಿಯೋಗ, ಸ್ಥಳ: ಶ್ರೀ ಅಮೃತೇಶ್ವರ ದೇವಸ್ಥಾನ.
- **ವ್ಯವಸ್ಥಾಪಕರು:** ಮೈಸೂರು ಮನೆ–ಮನೆ ದಸರಾ ಬೊಂಬೆ ಪ್ರದರ್ಶನ–2025. ಸ್ಥಳ: ಹೇಮಲತಾ ಕುಮಾರಸ್ವಾಮಿ ಅವರ ನಿವಾಸ, 567/3, 2ನೇ ರಾಮಚಂದ್ರ ಅಗ್ರಹಾರ, ಖಿಲ್ಲೆ ಮೊಹಲ್ಲಾ.
- **ತ್ರಯೀನ್ಯಾಸ್ ಶ್ರೀವಿದ್ಯಾ ಫೌಂಡೇಷನ್:** 29ನೇ ವರ್ಷದ ಶರನ್ನವರಾತ್ರಿ ಮಹೋತ್ಸವ. ಬೆಳಗ್ಗೆ 8.30ಕ್ಕೆ ಮಹಾಭಿಷೇಕ, ಶ್ರೀ ಕೂಷ್ಮಾಂಡದೇವಿ, ಶ್ರೀ ವಿದ್ಯಾ, ಶಾಂತಿದುರ್ಗಾ ಪೂಜಾ, ಸಪ್ತಶತಿ ಪಾರಾಯಣ, ಲಲಿತೋಪಾಖ್ಯಾನ ಪಾರಾಯಣ, ಶ್ರೀ ಚಕ್ರಾರ್ಚನೆ, ಶ್ರೀ ಸುಂದರಕಾಂಡ ಪಾರಾಯಣ, ಸಂಜೆ 5.30ಕ್ಕೆ ಶ್ರೀ ದಶಗಣಪತಿ ಹೋಮ, ಶ್ರೀ ಮಹಾಗಣಪತಿ, ಶ್ರೀ ಹರಿದ್ರಾಗಣಪತಿ, ಶ್ರೀ ಶಕ್ತಿಗಣಪತಿ, ಶ್ರೀ ಚಿಂತಾಮಣಿ ಗಣಪತಿ, ಶ್ರೀಋಣವಿಮೋಚನ ಗಣಪತಿ, ಶ್ರೀ ಶ್ವೇತಾರ್ಕ ಗಣಪತಿ, ಶ್ರೀ ಬಾಲಗಣಪತಿ, ಶ್ರೀ ಚೋರಗಣಪತಿ, ಶ್ರೀ ಸಿದ್ಧಿಗಣಪತಿ, ಶ್ರೀ ಲಕ್ಷ್ಮೀವಿನಾಯಕ ಹೋಮ, ಪೂರ್ಣಾಹುತಿ, ಕುಂಕುಮಾರ್ಚನೆ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ಫೌಂಡೇಷನ್ ಆವರಣ, ಜಯಲಕ್ಷ್ಮೀಪುರಂ.
- **ಶ್ರೀ ಚಾಮರಾಜೇಂದ್ರ ಸ್ಕೂಲ್ ಫಾರ್ ಎಕ್ಸಲೆನ್ಸ್ :** ದಸರಾ ಕೇಕ್ ಶೋ, ಸ್ಥಳ: ಶ್ರೀ ಚಾಮರಾಜೇಂದ್ರ ಸ್ಕೂಲ್ ಫಾರ್ ಎಕ್ಸಲೆನ್ಸ್, ಮಹಾರಾಜ ಕಾಲೇಜು ಮೈದಾನ, ಬೆಳಗ್ಗೆ 11ಕ್ಕೆ.
- **ಶ್ರೀ ಶ್ರೀ ಆವನೀ ಶೃಂಗೇರಿ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನಂ :** ಶ್ರೀ ಶಾರದಾ ಶರನ್ನವರಾತ್ರಿ ಮಹೋತ್ಸವ, ಚತುರ್ಥಿ–ಚಂದ್ರಘಂಟ ಅಲಂಕಾರ, ಬೆಳಗ್ಗೆ 9ಕ್ಕೆ ಶ್ರೀ ಬಾಲಾ ತ್ರಿಪುರ ಸುಂದರಿ ಹೋಮ, ಮಧ್ಯಾಹ್ನ 12.30ಕ್ಕೆ ಪೂರ್ಣಾಹುತಿ, ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸಂಜೆ 6.30ಕ್ಕೆ ಚಿನ್ಮಯಿ ಭಜನಾ ಮಂಡಲಿಯವರಿಂದ ಭಜನಾ ಕಾರ್ಯಕ್ರಮ, ಸ್ಥಳ: ಶ್ರೀ ಆವನೀ ಶೃಂಗೇರಿ ಮಠ, ಮೈಸೂರು ಶಾಖೆ, ವಿದ್ಯಾರಣ್ಯಪುರಂ.
- **ಅರಸು ಜಾಗೃತಿ ಅಕಾಡೆಮಿ ಚಾರಿಟಬಲ್ ಟ್ರಸ್ಟ್ :** ಚುಟುಕು ಜಾಹ್ನವಿ ವಿ. ಸೀತಾಲಕ್ಷ್ಮಿ ವರ್ಮ ವಿರಚಿತ ಬಣ್ಣ ಬಣ್ಣದ ಬಿಂದಿಗಳು ಕೃತಿ ಲೋಕಾರ್ಪಣೆ ಸಮಾರಂಭ, ಉದ್ಘಾಟನೆ : ವಿಧಾನಪರಿಷತ್ ಸದಸ್ಯ ಡಾ. ಡಿ. ತಿಮ್ಮಯ್ಯ, ಕೃತಿ ಲೋಕಾರ್ಪಣೆ : ಚುಟುಕು ರತ್ನ ಡಾ. ಸಿಪಿಕೆ, ಕೃತಿ ಕುರಿತು : ಶಿಕ್ಷಣ ತಜ್ಞ ಶ್ರೀಮತಿ ಭ್ರಮರ ಬಹದ್ದೂರ್, ಅಧ್ಯಕ್ಷತೆ : ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಅಧ್ಯಕ್ಷ ಆರ್. ದೀಪು, ಮುಖ್ಯ ಅತಿಥಿಗಳು : ಹೆಚ್.ಎಸ್. ಸುರೇಶ್‌ಬಾಬು, ಎ.ಎಸ್. ಸತೀಶ್, ಚುಟುಕು ಸಿರಿ ಡಾ. ರತ್ನ ಹಾಲಪ್ಪಗೌಡ, ಆರ್ಯ ಅಮರನಾಥ ರಾಜೇ ಅರಸ್, ಚುಟುಕು ಜಾಹ್ನವಿ ವಿ. ಸೀತಾಲಕ್ಷ್ಮಿ ವರ್ಮ, ಸ್ಥಳ:ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಜೆಎಲ್‌ಬಿ ರಸ್ತೆ, ಬೆಳಗ್ಗೆ 10.30ಕ್ಕೆ.
- **ಶ್ರೀ ರಾಜೀವ್ ಸ್ನೇಹ ಬಳಗ, ವಿಪ್ರ ಮಹಿಳಾ ಸಂಗಮ, ಕೃಷ್ಣ ಕಾಲಿಂಗ್ ಚಾರಿಟಬಲ್ ಟ್ರಸ್ಟ್ :** ಮನೆ ಮನೆ ಗೊಂಬೆ ಸ್ಪರ್ಧೆ, ತೀರ್ಪುಗಾರರ ವೀಕ್ಷಣಾ ಸಮಯ : ಬೆಳಗ್ಗೆ 11 ರಿಂದ.
- **ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ಮೈಸೂರು ದಸರಾ ಮಹೋತ್ಸವ ಸಮಿತಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು :** ಕನ್ನಡ ಪುಸ್ತಕಗಳ ರಿಯಾಯಿತಿ ಮಾರಾಟ ಮೇಳ, ಸಾಹಿತಿಗಳೊಂದಿಗೆ ಸೆಲ್ಫಿ–ನಗೆ ಬರಹಗಾರ ಎಂ.ಎಸ್. ನರಸಿಂಹಮೂರ್ತಿ, ಕವಿಗೋಷ್ಠಿ ಮತ್ತು ಕುಂಚ, ಕಾವ್ಯ ಗಾಯನ, ಸ್ಥಳ: ರಾಷ್ಟ್ರಕವಿ ಕುವೆಂಪು ಸಾಂಸ್ಕೃತಿಕ ವೇದಿಕೆ, ಸ್ಕೌಟ್ಸ್ ಮತ್ತು ಗೈಡ್ಸ್ ಮೈದಾನ, ಹಳೆ ಡಿಸಿ ಕಚೇರಿ ಎದುರು, ಬೆಳಗ್ಗೆ 11.30ಕ್ಕೆ
- **ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ :** ಅನಾಬೆಲ್ ಡಿಎಸ್ ಉತ್ಪನ್ನ ಬಿಡುಗಡೆ ಸಮಾರಂಭ, ಮುಖ್ಯ ಅತಿಥಿಗಳು : ಅಕಾಡೆಮಿ ಕುಲಪತಿ ಡಾ. ಹೆಚ್.ಬಸವನಗೌಡಪ್ಪ, ಡಾ. ಸುನೀಲ್ ಅತ್ತಾವರ್, ಕುಲಸಚಿವ ಡಾ. ಬಿ. ಮಂಜುನಾಥ್, ಪ್ರಿನ್ಸಿಪಾಲ್ ಡಾ. ಎಂ.ಆರ್. ದಾಕ್ಷಾಯಿಣಿ, ಡಾ. ಎಸ್. ಮೀನಾಕ್ಷಿ, ಸ್ಥಳ: ಜೆಎಸ್‌ಎಸ್ ಡೆಂಟಲ್ ಕಾಲೇಜು ಆವರಣ, ಮಧ್ಯಾಹ್ನ 3ಕ್ಕೆ.
- **ಮೈಸೂರು ಬೊಂಬೆ ರಂಗ ಮಂದಿರ :** ಮೈಸೂರು ಬೊಂಬೆ ಪ್ರದರ್ಶನ, ಸ್ಥಳ: ಮೈಸೂರು ಪಪ್ಪೆಟ್ ಥಿಯೇಟರ್, ಮೃಗಾಲಯದ ಎದುರು, ಸಂಜೆ 4.30 ರಿಂದ.
- **ಪ್ಯಾರಾ ಥ್ರೋಬಾಲ್ ಫೆಡರೇಷನ್ ಆಫ್ ಇಂಡಿಯಾ :** 5ನೇ ರಾಜ್ಯ ಮಟ್ಟದ ದಸರಾ ಒಡೆಯರ್ ಕಪ್ ಥ್ರೋಬಾಲ್ ಪಂದ್ಯಾವಳಿ, ಉದ್ಘಾಟನೆ : ಸೆಂಟ್ ಫಿಲೋಮಿನಾ ಕಾಲೇಜಿನ ಡಾ. ಲೂರ್ದು ಪ್ರಸಾದ್ ಜೋಸೆಫ್, ಮುಖ್ಯ ಅತಿಥಿಗಳು : ಪಿಟಿಎಫ್‌ಐ ಗೌರವಾಧ್ಯಕ್ಷ ಎಂ. ಮಹದೇವು, ಲವ್ ಇಂಡಿಯಾ ಸಂಸ್ಥೆ ಸಂಸ್ಥಾಪಕ ಕೆ.ಸಿ. ಸಿಂಗ್, ಇನ್ನರ್‌ವ್ಹೀಲ್ ಕ್ಲಬ್ ಆಫ್ ಮೈಸೂರು ಗೋಲ್ಡ್ ಉಪಾಧ್ಯಕ್ಷ ಮಾಯ ತಲೆಜಾ, ರೋಟರಿ ಹೆರಿಟೇಜ್ ಚಾರ್ಟರ್ ಅಧ್ಯಕ್ಷ ಕೆ. ಮಂಜುನಾಥ್, ಅಧ್ಯಕ್ಷ ಜಿ.ಎಂ. ಸುರೇಶ್, ಪ್ರಧಾನ ಕಾರ್ಯದರ್ಶಿ ಡಾ. ಆರ್. ಮಂಜುನಾಥ್, ಅಧ್ಯಕ್ಷ ದೇವರಾಜು, ಉಪಾಧ್ಯಕ್ಷ ಬಸವರಾಜು, ಕಾರ್ಯದರ್ಶಿ ಎಂ. ಪ್ರಭುಸ್ವಾಮಿ, ಸ್ಥಳ: ಸೆಂಟ್ ಫಿಲೋಮಿನಾ ಕಾಲೇಜು ಒಳಾಂಗಣ ಕ್ರೀಡಾಂಗಣ, ಬನ್ನಿಮಂಟಪ, ಬೆಳಗ್ಗೆ 9ಕ್ಕೆ.
- **ಕರ್ನಾಟಕ ಸೈಕಲ್ ಪೋಲೋ ಅಸೋಸಿಯೇಷನ್ :** ರಾಜ್ಯ ಮಟ್ಟದ ದಸರಾ ಕ್ರೀಡಾಕೂಟ, ಅಧ್ಯಕ್ಷತೆ: ಶಾಸಕ ಕೆ.ಹರೀಶ್‌ಗೌಡ, ಮುಖ್ಯ ಅತಿಥಿಗಳು: ಎನ್.ಆರ್.ಮಂಜುನಾಥ್, ಕು. ಎಸ್.ಎಂ. ಶಾನ್ವಿ, ಭಾಸ್ಕರ್‌ನಾಯಕ್, ಡಾ.ವೆಂಕಟೇಶ್, ಅರುಣ್‌ಕುಮಾರ್ ಹೆಚ್. ಪಾಟೀಲ್, ಡಾ.ವಿಜಯಲಕ್ಷ್ಮಿ ಎ. ಪಾಟೀಲ್, ಸ್ಥಳ: ಗೌತಮ್ ಹಾಸ್ಟೆಲ್ ಗ್ರೌಂಡ್, ಸರಸ್ವತಿಪುರಂ, ಬೆಳಗ್ಗೆ 10.30ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಹೆಣ್ಣು ಮನಸು ಮಾಡಿದರೆ ಸಾಧಕ ಮಹಿಳೆಯರ ಪರಿಚಯ ಮಾಲಿಕೆ, ಪ್ರಸ್ತುತಿ: ಪ್ರೊ.ಸಿ. ನಾಗಣ್ಣ, ನಿರ್ಮಾಣ–ಜಿ. ಶಾಂತಕುಮಾರ್, 6.40 ದಸರಾದಲ್ಲಿ ಇಂದು ಮತ್ತು ನಾಳೆ ನಂತರ ಮೈಸೂರು ದಸರಾ ಕಾರ್ಯಕ್ರಮ. ಪ್ರಸ್ತುತಿ– ಶ್ರೀಮಾನ್ .ಎಸ್., 6.50 ರೈತರಿಗೆ ಸಲಹೆ, 7.15 ಹಸಿರು ಹೊನ್ನು, 8.30 ಕನ್ನಡ ಚಿತ್ರಗೀತೆಗಳು, 9.00 ಚಿತ್ರಗೀತೆಗಳು, 9.30 ಮೈಸೂರು ಬ್ರಾಂಡ ದಸರಾ ಸಂದರ್ಭದಲ್ಲಿ ವಿಶೇಷ ಕಾರ್ಯಕ್ರಮ, ಪ್ರಸ್ತುತಿ : ಡಾ.ಮೈಸೂರು ಉಮೇಶ್, 9.40 ಮೈಸೂರು ಸಂಸ್ಥಾನದ ಕಲಾ ಪರಂಪರ ದಸರಾ ಸಂದರ್ಭದಲ್ಲಿ ವಿಶೇಷ ಕಾರ್ಯಕ್ರಮ, ಸಾಹಿತ್ಯ: ಡಾ.ಜ್ಯೋತಿಶಂಕರ್, ಪರಿಕಲ್ಪನೆ ಹಾಗೂ ಪ್ರಸ್ತುತಿ: ಹೆಚ್.ಎಲ್.ಶಿವಶಂಕರಸ್ವಾಮಿ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಕಾಡಿನಲ್ಲಿನ ಕಥೆಗಳು, ಪ್ರಸ್ತುತಿ : ಜಿ. ಶಾಂತಕುಮಾರ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಚಿತ್ರಗೀತೆಗಳು, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಕನ್ನಡ ಚಿತ್ರಗೀತೆಗಳು, 3.00 ಹಿಂದಿ ಚಿತ್ರಗೀತೆಗಳು, 4.00 ಜನಪದ ಸಂಗೀತ, 4.30 ಕನ್ನಡ ಭಾರತಿ, 6.50 ಕೃಷಿರಂಗ–ಜೇನು ಸಾಕಾಣಿಕೆ ಕುರಿತು ಸಂವಾದ, ಭಾಗವಹಿಸುತ್ತಾರೆ–ಮಂಡ್ಯ ತಾಲೂಕು, ಮಾರುಗೌಡನ ಹಳ್ಳಿಯ ಕೃಷಿಕ ದಂಪತಿ ಎಂ.ಸಿ. ಕಾಂತರಾಜು ಮತ್ತು ಹೆಚ್.ಬಿ. ಸುಧಾ, ಪ್ರಸ್ತುತಿ–ಎನ್. ಕೇಶವ ಮೂರ್ತಿ, 7.45 ಕನ್ನಡ ಚಿತ್ರಗೀತೆಗಳು, 8.00 ಯುವವಾಣಿ– ಜಯ ಸಂವರ್ಧಿನಿ– ಶ್ರೀ ಜಯಚಾಮರಾಜ ಒಡೆಯರ್ ಅವರ ಕೃತಿಗಳ ಕುರಿತ ಕಾರ್ಯಕ್ರಮ, ನಡೆಸಿಕೊಡುತ್ತಾರೆ–ಮೈಸೂರಿನ ಸವಿಗಾನ ಸಂಗೀತ ಶಾಲೆಯ ವಿದ್ಯಾರ್ಥಿಗಳು, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, 10.00 ನಾಟಕ–ಅತಿಥಿ



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 25 ಗುರುವಾರ 2025


ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 159 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

₹4



ಎಸ್.ಎಲ್.ಭೈರಪ್ಪ ಇನ್ನಿಲ್ಲ



ಎಸ್.ಎಲ್.ಭೈರಪ್ಪ [20.08.1931 – 24.09.2025]

ಬೆಂಗಳೂರು,ಸೆ.24–ಸರಸ್ವತಿ ಸಮ್ಮಾನ್ ಪುರಸ್ಕೃತ ಸಾಹಿತಿ ಸಂತೇಶಿವರ ಲಿಂಗಣ್ಣಯ್ಯ ಭೈರಪ್ಪ (ಎಸ್.ಎಲ್.ಭೈರಪ್ಪ) ನಿಧನರಾಗಿದ್ದಾರೆ. ಬೆಂಗಳೂರಿನ ರಾಜರಾಜೇಶ್ವರಿನಗರದಲ್ಲಿನ ರಾಷ್ಟ್ರೋತ್ಥಾನ ಆಸ್ಪತ್ರೆಯಲ್ಲಿ ಭೈರಪ್ಪನವರು (94) ಹೃದಯಸ್ತಂಭನದಿಂದ ಇಂದು ಮಧ್ಯಾಹ್ನ 2.38ಕ್ಕೆ ನಿಧನರಾದರು.

ಮೈಸೂರು ಕುವೆಂಪುನಗರದ ಉದಯರವಿ ರಸ್ತೆಯಲ್ಲಿ ನೆಲೆಸಿದ್ದ ಅವರನ್ನು 6 ತಿಂಗಳ ಹಿಂದೆ ಅನಾರೋಗ್ಯ ಕಾರಣ ಬೆಂಗಳೂರಿನ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಿಸಲಾಗಿತ್ತು. ಭೈರಪ್ಪ ಅವರು ಪತ್ನಿ ಸರಸ್ವತಿ, ಪುತ್ರರಾದ ರವಿಶಂಕರ್, ಉದಯಶಂಕರ್ ಹಾಗೂ ಅಪಾರ ಓದುಗರು, ಅಭಿಮಾನಿಗಳನ್ನು ಅಗಲಿದ್ದಾರೆ

ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲೂಕಿನ ಸಂತೇಶಿವರ ಗ್ರಾಮದಲ್ಲಿ 1931, ಆಗಸ್ಟ್ 20ರಂದು ಲಿಂಗಣ್ಣಯ್ಯ–ಗೌರಮ್ಮ ದಂಪತಿ ಪುತ್ರರಾಗಿ ಜನಿಸಿದ ಅವರು, ಬಾಗೂರು, ನುಗ್ಗೇಹಳ್ಳಿ ಶಾಲೆಗಳಲ್ಲಿ ಪ್ರಾಥಮಿಕ, ಮೈಸೂರಿನ ಶಾರದಾವಿಲಾಸದಲ್ಲಿ ಪ್ರೌಢಶಾಲಾ ಶಿಕ್ಷಣ ಪಡೆದರು. ಮಹಾರಾಜ ಕಾಲೇಜಿನಲ್ಲಿ ಬಿ.ಎ ಹಾಗೂ ಮೈಸೂರು ವಿಶ್ವವಿದ್ಯಾಲಯದಲ್ಲಿ ಎರಡು ಚಿನ್ನದ ಪದಕಗಳೊಂದಿಗೆ ತತ್ವಶಾಸ್ತ್ರದಲ್ಲಿ ▶ 10ನೇ ಪುಟಕ್ಕೆ

“ ಎಸ್.ಎಲ್.ಭೈರಪ್ಪ ದೇಶದ ಆತ್ಮಸಾಕ್ಷಿಯನ್ನು ಕದಲಿಸಿದ ಮತ್ತು ಭಾರತದ ಆತ್ಮವನ್ನು ಆಳವಾಗಿ ಅಧ್ಯಯನ ಮಾಡಿದ ಅತ್ಯುನ್ನತ ನಾಯಕ. ಭಾರತೀಯ ಸಾಹಿತ್ಯಕ್ಕೆ, ವಿಶೇಷವಾಗಿ ಕನ್ನಡದಲ್ಲಿ ಭೈರಪ್ಪ ಅವರ ಕೊಡುಗೆಗಳು ರಾಷ್ಟ್ರದ ಬೌದ್ಧಿಕ ಮತ್ತು ಸಾಂಸ್ಕೃತಿಕ ಕ್ಷೇತ್ರದ ಮೇಲೆ ಅಳಿಸಲಾಗದ ಗುರುತನ್ನು ಹೊಂದಿವೆ. ಇತಿಹಾಸ, ತತ್ವಶಾಸ್ತ್ರ ಮತ್ತು ಸಾಮಾಜಿಕ ವಿಷಯಗಳಲ್ಲಿ ಅವರ ನಿರ್ಭೀತ ತೊಡಗಿಸಿಕೊಳ್ಳುವಿಕೆ ತಲೆಮಾರುಗಳು ಮತ್ತು ಭೌಗೋಳಿಕ ಮೆಚ್ಚುಗೆ ಗಳಿಸಿವೆ. ಭಾರತದ ಆತ್ಮವನ್ನು ಆಳವಾಗಿ ಅಧ್ಯಯನ ಮಾಡಿದ ಒಬ್ಬ ಮಹಾನ್ ಧೀಮಂತ ವ್ಯಕ್ತಿಯನ್ನು ನಾವು ಕಳೆದುಕೊಂಡಿದ್ದೇವೆ. ನಿರ್ಭೀತ ಮತ್ತು ಕಾಲಾತೀತ ಚಿಂತಕರಾಗಿದ್ದ ಅವರು ತಮ್ಮ ಚಿಂತನಶೀಲ ಕೃತಿಗಳಿಂದ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದರು. ನಮ್ಮ ಇತಿಹಾಸ ಮತ್ತು ಸಂಸ್ಕೃತಿಯ ಬಗ್ಗೆ ಅವರ ಅಚಲವಾದ ಉತ್ಸಾಹ ಮುಂಬರುವ ವರ್ಷಗಳಲ್ಲಿ ಮನಸ್ಸುಗಳನ್ನು ಪ್ರೇರೇಪಿಸುತ್ತಲೇ ಇರುತ್ತದೆ. ಈ ದುಃಖದ ಸಮಯದಲ್ಲಿ ಅವರ ಕುಟುಂಬ ಮತ್ತು ಅಭಿಮಾನಿಗಳಿಗೆ ನನ್ನ ಸಂತಾಪಗಳು.



–ನರೇಂದ್ರ ಮೋದಿ, ಪ್ರಧಾನಮಂತ್ರಿ.

“ ಸಾಹಿತ್ಯ, ತತ್ವಶಾಸ್ತ್ರ, ಸಂಸ್ಕೃತಿ ಹಾಗೂ ಬೌದ್ಧಿಕ ವಲಯಕ್ಕೆ ಕಾದಂಬರಿಕಾರ ಎಸ್.ಎಲ್.ಭೈರಪ್ಪ ಅವರು ಗಮನಾರ್ಹ ಕೊಡುಗೆ ನೀಡಿದ್ದಾರೆ. ತಮ್ಮ ಕೃತಿಗಳ ಮೂಲಕ ಕನ್ನಡ ಸಾಹಿತ್ಯವನ್ನು ಜಾಗತಿಕ ಮಟ್ಟದಲ್ಲೂ ಪ್ರಸಿದ್ಧಿಗೆ ತಂದಿದ್ದರು. ಕನ್ನಡ ಸಾಹಿತ್ಯ ಲೋಕದ ಶ್ರೇಷ್ಠ ವ್ಯಕ್ತಿಯ ನಿಧನದಿಂದ ತೀವ್ರ ದುಃಖವಾಗಿದೆ. ಅವರ ಕೊಡುಗೆ ಭವಿಷ್ಯದ ಪೀಳಿಗೆಗೆ ಸ್ಫೂರ್ತಿ ನೀಡಲಿದೆ. –ರಾಷ್ಟ್ರಪತಿ ದ್ರೌಪದಿ ಮುರ್ಮು



ಸರ್ಕಾರಿ ಗೌರವದೊಂದಿಗೆ ನಾಳೆ ಅಂತ್ಯಕ್ರಿಯೆ

ರಾಜ್ಯ ಸರ್ಕಾರ, ಸಕಲ ಸರ್ಕಾರಿ ಗೌರವಗಳೊಂದಿಗೆ ಭೈರಪ್ಪ ಅವರ ಅಂತ್ಯಕ್ರಿಯೆ ನಡೆಸಲು ನಿರ್ಧರಿಸಿದೆ. ಅವರಿಗೆ ಸರ್ಕಾರಿ ಸಕಲ ಗೌರವಗಳೊಂದಿಗೆ ಅಂತ್ಯಕ್ರಿಯೆ ನಡೆಸಲು ರಾಜ್ಯಪಾಲರ ಆಜ್ಞಾನುಸಾರ ಸರ್ಕಾರ ಆದೇಶ ಹೊರಡಿಸಿದೆ.

ಅಂತಿಮ ದರ್ಶನಕ್ಕೆ ವ್ಯವಸ್ಥೆ

ಹಿರಿಯ ಸಾಹಿತಿ ಡಾ.ಎಸ್.ಎಲ್.ಭೈರಪ್ಪನವರ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ. ನಾಳೆ (ಸೆ.25ರ ಗುರುವಾರ) ಬೆಳಗ್ಗೆ 8.30ರಿಂದ ಮಧ್ಯಾಹ್ನ 12.30ರವರೆಗೆ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದ ಆವರಣದಲ್ಲಿ ಅಂತಿಮ ದರ್ಶನ ಪಡೆಯಬಹುದು. ಆ ಬಳಿಕ ಅವರ ಪಾರ್ಥಿವ ಶರೀರವನ್ನು ಮೈಸೂರಿಗೆ ತರಲಾಗುತ್ತದೆ.

ನಂತರ ಇಲ್ಲಿಯೂ ಮಧ್ಯಾಹ್ನ 3ರಿಂದ ಸಂಜೆ 6ರವರೆಗೆ ಮೈಸೂರಿನ ಕಲಾಮಂದಿರ ಆವರಣದಲ್ಲಿ ಭೈರಪ್ಪನವರ ಪಾರ್ಥಿವ ಶರೀರದ ಅಂತಿಮ ದರ್ಶನಕ್ಕೆ ಅವಕಾಶ ಕಲ್ಪಿಸಲಾಗುತ್ತಿದೆ. ಸೆ.26ರ ಶುಕ್ರವಾರ ಬೆಳಗ್ಗೆ 8.30ರಿಂದ ಮೈಸೂರಿನ ಕುವೆಂಪುನಗರದಲ್ಲಿರುವ ಭೈರಪ್ಪರ ನಿವಾಸದ ಆವರಣದಲ್ಲಿಯೂ ಅವರ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆಯಬಹುದು. ಬಳಿಕ ಬೆಳಗ್ಗೆ 11ಕ್ಕೆ ಚಾಮುಂಡಿ ಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆಯು ಸರ್ಕಾರಿ ಗೌರವದೊಂದಿಗೆ ನೆರವೇರಲಿದೆ ಎಂದು ಪ್ರಕಟಣೆ ತಿಳಿಸಿದೆ.

ಕಾದಂಬರಿಗಳು...

ಭೀಮಕಾಯ, ಬೆಳಕು ಮೂಡಿತು, ಧರ್ಮಶ್ರೀ, ದೂರ ಸರಿದರು, ಮತದಾನ, ವಂಶವೃಕ್ಷ, ಜಲಪಾತ, ನಾಯಿ ನೆರಳು, ತಬ್ಬಲಿಯು ನೀನಾದೆ ಮಗನೆ, ಗೃಹಭಂಗ, ನಿರಾಕರಣ, ಗ್ರಹಣ, ದಾಟು, ಅನ್ವೇಷಣ, ಪರ್ವ, ನೆಲೆ, ಸಾಕ್ಷಿ, ಅಂಚು, ತಂತು, ಸಾರ್ಥ, ಮಂದ್ರ, ಆವರಣ, ಕವಲು, ಯಾನ, ಉತ್ತರಕಾಂಡ.

ಆತ್ಮ ಚರಿತ್ರೆ: ಭಿತ್ತಿ, **ತತ್ವಶಾಸ್ತ್ರ:** ಸತ್ಯ ಮತ್ತು ಸೌಂದರ್ಯ–ಪಿ.ಎಚ್.ಡಿ ಪ್ರಬಂಧ, ಕಥೆ ಮತ್ತು ಕಥಾವಸ್ತು, **ಸಂದರ್ಭ:** ಸಂವಾದ. **ಇತರೆ:** ನಾನೇಕೆ ಬರೆಯುತ್ತೇನೆ?

ಅನುವಾದವಾದವು...

ಧರ್ಮಶ್ರೀ–ಸಂಸ್ಕೃತ, ಮರಾಠಿ, ವಂಶವೃಕ್ಷ–ತೆಲುಗು, ಮರಾಠಿ, ಹಿಂದಿ, ಉರ್ದು, ಇಂಗ್ಲೀಷ್, ನಾಯಿ ನೆರಳು –ಗುಜರಾತಿ, ಹಿಂದಿ, ತಬ್ಬಲಿಯು ನೀನಾದೆ ಮಗನೆ–ಹಿಂದಿ, ಗೃಹಭಂಗ–ಭಾರತದ 14 ಭಾಷೆಗಳಿಗೆ ಅನುವಾದವಾಗಿದೆ, ನಿರಾಕರಣ–ಹಿಂದಿ, ದಾಟು–ಇಂಗ್ಲೀಷ್, ಭಾರತದ 14 ಭಾಷೆಗಳಿಗೆ ಅನುವಾದವಾಗಿದೆ. ಅನ್ವೇಷಣ–ಹಿಂದಿ,ಮರಾಠಿ, ಪರ್ವ–ಹಿಂದಿ, ಮರಾಠಿ, ಇಂಗ್ಲೀಷ್, ತೆಲುಗು, ಬೆಂಗಾಲಿ, ತಮಿಳು, ನೆಲೆ–ಹಿಂದಿ, ಸಾಕ್ಷಿ–ಹಿಂದಿ, ಇಂಗ್ಲೀಷ್, ಅಂಚು –ಹಿಂದಿ, ಮರಾಠಿ, ತಂತು–ಹಿಂದಿ, ಮರಾಠಿ, ಸಾರ್ಥ–ಹಿಂದಿ, ಮರಾಠಿ, ಇಂಗ್ಲೀಷ್, ಸಂಸ್ಕೃತ, ನಾನೇಕೆ ಬರೆಯುತ್ತೇನೆ–ಮರಾಠಿ, ಸತ್ಯ ಮತ್ತು ಸೌಂದರ್ಯ –ಇಂಗ್ಲೀಷ್, ಭಿತ್ತಿ–ಹಿಂದಿ, ಮರಾಠಿ

ಚಲನಚಿತ್ರವಾದವು...

ವಂಶವೃಕ್ಷ, ತಬ್ಬಲಿಯು ನೀನಾದೆ ಮಗನೆ, ಮತದಾನ, ನಾಯಿ ನೆರಳು. **ಧಾರಾವಾಹಿ:** ಗೃಹಭಂಗ, ದಾಟು (ಹಿಂದಿ)

ಪ್ರಶಸ್ತಿ/ಗೌರವಗಳು...

ಪದ್ಮಭೂಷಣ, ಡಾ.ಬೆಟಗೇರಿ ಕೃಷ್ಣ ಶರ್ಮ, ನಾಡೋಜ, ಸರಸ್ವತಿ ಸಮ್ಮಾನ್, ಪಂಪ, ಎನ್‌ಟಿಆರ್, ಗುಲಬರ್ಗಾ ವಿವಿಯ ಗೌರವ ಡಾಕ್ಟರೇಟು, ಕೇಂದ್ರ ಸಾಹಿತ್ಯ ಅಕಾಡೆಮಿ, ಕನ್ನಡ ಸಾಹಿತ್ಯ ಅಕಾಡೆಮಿ, ವಾಗ್ವಿಲಾಸಿನಿ ಪುರಸ್ಕಾರ್, ರಾಷ್ಟ್ರೀಯ ಪ್ರಾಧ್ಯಾಪಕ, ಸಾಹಿತ್ಯ ಅಕಾಡೆಮಿ ಫೆಲೋಶಿಪ್ ಇತ್ಯಾದಿ.

ನಕ್ಕರೆ ಅದೇ ಸ್ವರ್ಗ

ವೈದ್ಯರು : ನೋಡಿ ಅಮ್ಮ... ನಿಮ್ಮ ಗಾಯಕ್ಕೆ 10 ಹೊಲಿಗೆಗಳನ್ನು ಹಾಕಬೇಕಾಗುತ್ತದೆ.

ರೋಗಿ : ಹಾಗಾದ್ರೆ... ನನ್ನ ಸೀರೆಗೂ ಹಾಕಿ ಡಾಕ್ಟರೇ, ಸ್ವಲ್ಪ ಹರಿದು ಹೋಗಿದೆ ಆದರೆ, ಹೊಲಿಗೆ ವಿನ್ಯಾಸ ಚೆನ್ನಾಗಿರಬೇಕು.

ಮೈಸೂರು ಮಿತ್ರ

ಗುರುವಾರ, 25 ಸೆಪ್ಟೆಂಬರ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ......

ಈ ಬದುಕೇ ಹೀಗೆ...ಅದಲು ಬದಲಿಗೆ ಮುನ್ನುಡಿ...!
ಶಾಲೆಯ ಬದುಕಿನಲ್ಲಿ ಪಾಠಗಳಿಂದ ಪರೀಕ್ಷೆ
ಬದುಕಿನ ಶಾಲೆಯಲ್ಲಿ ಪರೀಕ್ಷೆಗಳಿಂದ ಪಾಠ...!!

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಅಕ್ಕಿ ಮೇಲೆ ಆಸೆ
ನೆಂಟರ ಮೇಲೆ ಇಷ್ಟ

ನಿಮ್ಮ ಪತ್ರಗಳು

ನಾಡಗೀತೆಯಲ್ಲಿ ಬೌದ್ಧರುದ್ಯಾನ ಸೇರ್ಪಡೆಯಾಗಲಿ

ಮಾನ್ಯರೆ,

ಕುವೆಂಪು ಅವರು ನಾಡಗೀತೆ ಜೈ ಭಾರತ ಜನನಿಯ ತನುಜಾತೆ ಜಯ ಹೇ ಕರ್ನಾಟಕ ಮಾತೆ ಎಂಬ ಗೀತೆಯನ್ನು 1924ರಲ್ಲಿ ರಚಿಸಿದ್ದರು. ಕನ್ನಡ ಸಾಹಿತ್ಯ ಪರಿಷತ್ತು ಕುವೆಂಪು ಅವರು ಬರೆದ ಈ ಗೀತೆಯನ್ನು 1971ರಲ್ಲಿ ನಾಡಗೀತೆಯಾಗಿ ಸ್ವೀಕರಿಸಿತು. ನಂತರ ಕೆಲ ವರ್ಷಗಳ ಹಿಂದೆ ಕರ್ನಾಟಕ ಸರ್ಕಾರ ನಾಡಗೀತೆಯ ಅವಧಿಯನ್ನು 2:30 ನಿಮಿಷಕ್ಕೆ ಸೀಮಿತಗೊಳಿಸಿ ನಾಡಗೀತೆಯಾಗಿ ಘೋಷಿಸಿ ಎಲ್ಲಾ ಕಾರ್ಯಕ್ರಮಗಳ ಆರಂಭಕ್ಕೂ ಮುನ್ನ ನಾಡಗೀತೆಯನ್ನು ಹಾಡುವುದನ್ನು ಕಡ್ಡಾಯಗೊಳಿಸಿರುವುದು ನಿಜಕ್ಕೂ ಕನ್ನಡಿಗರಾದ ನಮ್ಮೆಲ್ಲರಿಗೂ ಹೆಮ್ಮೆಯ ವಿಚಾರ. ಅಂತಹ ನಾಡಗೀತೆಗೆ 100 ವರ್ಷ ತುಂಬುತ್ತಿರುವ ಈ ಹೊತ್ತಿನಲ್ಲಿ "ಬೌದ್ಧರುದ್ಯಾನ" ಎಂಬ ಸಾಲು ನಾಡಗೀತೆಯಲ್ಲಿ ಸೇರ್ಪಡೆ ಆಗಲಿ ಎಂಬುದು ನನ್ನಂತಹ ಸಾಕಷ್ಟು ಜನರ ಅಭಿಪ್ರಾಯ. ನಮ್ಮ ನಾಡಗೀತೆಯಲ್ಲಿ ಬೌದ್ಧರುದ್ಯಾನ ಎಂಬುದನ್ನು ಸೇರ್ಪಡೆ ಮಾಡಬೇಕೆಂಬುದು ಬಹುಜನರ ಬಹು ದಿನಗಳ ಬೇಡಿಕೆಯಾಗಿದೆ. ಅದಕ್ಕೆ ಸರ್ಕಾರ ನಾಡಗೀತೆಗೆ ನೂರು ತುಂಬುತ್ತಿರುವ ಈ ಹೊತ್ತಿನಲ್ಲಾದರೂ ಪ್ರಮುಖ ಆದ್ಯತೆ ಕೊಟ್ಟು ರಾಷ್ಟ್ರಕವಿ ಕುವೆಂಪು ಅವರ ವಿರಚಿತ ನಾಡಗೀತೆಯಲ್ಲಿ ಬೌದ್ಧರುದ್ಯಾನ ಎಂಬ ಸಾಲುಗಳನ್ನು ಸೇರ್ಪಡೆ ಮಾಡಿದರೆ ನಾಡಗೀತೆಗೆ ಮತ್ತಷ್ಟು ಗೌರವ ಸಿಕ್ಕಂತಾಗುತ್ತದೆ ಎಂಬುದು ಎಲ್ಲರ ಅಭಿಪ್ರಾಯ.

ಇಡೀ ಜಗತ್ತಿಗೆ ಶಾಂತಿ, ಸಮಾನತೆ, ಕರುಣೆ, ಮೈತ್ರಿಯನ್ನು ಸಾರಿದ ಭಗವಾನ್ ಬುದ್ಧರ ಬೌದ್ಧ ಧಮ್ಮದ ಆಶಯವೇ ಜಗತ್ತು ಶಾಂತಿಯಿಂದ ಇರಬೇಕು ಎಂಬುದಾಗಿತ್ತು. ಇದು ನಾಡಗೀತೆ ಬರೆದ ಕುವೆಂಪು ಅವರ ಆಶಯವು ಸಹ ಆಗಿದ್ದು, ನಾಡು "ಸರ್ವ ಜನಾಂಗದ ಶಾಂತಿಯ ತೋಟವಾಗಬೇಕೆಂದು" ಬಯಸಿಯೇ ಕುವೆಂಪು ಅವರು ಅವರ ಆತ್ಮಕಥೆಯಾದ ನೆನಪಿನ ದೋಣಿಯಲಿ ಕೃತಿಯಲ್ಲಿ ಬೌದ್ಧರುದ್ಯಾನ ಎಂಬ ಸಾಲುಗಳನ್ನು ಉಲ್ಲೇಖಿಸಿದ್ದು, ಇಂತಹ ಸಾಲುಗಳು ಪ್ರಸ್ತುತ ಇರುವ ನಮ್ಮ ನಾಡಗೀತೆಯಲ್ಲಿ ಇಲ್ಲದಿರುವುದರಿಂದ ಕುವೆಂಪು ಅವರ ಆಶಯಕ್ಕೆ ಧಕ್ಕೆಯನ್ನುಂಟು ಮಾಡಿದಂತಾಗುವುದಿಲ್ಲವೇ...? ಹಾಗಾಗಿ ಮೂಲಕೃತಿಯಲ್ಲಿ ಇರುವ ಬೌದ್ಧರುದ್ಯಾನ ಎಂಬ ಸಾಲುಗಳನ್ನು ನಾಡಗೀತೆಯಲ್ಲಿ ಸೇರಿಸುವ ಮೂಲಕ ಬಹುಜನರ ಬಹುದಿನಗಳ ಬೇಡಿಕೆಯನ್ನು ಸರ್ಕಾರ ಈಡೇರಿಸುವಂತಾಗಲಿ. ಹಾಗೆಯೇ ಆ ಮೂಲಕ ನಾಡಗೀತೆಗೆ ನೂರು ವರ್ಷ ತುಂಬಿದ ಹರ್ಷದ ಕ್ಷಣಗಳನ್ನ ಮತ್ತಷ್ಟು ಹೆಚ್ಚಿಸುವಂತಾಗಲಿ ಎಂಬುದು ನಾಡಿನ ಜನರ ಆಶಯ.

–ಅಪುರಾ, ಅಗತಗೌಡನಹಳ್ಳಿ, ಗುಂಡ್ಲುಪೇಟೆ ತಾಲೂಕು

ಪಳೆಯುಳಿಕೆಯಾಗಿರುವ ಹರಿಕಥೆಗಳು !

ಮಾನ್ಯರೆ,

ಒಂದು ಕಾಲದಲ್ಲಿ ರಾಜ್ಯಾದ್ಯಂತ ಹೆಸರುವಾಸಿಯಾಗಿದ್ದ ಹರಿಕಥೆಗಳು ಇತ್ತೀಚಿನ ದಶಕಗಳಲ್ಲಿ ಸಂಪೂರ್ಣವಾಗಿ ನಶಿಸಿ ಹೋಗಿರುವುದು ಬೇಸರದ ಸಂಗತಿಯಾಗಿದೆ. ರಾಜ್ಯಾದ್ಯಂತ ಅಷ್ಟೇ ಏಕೇ ದೇಶಾದ್ಯಂತ ಹೆಸರು ಗಳಿಸಿದ್ದ ಸುಪ್ರಸಿದ್ಧ ಹರಿಕಥಾ ವಿದ್ವಾನ್ ಕೀರ್ತಿ ಶೇಷ ಗುರುರಾಜುಲು ನಾಯ್ಡು, ಸಂತ ಭದ್ರಗಿರಿ ಅಚ್ಯುತದಾಸರು, ಭದ್ರಗಿರಿ ಕೇಶವದಾಸ್ ಮುಂತಾದ ಹರಿಕಥಾ ವಿದ್ವಾಂಸರ ಹರಿಕಥೆಗಳ ಶ್ರಾವಣ ಕಿವಿಗಳಿಗೆ ಪಾವನವಾಗಿದ್ದು, ಮನಸ್ಸಿಗೂ ಸಹ ಶಾಂತಿ ಮತ್ತು ನೆಮ್ಮದಿಯನ್ನು ನೀಡುತ್ತಿದ್ದವು. ಆದರೆ ಕಾಲಕ್ರಮೇಣ ಹರಿಕಥೆಗಳನ್ನು ಕೇಳುವವರ ಸಂಖ್ಯೆ ಕಡಿಮೆಯಾಗುತ್ತಾ ಬಂದ ಹಾಗೆ, ಹರಿಕಥೆಗಳು ಜನರ ಸ್ಮೃತಿಪಟಲದಿಂದಲೇ ಮರೆಯಾಗಿರುವುದು ವಿಷಾದಕರ ಸಂಗತಿಯಾಗಿದೆ. ದಿವಂಗತ ಗುರುರಾಜುಲು ನಾಯ್ಡುರವರ ಮಗಳು ಈಗಲೂ ಹರಿಕಥೆಗಳನ್ನು ನಡೆಸಿಕೊಡುತ್ತಾರೆ ಎಂಬುದಾಗಿ ಕೇಳಿದ್ದೇನೆ. ಅದೇ ರೀತಿ ಎಲೆ ಮರೆಯ ಕಾಯಿಗಳಂತಿರುವ ಅನೇಕ ಹರಿಕಥಾ ವಿದ್ವಾಂಸರನ್ನು ಅಲ್ಲಲ್ಲಿ ಕಾಣಸಿಗಬಹುದು.

ಇಂದಿನ ಡಿಜಿಟಲ್ ಯುಗದಲ್ಲಿ ಹರಿಕಥೆಗಳನ್ನು ಕೇಳುವವರೇ ಇಲ್ಲವಾಗಿದೆ. ಬಹಳ ವರ್ಷಗಳ ಹಿಂದೆ ರಾಮೋತ್ಸವ, ಗಣಪತಿಯ ಪ್ರತಿಷ್ಠಾಪನೆ ಹಾಗೂ ಇನ್ನಿತರೆ ಧಾರ್ಮಿಕ ಕಾರ್ಯಕ್ರಮಗಳ ಸಂದರ್ಭಗಳಲ್ಲಿ ಹರಿಕಥೆಗಳನ್ನು ಏರ್ಪಡಿಸಲಾಗುತ್ತಿತ್ತು. ದುರದೃಷ್ಟವಶಾತ್, ಹರಿಕಥೆಗಳು ಈಗ ಪಳೆಯುಳಿಕೆಗಳಾಗಿ ಪರಿವರ್ತನೆಗೊಂಡಿದೆ. ಭಾರತೀಯ ಸನಾತನ ಧರ್ಮದ ಪ್ರಮುಖ ಬೇರುಗಳಲ್ಲಿ ಒಂದಾಗಿರುವ ಈ ವಿಶಿಷ್ಟ ಕಲೆಯು ನಶಿಸಿಹೋಗದಂತೆ, ರಕ್ಷಣಾ ಕ್ರಮಗಳನ್ನು ತೆಗೆದುಕೊಳ್ಳುವ ಮೂಲಕ ಸರ್ಕಾರ ಹರಿಕಥೆಗಳಿಗೆ ಪ್ರೋತ್ಸಾಹ ನೀಡಬೇಕಾಗಿದೆ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಸುರಕ್ಷತೆ ಬಗ್ಗೆಯೂ ಗಮನ ಹರಿಸುವುದು ಸೂಕ್ತ

ಮಾನ್ಯರೇ,

ಈ ವರ್ಷದ ನಾಡಹಬ್ಬ ದಸರಾ ವಿಧ್ಯುಕ್ತವಾಗಿ ಉದ್ಘಾಟನೆಯಾಗಿದ್ದು, ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ವತಿಯಿಂದ ನಗರದ 136 ಕಿ.ಮೀ. ವ್ಯಾಪ್ತಿಯ ರಸ್ತೆಗಳು ಮತ್ತು 118 ವೃತ್ತಗಳಲ್ಲಿ ವಿಶೇಷ ದೀಪಾಲಂಕಾರ ಮಾಡಲಾಗಿದೆ. ಈ ವಿದ್ಯುತ್ ದೀಪಗಳ ಅಲಂಕಾರ ಮೈಸೂರಿನ ಸೌಂದರ್ಯವನ್ನು ಮತ್ತಷ್ಟು ಹೆಚ್ಚಿಸಿದೆ. ಆದರೆ, ಈ ಸಂಭ್ರಮದಲ್ಲಿ ನಾವು ನಮ್ಮ ಮತ್ತು ಇತರರ ಸುರಕ್ಷತೆಯ ಬಗ್ಗೆಯೂ ಗಮನ ಹರಿಸುವುದು ಮುಖ್ಯ. ದೀಪಾಲಂಕಾರವನ್ನು ನೋಡುವಾಗ ಸೆಲ್ಫಿ ತೆಗೆದುಕೊಳ್ಳುವುದು ಸಹಜ. ಆದರೆ, ರಸ್ತೆ ಮಧ್ಯೆ ನಿಂತು, ವಾಹನಗಳ ಸಂಚಾರಕ್ಕೆ ಅಡ್ಡಿಯಾಗುವಂತೆ ಸೆಲ್ಫಿ ತೆಗೆದುಕೊಳ್ಳುವುದು, ವಿದ್ಯುತ್ ಕಂಬಗಳ ಬಳಿ ಹೋಗಿ ಅವುಗಳನ್ನು ಮುಟ್ಟಿ ಫೋಟೋ ತೆಗೆಯುವಾಗ ಅನಾಹುತಗಳು ಸಂಭವವೇ ಹೆಚ್ಚು. ಹೀಗಾಗಿ, ದೀಪಾಲಂಕಾರವನ್ನು ಮುಟ್ಟದೆ ದೂರದಿಂದಲೇ ಅದರ ಸೌಂದರ್ಯವನ್ನು ಸವಿಯುವುದು ಒಳ್ಳೆಯದು.

ದೀಪಾಲಂಕಾರವನ್ನು ವೀಕ್ಷಿಸಲು ಹೆಚ್ಚಿನ ಸಂಖ್ಯೆಯಲ್ಲಿ ಜನ ಬರುವುದರಿಂದ ನೂಕುನುಗ್ಗಲು ಉಂಟಾಗಬಹುದು. ಜನಸಂದಣಿಯಲ್ಲಿ ತಮ್ಮ ವಸ್ತುಗಳು, ಮಕ್ಕಳನ್ನು ಜೋಪಾನವಾಗಿ ನೋಡಿಕೊಳ್ಳಬೇಕು. ಪೊಲೀಸ್ ಮತ್ತು ವಿದ್ಯುತ್ ಇಲಾಖೆಯ ಸಿಬ್ಬಂದಿಗಳ ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಶ್ರಮಿಸುತ್ತಿರುವುದರಿಂದ ಅವರ ಸಲಹೆ ಸೂಚನೆಗಳನ್ನು ತಪ್ಪದೇ ಪಾಲಿಸುವುದು ನಮ್ಮ ಕರ್ತವ್ಯ ಎಂಬುದನ್ನು ಅರಿಯಬೇಕಿದೆ.

–ಬಿ.ಗಣೇಶ, ಕೆ.ಜಿ.ಕೊಪ್ಪಲು, ಮೈಸೂರು

ಭೈರಪ್ಪನವರಿಗೆ 'ಆವರಣ'ದ ಸಹೋದರಿ ಬಾನು ಮುಷ್ತಾಕ್ ಭಾವಪೂರ್ಣ ನಮನ!

'ಆವರಣ' ಕಾದಂಬರಿಯ ಪೀಠಿಕೆಯಲ್ಲಿ ಹೆಸರು ಉಲ್ಲೇಖಿಸದ ಮುಸ್ಲಿಂ ಸಹೋದರಿಯೂ ಓರ್ವ ಪ್ರಸಿದ್ಧ ಸಾಹಿತಿ. ಭೈರಪ್ಪನವರ ಬರವಣಿಗೆಯಿಂದ ಬಾಲ್ಯದಿಂದಲೇ ಓದಿನ ರುಚಿ ಹತ್ತಿಸಿಕೊಂಡು, ಅವರ ಓದುಗ ಬಳಗದ ಲಾಯಲ್ ಸದಸ್ಯೆಯಾಗಿದ್ದವರು. ನಂತರದಲ್ಲಿ ಸೈದ್ಧಾಂತಿಕ ನೆಲೆಗಟ್ಟಿನಲ್ಲಿ ಭಿನ್ನವಾದರೂ ಅನ್ಯ ಧರ್ಮದ ಹಿರಿಯ ಸಹೋದರನ ಕಾದಂಬರಿ ಕೃಷಿಗೆ ನೆರವಾದವರು. ಅವರು ಬೇರ್ಯಾರು ಅಲ್ಲ ಇವರೇ, **ಬಾನು ಮುಷ್ತಾಕ್**. ಈ ಬಾರಿ ದಸರಾ ಮಹೋತ್ಸವ ಉದ್ಘಾಟಿಸಿದ ಬೂಕರ್ ಪ್ರಶಸ್ತಿ ವಿಜೇತರಾದ ಬಾನು ಮುಷ್ತಾಕ್, ಅಗಲಿದ ಚೇತನ ಡಾ.ಎಸ್.ಎಲ್. ಭೈರಪ್ಪನವರು ತಮ್ಮ ಮನೆಯಲ್ಲಿ ತಂಗಿದ್ದ ದಿನಗಳನ್ನು ಮೆಲುಕು ಹಾಕಿ, ಸಾಮಾಜಿಕ ಜಾಲತಾಣದಲ್ಲಿ ಭೈರಪ್ಪ ಸಾಹಿತ್ಯಾಭಿಮಾನಿಗಳಿಗೆ ಅಚ್ಚರಿಯಾದಂತಹ ವಿಚಾರವನ್ನು ಹೀಗೆ ಹಂಚಿಕೊಂಡಿದ್ದಾರೆ.



ಬಾನು ಮುಷ್ತಾಕ್

'ಆವರಣ' ಬರೆಯುವುದಕ್ಕೆ ಮುಂಚಿತವಾಗಿ ಎಸ್.ಎಲ್. ಭೈರಪ್ಪನವರು ಹಾಸನದಲ್ಲಿ ಒಂದು ಸಾಹಿತ್ಯಿಕ ಕಾರ್ಯಕ್ರಮದಲ್ಲಿ ಭಾಗವಹಿಸುವ ಸಲುವಾಗಿ ಆಗಮಿಸಿದ್ದರು. ನಾನು ಕಾರ್ಯಕ್ರಮಕ್ಕೆ ತಡವಾಗಿ ಹೋದೆ. ಆಗ ಅಲ್ಲಿದ್ದ ಕೆಲವರು ಭೈರಪ್ಪನವರು ನನ್ನ ಬಗ್ಗೆ ಒಂದೆರಡು ಸಾರಿ ವಿಚಾರಿಸಿದರು ಎಂದು ಸಂದೇಶ ಕೊಟ್ಟರು. ಕಾರ್ಯಕ್ರಮ ಮುಗಿದ ನಂತರ ನಾನು ಅವರನ್ನು ಸಂಪರ್ಕಿಸಿದೆ. ಆಗ ಅವರು 'ನಾನು ನಿಮ್ಮ ಮನೆಗೆ ಬರಬೇಕೆಂದಿದ್ದೇನೆ' ಎಂದರು. ಅದಕ್ಕೇನು 'ಬನ್ನಿ' ಎಂದು ಕರೆದೆ. 'ಈಗಲೇ ಬರುವುದಿಲ್ಲ, ಆದರೆ ನಾನು ಒಂದು ವಾರದ ಮಟ್ಟಿಗೆ ಬಂದು ನಿಮ್ಮ ಮನೆಯಲ್ಲಿಯೇ ಉಳಿಯುತ್ತೇನೆ' ಎಂದರು. ನಾನು ಗಲಿಬಿಲಿಯಾದದ್ದಂತೂ ನಿಜ. ನಂತರ ನಾನು ಆ ವಿಷಯವನ್ನು ಮರೆತೆ ಬಿಟ್ಟೆ.

ಸುಮಾರು ಒಂದು ತಿಂಗಳ ನಂತರ ನಮ್ಮ ಮನೆ ಲ್ಯಾಂಡ್ ಲೈನ್‌ಗೆ ಭೈರಪ್ಪನವರು ಫೋನ್ ಮಾಡಿದ್ದರು. ಮತ್ತು ತಾವು ಇಂತಹ ದಿನ ಬರುವುದಾಗಿ ನನಗೆ ಮಾಹಿತಿ ನೀಡಿದರು. ನನಗೆ ಸಿಕ್ಕಾಪಟ್ಟೆ ಗಾಬರಿಯಾಯಿತು. ಅವರಿಗಾಗಿ ನಾನು ಯಾವ ವ್ಯವಸ್ಥೆಯನ್ನು ಮಾಡಬೇಕು ಎಂಬುದೇ ತೋಚದಂತಾಯಿತು. ಆಗ ನನ್ನ ಮೂವರು ಹೆಣ್ಣು ಮಕ್ಕಳು ಕೂಡ ಅವಿವಾಹಿತರಾಗಿದ್ದರು ಮತ್ತು ವಿದ್ಯಾಭ್ಯಾಸದಲ್ಲಿ ತೊಡಗಿದ್ದರು. ಮಗ ತಾಹೇರ್ ಹೈಸ್ಕೂಲಿನಲ್ಲಿ ಓದುತ್ತಿದ್ದ. ಹಿರಿಯವಳಾದ ಸಮೀನಾ ಮೈಸೂರು ಯೂನಿವರ್ಸಿಟಿಯಲ್ಲಿ ಚಿನ್ನದ ಪದಕ ಪಡೆದ ನಂತರ ಏಕಕಾಲದಲ್ಲಿ ಐಎಎಸ್ ಮತ್ತು ಕೆಎಎಸ್ ಪರೀಕ್ಷೆಗೆ ಸಿದ್ಧತೆ ನಡೆಸಿದ್ದಳು. ಆದರೆ ನನಗೆ ಆತಂಕವಾಗಿದ್ದು ಅವರಿಗಾಗಿ ನಾನು ಸತ್ಕಾರದ ವ್ಯವಸ್ಥೆಯನ್ನು ಹೇಗೆ ಮಾಡಬೇಕು ಎಂದು. ಹೀಗಾಗಿ ನಾನು ಅವರನ್ನೇ ಕೇಳುವುದು ಉತ್ತಮ ಎಂದು ಭಾವಿಸಿ ಮತ್ತೆ ನಾನೇ ಅವರಿಗೆ ಫೋನ್ ಮಾಡಿ ಮಾತನಾಡಿದೆ. ಆಗ ಅವರು 'ತಾವು ನಾನ್‌ವೆಜ್ ಆಹಾರ ಅಭ್ಯಾಸಕ್ಕೆ ಒಗ್ಗಿಕೊಂಡಿಲ್ಲ. ವೆಜಿಟೇರಿಯನ್ ಮನೆ ಊಟವನ್ನು ತಮಗೆ ಮಾಡಬಹುದು' ಎಂದರು. ನಮ್ಮ ಮನೆಯಲ್ಲಿ ನಮ್ಮ ಜೊತೆಯಲ್ಲಿ ಅಡುಗೆ ಮನೆಯ ಊಟವನ್ನೇ ತಾವು ಕೂಡ ಸೇವಿಸುವುದಾಗಿ ನನಗೆ ಸಮಾಧಾನದಿಂದ ಉತ್ತರಿಸಿದರು.


ಹೀಗಾಗಿ ಅವರು ಬರುವುದಕ್ಕೆ ಒಂದು ವಾರ ಮುಂಚಿತವಾಗಿಯೇ ನಾನು ನನ್ನ ಫ್ರಿಡ್ಜ್‌ನಲ್ಲಿದ್ದ ಮೀನು, ಚಿಕನ್ ಮತ್ತು ಮಟನ್ ಅನ್ನು ಖಾಲಿ ಮಾಡಿ, ಹಾಸನದ ನಳನಳಿಸುವ ತಾಜಾ ತರಕಾರಿಗಳಿಂದ ತುಂಬಿಸಿದೆ. ಮತ್ತೆ ನಾನ್‌ವೆಜ್ ಖರೀದಿಸಲಿಲ್ಲ. ಇದಕ್ಕೆ ಹೆಚ್ಚು ತಕರಾರು ತೆಗೆದವನೇ ಮಗ. ಏಕೆಂದರೆ ಮೂರು ಹೊತ್ತು ಕೂಡ ನಾನ್‌ವೆಜ್ ತಿನ್ನುತ್ತಿದ್ದ ಅವನಿಗೆ ಒಂದು 15 ದಿನಗಳ ಕಾಲ ಅವನ ಆಯ್ಕೆಯ ಆಹಾರ ಸಿಗುವುದಿಲ್ಲ ಎಂಬುದು ಅವನಿಗೆ ಇಷ್ಟವಾಗಲಿಲ್ಲ. ಎಲ್ಲಾ ರೀತಿಯ ಕ್ಯಾತೆ ತೆಗೆದ. ಆದರೆ ಅವು ಯಾವುವೂ ಕೂಡ ನಿಲ್ಲಲಿಲ್ಲ ಎಂದು ಅವನಿಗೆ ಅರಿವಾದ ನಂತರ ಅವರ ಸಾಹಿತ್ಯದ ಬಗ್ಗೆ ತಕರಾರು ತೆಗೆದ. ನನ್ನ ಮತ್ತು ಅವನ ನಡುವೆ ಭೈರಪ್ಪನವರ ಬರವಣಿಗೆಯ ಬಗ್ಗೆ ಸಾಕಷ್ಟು ಚರ್ಚೆ ನಡೆಯಿತು. ಅವನ ಅಕ್ಕಂದಿರು ಕೂಡ ನಡುನಡುವೆ ಮೂಗು ತೂರಿಸಿದರು. ಅವನ ಅಬ್ಜೆಕ್ಷನ್ ಅನ್ನು ಸರ್ವನಾಮ ಮತದಿಂದ ತಳ್ಳಿಹಾಕಿ, ವೋಟಿಂಗ್ ಹಾಕದೆಯೂ ಬಹುಮತದಿಂದ ಠರಾವು ಪಾಸಾಗಿ ಭೈರಪ್ಪನವರ ಆತಿಥ್ಯ ನಿರ್ವಹಿಸಲು ಎಲ್ಲರೂ ತಯಾರಾದರು.

ತಾಹೇರ್ ಒಂದು ವಾರದ ಮಟ್ಟಿಗೆ ತನ್ನ ಅಜ್ಜಿಯ ಮನೆಗೆ ಅಂದರೆ ನನ್ನ ತಾಯಿಯ ಮನೆಗೆ ಶಿಫ್ಟ್ ಆಗುವುದಾಗಿ ಹೇಳಿ ನನ್ನನ್ನು ಬೆದರಿಸಲು ಪ್ರಯತ್ನಪಟ್ಟ. ಸಮೀನಾ ಅವನ ಬ್ಯಾಗ್ ಪ್ಯಾಕ್ ಮಾಡಿದಳು. ಲುಬ್ನಾ ಅವನ ಪುಸ್ತಕಗಳನ್ನು ರೆಡಿ ಮಾಡಿಕೊಟ್ಟಳು. ಆಯಶ ನಗುತ್ತಾ ಅವನನ್ನು ಕಿಚಾಯಿಸಿದಳು. ಕೊನೆಗೂ ಅವನು ತನ್ನ ಅಬ್ಜೆಕ್ಷನ್ನು ಮತ್ತು ಬೆದರಿಕೆಗಳನ್ನು ಹಿಂಪಡೆದು ವಿಧೇಯ ಮಗನಂತೆ ಭೈರಪ್ಪನವರ ಆಗಮನವನ್ನು ಎದುರು ನೋಡತೊಡಗಿದ.

ಭೈರಪ್ಪನವರು ನಮ್ಮ ಮನೆಗೆ ಬಂದರು. ಆರಂಭದ ಕೆಲವು ಮುಜುಗರಗಳನ್ನು ಬಿಟ್ಟರೆ ನನಗೆ ಹೆಚ್ಚಿನ ಸಂಕೋಚಗಳೇನು ಆಗಲಿಲ್ಲ. ನನ್ನ ಅಡುಗೆಯ ಸಹಾಯಕ್ಕೆ ಶಬಾನ ಇದ್ದಳು. ಸಸ್ಯಾಹಾರಿ ಅಡುಗೆಯನ್ನೇ ಮಾಡಲು ಸಂತೋಷವಾಗಿ ಒಪ್ಪಿಕೊಂಡಳು. ಭೈರಪ್ಪನವರು ಕೂಡ ತಾವು ಬರೆಯಲಿರುವ ಕಾದಂಬರಿ ಒಂದಕ್ಕೆ ಹಿನ್ನೆಲೆಯಾಗಿ ಮಾಹಿತಿ ಸಂಗ್ರಹಣ ಮಾಡುವ ಸಲುವಾಗಿ ನಮ್ಮ ಮನೆಗೆ ಬಂದಿರುವುದಾಗಿ ಹೇಳಿದರು. ಮುಸ್ಲಿಂ ಸಾಂಸ್ಕೃತಿಕ ಹಿನ್ನೆಲೆಯ ಮನೆಯ ವಾತಾವರಣವನ್ನು ತಾವು ಅಭ್ಯಸಿಸಬೇಕಾಗಿದೆ ಎಂತಲೂ ಮತ್ತು ಮುಸ್ಲಿಂ ಕುಟುಂಬದ ನಡವಳಿಕೆಗಳನ್ನು ಕೂಡ ತಾವು ಅವಲೋಕಿಸಬೇಕಾಗಿದೆ ಎಂತಲೂ ಆ ಕಾರಣಕ್ಕೆ ನಮ್ಮ ಮನೆಗೆ ಬಂದಿರುವುದಾಗಿಯೂ ಅವರು ಹೇಳಿದರು. ನಾನು ನಕ್ಕು ಬಿಟ್ಟೆ. ಅಂತಹ ವಾತಾವರಣ ನಮ್ಮ ಮನೆಯಲ್ಲಿ ಅವರಿಗೆ ಸಿಗುವುದಿಲ್ಲ ಮತ್ತು ಅಂತಹ ನೈಜ ವಾತಾವರಣದ ಅಗತ್ಯ ಅವರಿಗೆ ಇದ್ದಲ್ಲಿ ಅಂತಹ ಮನೆಗಳಲ್ಲಿ ಎಸ್.ಎಲ್.ಭೈರಪ್ಪನವರನ್ನು ಸ್ವಾಗತಿಸುವುದಿಲ್ಲವೆಂತಲೂ ನಾನು ಅವರಿಗೆ ಹೇಳಿದೆ. ಹೀಗಾಗಿ ಅವರು ನಮ್ಮ ಮನೆಯಲ್ಲಿ ಉಳಿಯುವುದಾಗಿ ನಿರ್ಧರಿಸಿದರು.


ಶಬಾನಾಳ ಅಡುಗೆ ಅವರಿಗೆ ಇಷ್ಟವಾಯಿತು. ತರಕಾರಿ ಪಲ್ಯ, ಸೊಪ್ಪಿನ ಸಾರು ವಿಶೇಷವಾಗಿ ಇಷ್ಟವಾಯಿತು. ಮಾರನೇ ದಿನ ನನಗೆ ಆಲೂರು ಸಾಹಿತ್ಯ ಸಮ್ಮೇಳನದಲ್ಲಿ ಒಂದು ಮುಖ್ಯವಾದ ಕಾರ್ಯಕ್ರಮವಿತ್ತು. ಆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮರಳಿ ಬಂದೆ. ನಾನು ಬರುವಾಗಲೇ ಜ್ವರವನ್ನು ಹೊತ್ತು ತಂದೆ. ನಾನು ಜ್ವರದಿಂದ ನರಳುತ್ತಾ ಮಲಗಿರುವಾಗ ಸಮೀನಾಳೆ ಭೈರಪ್ಪನವರ ವ್ಯವಸ್ಥೆಗಳನ್ನು ನೋಡತೊಡಗಿದಳು.

ಭೈರಪ್ಪನವರಿಗೆ ಮುಸ್ಲಿಮರ ಖಬ್ರಸ್ತಾನ, ಮಸೀದಿಯನ್ನು ನೋಡಬೇಕಿತ್ತು. ಒಂದು ದಿನ ಬೆಳಗಿನ ಹೊತ್ತು ಮುಷ್ತಾಕ್ ಭೈರಪ್ಪನವರನ್ನು ಖಬ್ರಸ್ತಾನ್‌ಗೆ ಕರೆದುಕೊಂಡು ಹೋದರು. ಭೈರಪ್ಪನವರು ಹೊರಗಿನಿಂದ ಖಬ್ರಸ್ತಾನವನ್ನು ನೋಡಿದರು. ಒಳಗಡೆಯೂ ಹೋಗಿ ಗೋರಿಗಳ ನಡುವಿನಿಂದ ಹಾದು, ಮೂಲೆ ಮೂಲೆಯಲ್ಲೂ ಸಂಚರಿಸಿ ಬಂದರು. ಆಮೇಲೆ ಅವರು ಮುಷ್ತಾಕ್ ಅನ್ನು ಕೇಳಿದರು, 'ಇಲ್ಲಿ ಗೋರಿಗಳ ತಲೆದಸೆಯಲ್ಲಿ ಗ್ರಾನೈಟ್ ಕಲ್ಲುಗಳನ್ನು ನಿಲ್ಲಿಸಿ, ಅದರಲ್ಲಿ ಉರ್ದುವಿನಲ್ಲಿ ಏಕೆ ಬರೆದಿದ್ದಾರೆ?'. ಅದಕ್ಕೆ ಮುಷ್ತಾಕ್ ತಬ್ಬಿಬ್ಬಾಗಿ ಹೋದರು. ಅದಕ್ಕೆ ಏನು ಉತ್ತರಿಸಬೇಕು ಎಂಬುದು ಅವರಿಗೆ ಗೊತ್ತಾಗಲಿಲ್ಲ. ಹೀಗಾಗಿ ಅವರು ಮನೆಗೆ ಮರಳಿ ಬಂದ ನಂತರ ನನಗೆ ಭೈರಪ್ಪನವರ ಪ್ರಶ್ನೆಯನ್ನು ಒಪ್ಪಿಸಿದರು. ಅದಕ್ಕೆ ನೀವೇ ಉತ್ತರ ಹೇಳಿ ಎಂದು ಜವಾಬ್ದಾರಿಯನ್ನು ನನ್ನ ಮೇಲೆ ಹೊರಿಸಿದರು. ಭೈರಪ್ಪನವರು ಹಬ್ಬದ ಸನ್ನಿವೇಶಗಳನ್ನು ತಮ್ಮ ನೋಟ್‌ಬುಕ್‌ನಲ್ಲಿ ಬರೆದುಕೊಳ್ಳುತ್ತಿದ್ದರು.



ಡಾ. ಎಸ್.ಎಲ್. ಭೈರಪ್ಪನವರು.

> ನನಗೆ ಅನಿಸಿದ್ದು ಎಸ್.ಎಲ್. ಭೈರಪ್ಪನವರು ಊಟ-ತಿಂಡಿಯ ಆಹಾರ ಅಭ್ಯಾಸದಲ್ಲಿ ಕಠೋರ ನಿಯಮವನ್ನೇನು ಪಾಲಿಸುತ್ತಿರಲಿಲ್ಲ. ನನ್ನ ಬಾಲ್ಯ ಕಾಲದಿಂದಲೂ ನನಗೆ ಓದಿನ ರುಚಿ ಹತ್ತಿದ್ದು ಭೈರಪ್ಪನವರ ಬರವಣಿಗೆ ಮೂಲಕವೇ. ಅವರ ಓದುಗ ಬಳಗದ ಅತ್ಯಂತ ಲಾಯಲ್ ಆದ ಓದುಗಳಾಗಿದ್ದೆ ನಾನು.



ಮೈಸೂರಿಗೆ ವಾಪಸ್ಸಾದ ನಂತರ ಬಾನು ಮುಷ್ತಾಕ್ ಅವರಿಗೆ ಎಸ್.ಎಲ್.ಭೈರಪ್ಪನವರು ಬರೆದಿದ್ದ ಪತ್ರದ ಒಕ್ಕಣೆ.

ಎಸ್.ಎಲ್.ಭೈರಪ್ಪ

1007, ಉದಯರವಿ ರಸ್ತೆ
ಕುವೆಂಪುನಗರ, ಮೈಸೂರು 570023
ಫ್ಯಾಕ್ಸ್/ದೂರವಾಣಿ: 0821–343535
28–01–03

ಶ್ರೀಮತಿ ಬಾನು ಮುಷ್ತಾಖ್‌ರಿಗೆ
ವಂದನೆಗಳು
10.30ಕ್ಕೆ ಮೈಸೂರು ತಲುಪಿದೆ.

ನಿಮ್ಮ ಮನೆಯಲ್ಲಿದ್ದ ಕಾಲವೆಲ್ಲ ಎಷ್ಟೋ ವರ್ಷಗಳಿಂದ ಆತ್ಮೀಯರಾದ ಸ್ನೇಹಿತರ ಮನೆಯಲ್ಲಿದ್ದಂತಿತ್ತು. ಕೆಲವರೊಡನೆ ವಿಶ್ವಾಸ ತನಗೆ ತಾನೇ ಹುಟ್ಟುತ್ತದೆ. ಪ್ರಯತ್ನಪಟ್ಟು ಬೆಳೆಸಿಕೊಳ್ಳುವುದು ಸ್ನೇಹವಾಗುವುದಿಲ್ಲ. ಶ್ರೀ ಮುಷ್ತಾಖ್ ತುಂಬಾ ಹಾರ್ದಿಕ ಗುಣದ ವ್ಯಕ್ತಿ. ನಿಮ್ಮ ಮಕ್ಕಳು ತೆರೆದ ಮನಸ್ಸಿನವರು. ಚುರುಕು ಬುದ್ಧಿಯವರು.

ನಾನು ಹೇಳಿದ ಎರಡು ಪುಸ್ತಕಗಳ ಜೆರಾಕ್ಸ್ ಹಾಳೆಗಳನ್ನು ಸಂಗಡ ಕಳಿಸಿದ್ದೇನೆ. 'ಭಿತ್ತಿ'ಯ ಪ್ರತಿಯನ್ನೂ ಕೂಡ.

ನಿಮ್ಮ
ಎಸ್.ಎಲ್.ಭೈರಪ್ಪ

ಮುಖಾಮುಖಿ ಸಂವಾದಕ್ಕೆ ತಯಾರಿ ನಡೆದಿತ್ತು!

ಮೈಸೂರು, ಸೆ.24(ಎಸ್‌ಬಿಡಿ)– ಡಾ.ಎಸ್.ಎಲ್.ಭೈರಪ್ಪನವರು ಹಾಗೂ ಬಾನು ಮುಷ್ತಾಕ್ ಮುಖಾಮುಖಿ ಸಂವಾದಕ್ಕೆ ತಯಾರಿ ನಡೆದಿತ್ತು. 'ಮೈಸೂರು ಮಿತ್ರ'ನಿಗೆ ಸ್ವತಃ ಭಾನು ಮುಷ್ತಾಕ್ ಅವರೇ ಈ ವಿಷಯ ತಿಳಿಸಿದ್ದು, ಲಲ್ಲಂಟಾಪ್ ಮಾಧ್ಯಮ ವೇದಿಕೆಯಲ್ಲಿ ನನ್ನ ಮತ್ತು ಎಸ್.ಎಲ್.ಭೈರಪ್ಪನವರ ಮುಖಾಮುಖಿ ಸಂವಾದಕ್ಕೆ ತಯಾರಿ ನಡೆದಿತ್ತು. ಆ ಸಂವಾದವನ್ನು ರೆಕಾರ್ಡ್ ಮಾಡಲು ವ್ಯವಸ್ಥೆ ಮಾಡಿಕೊಳ್ಳುತ್ತಿದ್ದರು. ಆದರೆ ದಿನಾಂಕ ನಿಗದಿಯಾಗಿರಲಿಲ್ಲ. ಬಹುಶಃ ಸಂವಾದ ನಡೆಯುತ್ತಿತ್ತು. ಅಷ್ಟರಲ್ಲಿ ಭೈರಪ್ಪನವರು ಇಲ್ಲವಾಗಿದ್ದಾರೆ ಎಂದು ವಿಷಾದ ವ್ಯಕ್ತಪಡಿಸಿದರು.

ಅಪರೂಪದ ಸಹೋದರನಿಗೆ ಆತಿಥ್ಯ ನೀಡಿದ ದಿನಗಳ ಮೆಲುಕು....

ಆಮೇಲೆ ಅವರು ಮಸೀದಿಗೆ ಭೇಟಿ ಕೊಡಬೇಕು ಎಂದು ಕೇಳಿದ್ದರಿಂದ ಮುಷ್ತಾಕ್ ಹಾಸನದ ಹೊಳೆನರಸೀಪುರ ರಸ್ತೆಯ ಮಸೀದಿ ಆಡಳಿತ ಮಂಡಳಿಯವರಲ್ಲಿ ವಿಷಯ ತಿಳಿಸಿ, ಒಪ್ಪಿಗೆ ಪಡೆದರು. ಮುಷ್ತಾಕ್ ಮತ್ತು ಭೈರಪ್ಪನವರು ಒಂದು ಸಾರಿ ನಮಾಜ್ ಸಮಯಕ್ಕೆ ಆ ಮಸೀದಿಗೆ ಹೋದರು. ಅಲ್ಲಿ ಮಹಿಳೆಯರಿಗೆ ನಮಾಜ್ ಮಾಡಲು ಅವಕಾಶವಿತ್ತು. ಪ್ರತ್ಯೇಕ ಹಾಲ್‌ನಲ್ಲಿ ನಮಾಜ್‌ಗೆ ವ್ಯವಸ್ಥೆ ಮಾಡಿದ್ದರು. ನಾನು, ಆಗ ಶುಕ್ರವಾರ ಮಧ್ಯಾಹ್ನ ಮಾತ್ರ ಆ ಮಸೀದಿಯಲ್ಲಿ ನಮಾಜ್‌ನ ಸಲುವಾಗಿ ಹೋಗುತ್ತಿದ್ದೆ. ಆದುದರಿಂದ ಮುಷ್ತಾಕ್‌ರವರು ತಮ್ಮ ಜೊತೆಯಲ್ಲಿ ಕರೆದುಕೊಂಡು ಆ ಮಸೀದಿಗೆ ಹೋದರು. ಭೈರಪ್ಪನವರು ಕೈಕಾಲು ತೊಳೆದು ಮಸೀದಿಯೊಳಗೆ ಹೋಗಿ ಒಂದು ಕಡೆ ಕುಳಿತು ಎಲ್ಲವನ್ನೂ ತಮ್ಮ ನೋಟ್ ಪುಸ್ತಕದಲ್ಲಿ ಬರೆದುಕೊಳ್ಳುತ್ತಿದ್ದರು.

ನಂತರ ಭೈರಪ್ಪನವರು ಮುಸ್ಲಿಮರ ವಿದ್ಯಾಸಂಸ್ಥೆಯನ್ನು ನೋಡಲು ಬಯಸಿದರು. ಹೀಗಾಗಿ ಮುಷ್ತಾಕ್, ಅವರನ್ನು ಆಲೂರಿನ ಸಂಸ್ಥೆಗೆ ಕರೆದುಕೊಂಡು ಹೋದರು. ಅಲ್ಲೇ ಇಡೀ ಸಂಸ್ಥೆಯ ಪ್ರಾಂಗಣದಲ್ಲಿ ಸುತ್ತಾಡಿದ ಭೈರಪ್ಪನವರು ಅಲ್ಲಿನ ವ್ಯವಸ್ಥೆ ಮತ್ತು ವಿದ್ಯಾರ್ಥಿಗಳಿಗಾಗಿ ಮಾಡಿದ್ದ ವ್ಯವಸ್ಥೆ ಮೊದಲಾದವುಗಳನ್ನೆಲ್ಲಾ ಪರಿಶೀಲನೆ ಮಾಡಿ, ತಮ್ಮ ನೋಟ್ ಬುಕ್‌ನಲ್ಲಿ ಬರೆದುಕೊಂಡರು.

ಆಗ ಮೊಬೈಲ್ ಮತ್ತು ಅದರ ಗೀಳು ಯಾರಿಗೂ ಅಂಟಿಕೊಂಡಿರಲಿಲ್ಲ. ರಾತ್ರಿ ಊಟದ ಟೇಬಲ್‌ನಲ್ಲಿ ಮತ್ತು ಊಟವಾದ ನಂತರ ಒಳ್ಳೆಯ ಚರ್ಚೆ ನಡೆಯುತ್ತಿತ್ತು. ಭೈರಪ್ಪನವರು ಅನೇಕ ಪ್ರಶ್ನೆಗಳನ್ನು ಕೇಳುತ್ತಿದ್ದರು. ನಾನು ಅದಕ್ಕೆ ಸೂಕ್ತವಾಗಿ ಪ್ರತಿಕ್ರಿಯೆ ನೀಡುತ್ತಿದ್ದೆ. ನಂತರ ಅವರು ತತ್ವಶಾಸ್ತ್ರದ ವಿಚಾರಗಳನ್ನು ಚರ್ಚೆ ಮಾಡುತ್ತಿದ್ದರು. ಆಗ ಸಮೀನಾ ತನ್ನ ಸ್ಪರ್ಧಾತ್ಮಕ ಪರೀಕ್ಷೆಗಳ ಸಲುವಾಗಿ ಇಂಡಿಯನ್ ಹಿಸ್ಟರಿ ಅನ್ನು ಆಳವಾಗಿ ಅಭ್ಯಾಸ ಮಾಡುತ್ತಿದ್ದಳು. ಹೀಗಾಗಿ ಅವಳು ಅವರ ಅನೇಕ ಸಂದೇಹಗಳಿಗೆ ಇಂಡಿಯನ್ ಹಿಸ್ಟರಿಯ ದೃಷ್ಟಾಂತಗಳ ಮೂಲಕ ವಿವರಣೆ ನೀಡುತ್ತಿದ್ದಳು. ಅವರಿಬ್ಬರ ನಡುವೆ ನಡೆಯುತ್ತಿದ್ದ ಚರ್ಚೆಗಳನ್ನು ಕೇಳುವುದೇ ಒಂದು ಅದ್ಭುತವಾದ ಸಂದರ್ಭವಾಗಿತ್ತು. ಹೀಗೆ ಒಂದು ವಾರದವರೆಗೂ ನಮ್ಮಗಳ ಬಾಂಧವ್ಯ ಮುಂದುವರೆಯಿತು.

ಭೈರಪ್ಪನವರ ಕುತೂಹಲದ ಕಣ್ಣುಗಳಿಗೆ ಮುಸ್ಲಿಂ ಹಿನ್ನೆಲೆಯ ಬದುಕು ಅಗೋಚರವಾಗಿಯೇ ಉಳಿಯಿತು. ಒಂದು ಸಮುದಾಯದ ಒಳ–ಹೊರಗನ್ನು ಒಂದು ವಾರದೊಳಗೆ ತಿಳಿಯುವುದು ಅಸಾಧ್ಯದ ಕೆಲಸ. ಆದರೂ ಕೂಡ ಭೈರಪ್ಪನವರ ತೀವ್ರ ಕುತೂಹಲ ಮತ್ತು ವಿಷಯ ಸಂಗ್ರಹಣೆಯ ದಾಹ, ಅಪರಿಚಿತ ಲೋಕಗಳ ಪರಿಚಯವನ್ನು ಗಳಿಸುವ ತೀವ್ರತೆ ವಿಶಿಷ್ಟವಾಗಿತ್ತು. ಆದರೆ ನನಗೆ ಅನ್ನಿಸುತ್ತಿತ್ತು ಅವರು ಹೊರನೋಟದ ತೊಗಟೆಯ ಅರಿವನ್ನು ಮಾತ್ರ ಪಡೆಯುತ್ತಿದ್ದಾರೆ. ಮುಸ್ಲಿಂ ಸಮುದಾಯದ ಪರಿಚಯ ಮತ್ತು ಚಿಂತನಾನುಭವವನ್ನು ಪಡೆಯಲು ಎಲ್ಲೋ ಸೋಲುತ್ತಿದ್ದಾರೆ ಅಂತ. ಈ ಎಲ್ಲ ಮಾಹಿತಿಯನ್ನು ಅವರು ಹೇಗೆ ಬಳಕೆ ಮಾಡಬಹುದು ಮತ್ತು ಅವರ ಗ್ರಹಿಕೆ ಮತ್ತು ಬರವಣಿಗೆ ಮುಸ್ಲಿಂ ವಿರೋಧಿ ನಿಲುವನ್ನು ವ್ಯಕ್ತಪಡಿಸಿದಾಗ ನನ್ನ ಬಗ್ಗೆ ಸಮುದಾಯದ ನಿಲುವು ಏನಾಗಬಹುದು ಎಂಬುದರ ಬಗ್ಗೆ ಕೂಡ ನನಗೆ ಆಲೋಚನೆ ಉಂಟಾಗುತ್ತಿತ್ತು. ಆದರೆ ನಾನು ಎಲ್ಲಾ ಆಲೋಚನೆಗಳನ್ನು ಕೂಡ ಬದಿಗೊತ್ತಿ ಭೈರಪ್ಪನವರ ಜೊತೆಯಲ್ಲಿ ಅತ್ಯಂತ ಸಹಜವಾಗಿ ವರ್ತನೆ ಮಾಡಿದೆ. ನನ್ನ ಕುಟುಂಬ ಕೂಡ ಇದಕ್ಕೆ ಪೂರಕವಾಗಿ ಸಂಪೂರ್ಣ ಸಹಕಾರ ನೀಡಿತು.

ಆರಂಭದಿಂದಲೇ ಕಿರಿಕಿರಿ ವ್ಯಕ್ತಪಡಿಸುತ್ತಿದ್ದ ಮಗ, ನನ್ನ ತಾಯಿಯ ಮನೆಗೆ ಹೋಗಿ ಗಡದ್ದಾಗಿ ಬಿರಿಯಾನಿ ಉಂಡು, ಚಿಕನ್ ಕಬಾಬ್ ತಿಂದು ಬರುತ್ತಿದ್ದನಾದರೂ ಮುನಿಸಿಕೊಂಡು ನನ್ನಿಂದಲೂ, ಭೈರಪ್ಪನವರಿಂದಲೂ ದೂರವಾಗಿಯೇ ಉಳಿದ.

ನಂತರ 'ಆವರಣ' ಪ್ರಕಟವಾಯಿತು. ಆವರಣದಲ್ಲಿ ಭೈರಪ್ಪನವರು ರಿಸರ್ಚ್ ಮಾಡಿದಂತೆಯೇ ತಮ್ಮ ಕೆಲವು ಪೂರ್ವ ನಿರ್ಧರಿತ ಪ್ರಮೇಯಗಳಿಗೆ ಅನುಕೂಲವಾಗುವಂತಹ ಮತ್ತು ತಕ್ಕದಾದ ನಿದರ್ಶನಗಳನ್ನೇ ಕೊಟ್ಟು ಮುಸ್ಲಿಂ ಸಮುದಾಯದ ರಾಕ್ಷಸೀಕರಣದ ಬಿಂಬಕ್ಕೆ ಪೂರಕವಾದ ಬರವಣಿಗೆಯನ್ನು ಕೊಟ್ಟರು. ಆದರೆ ಅವರು ಸದರಿ ಕಾದಂಬರಿಯ ಪೀಠಿಕೆಯಲ್ಲಿ ಒಬ್ಬ ಸಹೋದರಿಯ ಮನೆಯಲ್ಲಿ ಉಳಿದುದಾಗಿ ತಿಳಿಸಿದರು ಮತ್ತು ಹೆಸರನ್ನು ಬರೆಯಲಿಲ್ಲ. ಹೀಗಾಗಿ ಆ ಸಹೋದರಿ ಯಾರು ಎಂಬುದು ತಿಳಿಯದೆ ಊಹಾಪೋಹದ ಮಟ್ಟದಲ್ಲಿಯೇ ಉಳಿಯಿತು. ಆದರೆ ಆ ಸಂದರ್ಭದಲ್ಲಿ ನಮ್ಮ ಮನೆಗೆ ಅನೇಕ ಲೇಖಕರು ಬಂದು ಅವರೊಡನೆ ಫೋಟೋಗಳನ್ನು ತೆಗೆದುಕೊಂಡರು. ಕ್ರಮೇಣ ಎಲ್ಲರಿಗೂ 'ಆವರಣ' ಬರವಣಿಗೆಯ ಮುಂಚಿತವಾಗಿ ಅವರು ನಮ್ಮ ಮನೆಯಲ್ಲಿದ್ದರೆಂಬ ವಿಷಯವು ತಿಳಿದುಬಂತು.

ಆವರಣದ ಬರವಣಿಗೆಯು ತೀವ್ರ ವಿವಾದವಾಗುತ್ತದೆ ಎಂಬುದು ಅವರ ನಿರೀಕ್ಷೆಯಾಗಿತ್ತು. ನನಗೆ ಅನ್ನಿಸುತ್ತೆ ವಿವಾದವನ್ನು ಬಯಸಿದ್ದರು ಎಂದು. ಆದರೆ ಅದು ವಿವಾದದ ಸ್ವರೂಪವನ್ನು ಪಡೆಯಲಿಲ್ಲ. ಬದಲಿಗೆ ಗೌರಿ, ಆವರಣ ಒಂದು ವಿಕೃತಿ ಅನಿಸಿದ್ದನ್ನು ಪ್ರಕಟ ಮಾಡಿದರು. ಅದರಲ್ಲಿ ಆವರಣದ ಬಗ್ಗೆ ಅನೇಕ ಲೇಖಕರ ವಿಮರ್ಶೆಗಳೂ ಇವೆ.

ನನಗೆ ಅನಿಸಿದ್ದು ಭೈರಪ್ಪನವರು ಊಟ–ತಿಂಡಿಯ ಆಹಾರ ಅಭ್ಯಾಸದಲ್ಲಿ ಕಠೋರ ನಿಯಮವನ್ನೇನು ಪಾಲಿಸುತ್ತಿರಲಿಲ್ಲ. ನನ್ನ ಬಾಲ್ಯ ಕಾಲದಿಂದಲೂ ನನಗೆ ಓದಿನ ರುಚಿ ಹತ್ತಿದ್ದು ಭೈರಪ್ಪನವರ ಬರವಣಿಗೆಯ ಮೂಲಕವೇ. ಅವರ ಓದುಗ ಬಳಗದ ಅತ್ಯಂತ ಲಾಯಲ್ ಆದ ಓದುಗಳಾಗಿದ್ದೆ ನಾನು. ಆದರೆ ಅವರ ಧೋರಣೆ, ಬದ್ಧತೆ ಮತ್ತು ಪೂರ್ವಗ್ರಹಪೀಡಿತ ಆಲೋಚನಾ ಸರಣಿಯ ಪ್ರತಿಪಾದನೆಯ ನಂತರ ನಾನು ಅವರಿಗೆ ಪ್ರಿಯ ಓದುಗಳಾಗಿ ಉಳಿಯಲಿಲ್ಲ. ಒಬ್ಬ ನುರಿತ ಲಾಯರ್‌ನಂತೆ ಕೆಲ ವಿಷಯಗಳನ್ನು ರೂಪಿಸಿಕೊಂಡು, ಸಂಶೋಧನೆಯ ಮೂಲಕ ಅಗೆದು ತೆಗೆದ ಮಾಹಿತಿಯನ್ನು ಬಳಸಿ ಪ್ರಬುದ್ಧವಾಗಿ ನಿರೂಪಿಸುತ್ತಿದ್ದ ವಾದದ ಶೈಲಿಯಂತೆ ಕಂಡು ಬರುತ್ತಿದ್ದವು. ಅವರ ಸೃಜನಶೀಲತೆಯನ್ನು ಅಪಹರಿಸಿದವರ್ಯಾರು ಎಂದು ನನ್ನನ್ನು ನಾನೇ ಪ್ರಶ್ನಿಸಿಕೊಳ್ಳುತ್ತಿದ್ದೆ. ಸೈದ್ಧಾಂತಿಕವಾಗಿ ನಮ್ಮ ನಡುವೆ ಭಿನ್ನಾಭಿಪ್ರಾಯವಿದ್ದರೂ ಕೂಡ ಅವರನ್ನು ಕಂಡು ಮಾತನಾಡಿ ಚರ್ಚಿಸಿರುವ ನೆನಪುಗಳು ನನ್ನ ಮನಃಪಟಲದಲ್ಲಿ ಉಳಿದಿವೆ. ಇಂದು ಅವರು ಸ್ವರ್ಗಸ್ಥರಾದರು ಎಂಬ ವಿಷಯದಿಂದ ಒಂದು ಭಾವತಂತು ತುಂಡಾದಂತೆ ಭಾಸವಾಗುತ್ತಿದೆ. ನನಗೆ ಏನೋ ಖಾಸಗಿ ನಷ್ಟವಾದಂತೆ ಅನ್ನಿಸುತ್ತಿದೆ.

ಭೈರಪ್ಪನವರಿಗೆ ನನ್ನ ಭಾವಪೂರ್ಣ ನಮನಗಳು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಅನನ್ಯಾ ಭಟ್ ಹಾಡಿನ ಮೋಡಿ; ಗಾನದ ಘಮಲಿನಲ್ಲಿ ಸಭಿಕರ ಸಂಭ್ರಮ


ಅರಮನೆ ವೇದಿಕೆಯಲ್ಲಿ ಅನನ್ಯಾ ಭಟ್ ಹಾಡಿನ ಮೋಡಿ.

ಮೈಸೂರು,ಸೆ.24(ಪಿಎಂ)– 'ಮೇಲೆ ನೀಲಿ ಅಂಬಾರ... ಅಲ್ಲಿ ತೇಲೋ ಚಂದಿರ..' 'ಕೇಳೋ ಮಾದೇವಾ ಮನ್ಸಾ ಜೀವಾ...' ಹೀಗೆ ಮೊದಲಾದ ಗೀತೆಗಳ ಮೂಲಕ ನಟಿಯೂ ಆದ ಖ್ಯಾತ ಗಾಯಕಿ ಕುಳಿ ಕೆನ್ನೆ ಚೆಲುವೆ ಅನನ್ಯಾ ಭಟ್, ಪ್ರೇಕ್ಷಕರ ಮನಕ್ಕೆ ಲಗ್ಗೆಯಿಟ್ಟರು.

ಸಂಗೀತದ ಅಲೆಯಲ್ಲಿ ತೇಲಾಡಿದ ಪ್ರೇಕ್ಷಕರು, ತಾವಿದ್ದಲೇ ನರ್ತಿಸಿ ನಲಿದರು. ಗಟ್ಟಿ ಧ್ವನಿಯ ಗಾಯಕಿ ಅನನ್ಯಾ ಭಟ್ ಹಾಡಿನ ಜೊತೆ ಕುಣಿದು ಅರಮನೆ ಆವರಣದಲ್ಲಿ ನೆರೆದಿದ್ದವರ ಸಂಭ್ರಮಕ್ಕೆ ಕಾರಣರಾದರು. ಮೈಸೂರು ದಸರಾ ಮಹೋತ್ಸವ ಪ್ರಯುಕ್ತ ಸಾಂಸ್ಕೃತಿಕ ಉಪಸಮಿತಿ ವತಿಯಿಂದ ಅರಮನೆ ವೇದಿಕೆಯಲ್ಲಿ ಹಮ್ಮಿಕೊಂಡಿರುವ ಸಾಂಸ್ಕೃತಿಕ ಕಾರ್ಯಕ್ರಮಗಳ ಪ್ರಯುಕ್ತ 3ನೇ ದಿನವಾದ ಬುಧವಾರ ಇಂತಹ ಸಂಗೀತ ಸೂಸಿ ನೆರೆದವರ ಮನ ಮುದಗೊಳಿಸಿತು.

'ಜಾನಪದ ಗಾನವೈಭವ' ಶೀರ್ಷಿಕೆಯಡಿ ನಡೆದ ಈ ಕಾರ್ಯಕ್ರಮದಲ್ಲಿ ಪಾಶ್ಚಿಮಾತ್ಯ ಸಂಗೀತ ಶೈಲಿಯ ಹಿನ್ನೆಲೆಯಲ್ಲಿ ಜಾನಪದ ಗೀತೆಗಳು ಮಾತ್ರವಲ್ಲದೇ ವಿವಿಧ ಪ್ರಕಾರದ ಹಾಡುಗಳನ್ನು ಸಾದರಪಡಿಸಿ ಸಭಿಕರಲ್ಲಿ ರೋಮಾಂಚನ ಉಂಟುಮಾಡಿದರು.


'ಕೆಜಿಎಫ್' ಸಿನಿಮಾದ 'ಧೀರ ಧೀರ... ಈ ಸುಲ್ತಾನ...' ಗೀತೆ ಗುನುಗುತ್ತಾ ಅಚ್ಚರಿ ಎಂಟ್ರಿ ಕೊಟ್ಟ ಅನನ್ಯಾ ಭಟ್, ಸಭಿಕರ ಹರ್ಷೋದ್ಗಾರದ ಅಭಿಮಾನಕ್ಕೆ ಪಾತ್ರರಾದರು. 'ಗಜವದನ ಹೇರಂಭ...' ರಂಗಗೀತೆ ಸಾದರಪಡಿಸಿ ಪುಳಕವಿಟ್ಟ ಅನನ್ಯ ಭಟ್, ರಾಷ್ಟ್ರಕವಿ ಕುವೆಂಪು ರಚಿತ 'ಬಾರಿಸು ಕನ್ನಡ ಡಿಂಡಿಮವ...' ಗೀತೆ ಮೂಲಕ ನಾಡು–ನುಡಿಯ ಅಭಿಮಾನ ಮೆರೆದು ಸಭಿಕರಿಂದ ಚಪ್ಪಾಳೆ ಗಿಟ್ಟಿಸಿದರು.

ಅವರು ಪ್ರಸ್ತುತಪಡಿಸಿದ 'ಮೇಲೆ ನೀಲಿ ಅಂಬಾರ...' 'ಮೈಸೂರು ರಾಜ್ಯದ ದೊರೆಯೇ ರಣಧೀರ ನಾಯಕ...' ಗಾನದ ಘಮಲು ಸಭಿಕರ ಮುದಗೊಳಿಸಿತು. ಅನನ್ಯಾ ಭಟ್ಟರ 'ಕೇಳೋ ಮಾದೇವಾ ಮನ್ಸಾ ಜೀವಾ...' ಗೀತೆಗಂತೂ ಸಭಿಕರು ಶಿಳ್ಳೆ, ಚಪ್ಪಾಳೆ, ಹರ್ಷೋದ್ಗಾರದೊಂದಿಗೆ ಸಂಭ್ರಮಿಸಿದರು. ಅನನ್ಯಾರ ಹಾಡಿಗೆ ಪ್ರಾರ್ಥನಾ, ಪ್ರಕೃತಿ, ಮೃತ್ಯುಂಜಯ ದೊಡ್ಡವಾಡ, ಚಿನ್ಮಯ್, ಅಭಿಷೇಕ್ ಅವರು ಸಹ ಗಾಯನ ನೀಡಿ ಸಹಕಾರ ನೀಡಿದರು. ಅಲ್ಲದೆ, ಚಂದನ ಕಲಾ ತಂಡದ ಸುಗಮ ಸಂಗೀತ, ಕಲಾಕ್ಷೀರ ಸಾಗರ ಪ್ರದರ್ಶಕ ಕಲೆಗಳ ಕೇಂದ್ರದ ವಿದ್ವಾನ್ ಸಾಗರ್ ಸಿಂಗ್ ಮತ್ತು ತಂಡದ ಭರತನಾಟ್ಯ ಪ್ರದರ್ಶನ, ಸಾಯಿಶಿವ್ ಲಕ್ಷ್ಮೀ ಕೇಶವ್ ತಂಡದ ಕರ್ನಾಟಿಕ್ ಫ್ಯೂಷನ್ ವಾದ್ಯ ಸಂಗೀತ ಹಾಗೂ ಡಾ.ಮೈಸೂರು ಮಂಜುನಾಥ್, ಸುಮಂತ್ ಮಂಜುನಾಥ್, ಮಾಳವಿ ಅವರ ವಯೋಲಿನ್ ಟ್ರಯೋ ಸಭಿಕರನ್ನು ರಂಜಿಸಿತು.

ಕಣ್ಮನ ಸೆಳೆದ ಗೀತ–ಚಿತ್ರ ಸಂಗಮ...

ಇದಕ್ಕೂ ಮುನ್ನ ಗಾನದ ಸೊಗಸು ಮತ್ತು ರೇಖಾಚಿತ್ರದ ದೃಶ್ಯಕಾವ್ಯ ಪ್ರೇಕ್ಷಕರನ್ನು ಮಂತ್ರಮುಗ್ಧರನ್ನಾಗಿಸಿತು. ಕರ್ನಾಟಕ ಕಲಾಶ್ರೀ ಡಾ.ಆರ್.ಎಸ್.ನಂದಕುಮಾರ್ ಗಾಯನ ಹಾಗೂ ಕಾಳಿದಾಸ್ ಸಮ್ಮಾನ್ ಪ್ರಶಸ್ತಿ ಪುರಸ್ಕೃತ ಗಂಜೀಫಾ ಕಲೆಯ ಖ್ಯಾತ ಕಲಾವಿದ ರಘುಪತಿ ಭಟ್ ಅವರ ರೇಖಾಚಿತ್ರದ ಸಮಾಗಮ ಸಭಿಕರನ್ನು ತನ್ಮಯತೆಯಲ್ಲಿ ತೇಲುವಂತೆ ಮಾಡಿತು.

ಭಗದ್ಗೀತೆಯ 11ನೇ ಅಧ್ಯಾಯದ 'ವಿಶ್ವರೂಪ ದರ್ಶನ ಯೋಗ' ಚಿತ್ರವನ್ನು ತಮ್ಮ ಕುಂಚದಲ್ಲಿ ರಘುಪತಿ ಭಟ್ ಅನಾವರಣಗೊಳಿಸಿದರು. ಒಂದೆಡೆ ಚಿತ್ರ ಮೂಡಿಸುತ್ತಿದ್ದರೆ ಮತ್ತೊಂದೆಡೆ ನಂದಕುಮಾರ್, 'ಭಜ ಗೋವಿಂದಂ...' ಸೇರಿದಂತೆ ವಿವಿಧ ಗೀತೆಗಳನ್ನು ಸಾದರ ಪಡಿಸಿದರು. ಈ ರೀತಿಯ ಚಿತ್ರ–ಗಾನದ ಸಮಾಗಮಕ್ಕೆ ಪ್ರೇಕ್ಷಕರು ನಿಬ್ಬೆರಗಾದರು.


ಡಾ.ಆರ್.ಎಸ್.ನಂದಕುಮಾರ್ ಗಾಯನ ಜೊತೆಗೆ ಗಂಜೀಫ ಕಲೆಯ ಖ್ಯಾತ ಕಲಾವಿದ ರಘುಪತಿ ಭಟ್ 'ವಿಶ್ವರೂಪ ದರ್ಶನ ಯೋಗ' ಚಿತ್ರ ಅನಾವರಣಗೊಳಿಸಿದರು.

ಯುವ ದಸರಾ-2

ಬಾಲಿವುಡ್ ಗಾಯಕ ಪ್ರೀತಂ ಚಕ್ರವರ್ತಿ ಧಮಾಕ


ಗಾಯಕ ಪ್ರೀತಂ ಹಾಗೂ ಇರ್ಫಾನ್ ಗಾಯನ ಮೋಡಿ.

ಮೈಸೂರು, ಸೆ.24(ವಿವಿಹೆಚ್)– 'ಓಂ ದೇವಾ, ದೇವಾ, ಓಂ ದೇವಾ ದೇವಾ' ಹಾಡಿಗೆ ಧನಿಗೂಡಿಸುತ್ತಾ, ಮೈ ಮರೆತು ತಲೆದುಗುತ್ತಾ ಸಂಗೀತ ಸಂಭ್ರಮದಲ್ಲಿ ಪ್ರೇಕ್ಷಕ ಮಹೋದಯರು ಮುಳುಗಿ ಹೋದರು. ಇದೇ ಸಂದರ್ಭದಲ್ಲಿ ದಟ್ಟವಾಗಿ ಕಾರುತ್ತಿದ್ದ ಹೊಗೆಯ ನಡುವೆ ಹಾಡುಬಂದ ಗಾಯಕ ಪ್ರೀತಂ ಚಕ್ರವರ್ತಿ, ನಮಸ್ಕಾರ ಮೈಸೂರು... ಹೇಗಿದ್ದೀರಾ... ಹ್ಯಾಪಿ ದಸರಾ... ನಾನಿಲ್ಲಿಗೆ ನಿಮಗಾಗಿ ಹಾಡಲು ಬಂದಿದ್ದೇನೆ. ದೇಶಾದ್ಯಂತ ಒಬ್ಬ ಸಾಹಿತ್ಯ ಸಂಯೋಜಕನಾಗಿ ದೊಡ್ಡಮಟ್ಟದಲ್ಲಿ ಗುರುತಿಸಿಕೊಳ್ಳಲು ಸಾಧ್ಯವಾಗಿದ್ದು ನಿಮ್ಮಿಂದ. ಇಂದಿನ ಕಾರ್ಯಕ್ರಮ ನಿಮಗಾಗಿ ಎಂದು ಜನಸಾಗರವನ್ನ ತನ್ನತ್ತ ಸೆಳೆದರು.

ಮೈಸೂರು ಹೊರವಲಯದ ರಿಂಗ್ ರಸ್ತೆಯಲ್ಲಿರುವ ಉತ್ತನಹಳ್ಳಿ ಮೈದಾನದಲ್ಲಿ ವಿಶ್ವವಿಖ್ಯಾತ ನಾಡಹಬ್ಬ ಮೈಸೂರು ದಸರಾ ಮಹೋತ್ಸವ ಮನರಂಜನಾ ಭವ್ಯ ವೇದಿಕೆಯಾದ 'ಯುವ ದಸರಾ' ಮೆಗಾ ಸಂಗೀತ ಕಾರ್ಯಕ್ರಮದ ಎರಡನೇ ದಿನವಾದ ಬುಧವಾರ ಸಂಗೀತ ನಿರ್ದೇಶನಕ್ಕೆ ರಾಷ್ಟ್ರ ಪ್ರಶಸ್ತಿ ಪಡೆದ ಬಾಲಿವುಡ್ ಮ್ಯೂಸಿಕ್ ಕಂಪೋಸರ್ ಪ್ರೀತಂ ಚಕ್ರವರ್ತಿ ಅವರು ತಮ್ಮ ಗಾಯನ ಮೋಡಿಯಿಂದ ನೆರೆದಿದ್ದವರ ರಂಜಿಸುವಲ್ಲಿ ಯಶಸ್ವಿಯಾದರು. ಜನಮನ ತಣಿಸುವ ಮೈಸೂರು ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆಯಾದ ಯುವ ದಸರಾ ಹಾಡು, ನೃತ್ಯ, ಜಗಮಗಿಸುವ ವಿದ್ಯುತ್ ಚಿತ್ತಾರದ ಮೂಲಕ ಮತ್ತಷ್ಟು ರಂಗೇರಿತು.



ಬೇಸರಗೊಂಡು ಹೊರನಡೆಯುತ್ತಿರುವ ಸಭಿಕರು.

ಹೇ ದಿಲ್ ಹೇ ಮುಸ್ಕಿಲ, ಥೂ ಮೇರಿ ಸನಮ್, ಥುಮ್ ಜೋ ಆಯೆ, ಅಭಿ ಕುಚ್ ಡೇನೆ, ಹಲ್ಕಾ ಹಲ್ಕಾ ಹೇ ಸಮಾ... ಒಳಗೊಂಡಂತೆ ವಿವಿಧ ಬಾಲಿವುಡ್ ಹಾಡುಗಳ ಸಮಾಗಮವನ್ನೇ ವೇದಿಕೆ ಮೇಲೆ ಪ್ರೀತಂ ಮತ್ತು ತಂಡ ಸಾದರ ಪಡಿಸಿದರು. ಬ್ರಹ್ಮಾಸ್ತ್ರ ಚಿತ್ರದ ಹಾಡಿಗೆ ಕುಳಿತ್ತಿದ್ದವರೆಲ್ಲರೂ ಎದ್ದು, ಕುಣಿದು ಕುಪ್ಪಳಿಸಿ ಮೈಮರೆಯುವಂತೆ ಮಾಡಿದರು. ಈ ಹಾಡಿಗೆ ಪ್ರೀತಂ ಜೊತೆ ನೆರೆದಿದ್ದವರು ಧ್ವನಿಗೂಡಿಸಿ ಹಾಡಿದರಲ್ಲದೆ ಕುಂತಲ್ಲಿ, ನಿಂತಲ್ಲಿ ಕೈ–ಕಾಲುಗಳನ್ನಾಡಿಸಿ ನಲಿದರು.

ಶೋರ್ ಪೊಲೀಸ್ ಬ್ಯಾಂಡ್: ಇದಕ್ಕೂ ಮೊದಲು ಕ್ಲಿಂಟನ್, ಬಿಯಾಂಕಾ ಗೋಮ್ಸ್ ಮತ್ತು ಬ್ಯಾಂಡ್‌ನ ಶೋರ್ ಪೊಲೀಸ್ ಬ್ಯಾಂಡ್ ವತಿಯಿಂದ ಸಂಗೀತ ರಸಸಂಜೆ ಕಾರ್ಯಕ್ರಮ ನಡೆಯಿತು. ತೋಬಾ... ತೋಬಾ..., ಟೇಕ್ ಇಟ್ ಈಜಿ ಊರ್ವಶಿ, ಗಣೇಶ ಅಭಿನಯದ ಮುಂಗಾರು ಮಳೆ ಚಿತ್ರದ ಅನಿಸುತ್ತಿದೆ ಯಾಕೋ ಇಂದು... ಕಿಚ್ಚ ಸುದೀಪ್ ಅಭಿನಯದ ವಿಕ್ರಾಂತ್ ರೋಣ ಚಿತ್ರದ ರಾ..ರಾ... ರಕ್ಕಮ್ಮ ಹಾಡಿಗೆ ಇಡೀ ಮೈದಾನವೇ ಹುಚ್ಚೆದ್ದು ಕುಣಿಯಿತು.

ಇದೇ ವೇಳೆ ಪ್ರೀತಂ ಲೈವ್ ಕಾರ್ಯಕ್ರಮ ವೀಕ್ಷಿಸಲು ಆಗಮಿಸಿದ್ದ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಸಚಿವ ಕೆ.ಜೆ.ಜಾರ್ಜ್, ಸಂಸದ ಸುನೀಲ್ ಬೋಸ್ ಸೇರಿದಂತೆ ಹಲವರಿಗೆ ಜಿಲ್ಲಾಡಳಿತ ವತಿಯಿಂದ ಸನ್ಮಾನಿಸಲಾಯಿತು.

ಹಿಂದಿ ಬೇಡ ನಮ್ಗೆ

ಕನ್ನಡ ಹಾಡಿಗೆ ಕರ್ನಾಟಕದಲ್ಲಿ ಬರ ಬಂದಿದೆ. ಕನ್ನಡದಲ್ಲಿ ಒಳ್ಳೆಯ ಹಾಡುಗಾರರು ಯಾರು ಇಲ್ಲ ಅಂತ ಅನ್ಸುತ್ತೆ. ನಮ್ಗೆ ಹಿಂದಿ ಹಾಡುಗಳು ಬೇಡ. ಇದೇನು ಕರ್ನಾಟಕನೋ... ಇಲ್ಲ ಡೆಲ್ಲಿನೋ..! ಕಾರ್ಯಕ್ರಮನಾ ಕನ್ನಡಿಗರಿಗೆ ಮಾಡಿದ್ದಾರಾ. ಇಲ್ಲ ಬೇರೆ ಕಡೆ ಇಂದ ಇಲ್ಲಿಗೆ ಬಂದವರಿಗೆ ಮಾಡಿದ್ದಾರಾ.. ಇವು ಯುವ ದಸರಾ ನೋಡಲು ಬಂದು ಬೇಸರದಿಂದ ಹೊರನಡೆದವರ ಮಾತುಗಳು. ಹಿಂದಿ ಹಾಡುಗಳನ್ನು ಒಪ್ಪದ ಹಿರಿಯರು, ವಯಸ್ಕರು, ಯುವಕರು ಆಕ್ರೋಶ ವ್ಯಕ್ತಪಡಿಸುತ್ತಾ ವಾಪಸ್ಸು ಊರ ದಾರಿ ಹಿಡಿಯುತ್ತಿದ್ದುದ್ದು ಕಂಡುಬಂದಿತು.


ಜಿಲ್ಲಾಡಳಿತದ ವತಿಯಿಂದ ಸಿಎಂ ಸಿದ್ದರಾಮಯ್ಯ ಅವರನ್ನು ಸನ್ಮಾನಿಸಲಾಯಿತು.

ಬಿಗಿ ಪೊಲೀಸ್ ಭದ್ರತೆಯೊಂದಿಗೆ ಮಹಿಷ ಮಂಡಲೋತ್ಸವ ಆಚರಣೆ

ಮೈಸೂರು,ಸೆ.24(ಜಿಎ)–ಮಹಿಷ ಮಂಡಲೋತ್ಸವವನ್ನು ಬಿಗಿ ಪೊಲೀಸ್ ಭದ್ರತೆಯೊಂದಿಗೆ ಆಚರಿಸಲಾಯಿತು. ಮಹಿಷ ಮಂಡಲೋತ್ಸವ ಆಚರಣಾ ಸಮಿತಿ ವತಿಯಿಂದ ಚಾಮುಂಡಿ ಬೆಟ್ಟದ ಮಹಿಷ ಪ್ರತಿಮೆಗೆ ಪುಷ್ಪಾರ್ಚನೆ ಮೂಲಕ ಆರಂಭಗೊಳ್ಳಬೇಕಿದ್ದ ಮಹಿಷ ದಸರಾ ಪೊಲೀಸರ ನಿರ್ಬಂಧದಿಂದಾಗಿ ಪುರಭವನದ ಆವರಣದಲ್ಲಿ ಪುಷ್ಪಾರ್ಚನೆ ಮೊಟಕುಗೊಂಡು ಕೇವಲ ವೇದಿಕೆ ಕಾರ್ಯಕ್ರಮಕ್ಕೆ ಸೀಮಿತವಾಯಿತು.

ವೇದಿಕೆಯಲ್ಲಿ ಇರಿಸಿದ್ದ ಬುದ್ಧ, ಮಹಿಷ, ಅಂಬೇಡ್ಕರ್ ಪ್ರತಿಮೆಗಳಿಗೆ ದ್ರಾವಿಡ ವಿಡುತಲೈ ಕಳಗಂ (ದ್ರಾವಿಡ ಲಿಬರೇಷನ್ ಮೂವ್‌ಮೆಂಟ್)ನ ಕೊಳತ್ತೂರು ಟಿ.ಎಸ್.ಮಣಿ ಪುಷ್ಪಾರ್ಚನೆ ಸಲ್ಲಿಸುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ಪುರಾಣದಲ್ಲಿ ಜನರ ವಿರುದ್ಧ ಇದ್ದವರನ್ನು ನಾಯಕರು, ಸೂರರಾಗಿ, ಜನರ ರಕ್ಷಕರನ್ನು ರಾಕ್ಷಸರಾಗಿ ಮಾಡಲಾಗಿದೆ. ಕುಡಿಯುತ್ತಿದ್ದವರನ್ನು ದೇವರು, ಕುಡಿಯದಿದ್ದವರನ್ನು ರಾಕ್ಷಕರಾಗಿ ಬಿಂಬಿಸಲಾಗಿದೆ. ಭಾರತಕ್ಕೆ ಆರ್ಯರು ನುಗ್ಗಿದ ಬಳಿಕ ಇಂತಹ ಹಲವಾರು ಸೃಷ್ಟಿಗಳು ಆಗಿವೆ ಎಂದರು.

ದ್ರಾವಿಡರ ರಕ್ಷಣೆಗಾಗಿ ಪೆರಿಯಾರ್ ಹಲವಾರು ಹೋರಾಟಗಳನ್ನು ಮಾಡಿದರು. ತಮಿಳುನಾಡಿನಲ್ಲಿ ನಾವು ಮಹಿಷನ ಬಗ್ಗೆ ಮಾತನಾಡಿರಲಿಲ್ಲ. ವಿಚಾರ ಗೊತ್ತಾಗಿ ಅಧ್ಯಯನ ಮಾಡಿದಾಗ ಮಹಿಷನ ಇತಿಹಾಸ ತಿಳಿಯಿತು. ಮಹಿಷನ ಹತ್ಯೆ ಮಾಡಿದ್ದನ್ನು ದಸರಾ, ನವರಾತ್ರಿ ಸೇರಿದಂತೆ ವಿವಿಧ ಹೆಸರಿನಲ್ಲಿ ಆಚರಣೆ ಮಾಡುತ್ತಿದ್ದಾರೆ ಎಂದು ದೂರಿದರು.


ಪುಷ್ಪಾರ್ಚನೆ ಮಾಡುವ ಮೂಲಕ ಮಹಿಷ ಮಂಡಲೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಲಾಯಿತು.

ಸಂಸ್ಕೃತ ದೇವರ ಭಾಷೆ, ಕಲ್ಲಿನಲ್ಲಿ ಕೆತ್ತಿರುವ ಭಾಷೆಯಾಗಿದೆ. ಹೀಗಾಗಿ, ಬುದ್ಧರು ಜನರ ಭಾಷೆಯಾದ ಪಾಲಿಯಲ್ಲಿ ಮಾತನಾಡಿದರು. ಜನರಲ್ಲಿದ್ದ ಮೂಢನಂಬಿಕೆಗಳನ್ನು ಹೋಗಲಾಡಿಸಲು ಶ್ರಮಿಸಿದರು. ಆದರೆ, ಇಂದು ಬುದ್ಧನನ್ನು ವಿಷ್ಣುವಿನ 9ನೇ ಅವತಾರ ಎಂದು ಬಿಂಬಿಸಲಾಗಿದೆ ಎಂದರು.

ರಾಮಾಯಣ ಸೇರಿದಂತೆ ಎಲ್ಲಾ ಪುರಾಣಗಳಲ್ಲಿ ಬುದ್ಧರ ಉಲ್ಲೇಖವಿದೆ. ರಾಮಾಯಣದಲ್ಲಿ ಹನುಮಂತ ಹಾರಿದಾಗ ಬುದ್ಧ ವಿಹಾರಗಳು ಕಾಣುತ್ತಿದ್ದವು ಎಂದು ಬರೆದಿದ್ದಾರೆ. ಹೀಗಾಗಿ ಬುದ್ಧನ ನಂತರವೇ ಪುರಾಣಗಳು ರಚಿಸಲಾಗಿದೆ. ಪುರಾಣಗಳಲ್ಲಿ ಬರುವ ಕಥೆಗಳು, ಘಟನೆಗಳು ಎಲ್ಲವೂ ನಿಜವಲ್ಲ. ನಡೆದಂತಹ ಘಟನೆಗಳಿಗೆ ರೆಕ್ಕೆಪುಕ್ಕಾ ಸೇರಿಸಿ ಸುಳ್ಳು ಪುರಾಣಗಳನ್ನು ರಚಿಸಲಾಗಿದೆ ಎಂದು ತಿಳಿಸಿದರು.

ಚಾಮುಂಡಿಬೆಟ್ಟದಲ್ಲಿನ ಮಹಿಷಾಸುರ ಪ್ರತಿಮೆಗೆ ಪುಷ್ಪಾರ್ಚನೆಗೆ ಅವಕಾಶ ನೀಡದೇ ಪೊಲೀಸರು ನಿಷೇಧಾಜ್ಞೆ ಜಾರಿ ಮಾಡಿರುವುದು ದಸರಾಗೆ ಮಾಡಿದ ಅವಮಾನವಾಗಿದೆ ಎಂದು ಮಹಿಷ ಮಂಡಲೋತ್ಸವ ಆಚರಣಾ ಸಮಿತಿ ಅಧ್ಯಕ್ಷ, ಮಾಜಿ ಮೇಯರ್ ಪುರುಷೋತ್ತಮ್ ಆರೋಪಿಸಿದರು. ದಸರಾ ವೀಕ್ಷಣೆಗೆ ಬಂದ ಪ್ರವಾಸಿಗರು ಪೊಲೀಸರ ನಡೆಯ ಬಗ್ಗೆ ಆಕ್ಷೇಪ ವ್ಯಕ್ತಪಡಿಸುವ ಮೂಲಕ ಇಲ್ಲಿ ಧಾರ್ಮಿಕ ಆಚರಣೆಗೂ ಅವಕಾಶವಿಲ್ಲವೇ ಎಂದು ಪ್ರಶ್ನಿಸುತ್ತಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿ, ಇನ್ನು ಮುಂದೆ ಪ್ರತಿ ತಿಂಗಳು ಹುಣ್ಣಿಮೆ ದಿನ ಮಹಿಷಾಸುರ ಪ್ರತಿಮೆಗೆ ಪುಷ್ಪಾರ್ಚನೆ ಮಾಡಲಾಗುವುದು ಎಂದರು.



ಭಾರತೀಯ ಬೌದ್ಧ ಮಹಾಸಭಾದ ಅಧ್ಯಕ್ಷ ಎಸ್. ಸಿದ್ದರಾಜು ಮಾತನಾಡಿ, ದಸರಾ ಜಂಬೂ ಸವಾರಿ ಮೆರವಣಿಯಲ್ಲಿನ ಅಂಬಾರಿಯಲ್ಲಿ ಸಂವಿಧಾನವನ್ನು ಇರಿಸುವ ಮೂಲಕ ಮೆರವಣಿಗೆ ಮಾಡಬೇಕು ಎಂದು ಸರ್ಕಾರವನ್ನು ಒತ್ತಾಯಿಸಿದರು.

ಕಾರ್ಯಕ್ರಮದಲ್ಲಿ ಗಾಂಧಿ ನಗರದ ಉರಿಲಿಂಗ ಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ, ಪ್ರೊ.ಕೆ.ಎಸ್. ಭಗವಾನ್, ಲೇಖಕ ಎಸ್.ಸಿದ್ದರಾಜು, ಪಾಲಿಕೆ ಮಾಜಿ ಸದಸ್ಯೆ ಪಲ್ಲವಿ ಬೇಗಂ, ಡಾ.ದಿಲೀಪ್ ನರಸಯ್ಯ , ಸೋಮಯ್ಯ ಮಲಿಯೂರು ಉಪಸ್ಥಿತರಿದ್ದರು.

ಪ್ರೊಫೆಸರ್ ಎಮೆರಿಟಸ್ ಪ್ರಶಸ್ತಿ ಪ್ರದಾನ...


ಬೆಂಗಳೂರಿನ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಧನ್ವಂತರಿ ಸಭಾಂಗಣದಲ್ಲಿ ಬುಧವಾರ ವಿಶ್ವವಿದ್ಯಾಲಯದ ವತಿಯಿಂದ ಹಮ್ಮಿಕೊಂಡಿದ್ದ ಶಿಕ್ಷಕರ ದಿನಾಚರಣೆಯಲ್ಲಿ ಮೈಸೂರಿನ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯ ನಿವೃತ್ತ ಮುಖ್ಯ ವೈದ್ಯಕೀಯ ಅಧಿಕಾರಿ ಡಾ.ಬಿ.ಗುರುಬಸವರಾಜ ಹಾಗೂ ಡಾ.ಶಿವಪ್ಪ ಬಿ.ಅನುಶೆಟ್ಟರ್ ಅವರಿಗೆ 'ಪ್ರೊಫೆಸರ್ ಎಮೆರಿಟಸ್ ಪ್ರಶಸ್ತಿ' ನೀಡಿ ಗೌರವಿಸಲಾಯಿತು. ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ್ ಆರ್.ಪಾಟೀಲ್, ವಿಶ್ವವಿದ್ಯಾಲಯದ ಕುಲಪತಿ ಡಾ.ಬಿ.ಸಿ.ಭಗವಾನ್ ಸೇರಿದಂತೆ ಇತರ ಗಣ್ಯರನ್ನು ಚಿತ್ರದಲ್ಲಿ ಕಾಣಬಹುದು.

ಪೈಲ್ವಾನರ ಸೆಣಸಾಟ

ಮೈಸೂರಿನ ವಸ್ತು ಪ್ರದರ್ಶನ ಆವರಣದ ಡಿ.ದೇವರಾಜ ಅರಸ್ ವಿವಿಧೋದ್ದೇಶ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ದಸರಾ ಕುಸ್ತಿ ಪಂದ್ಯಾವಳಿಯಲ್ಲಿ ಬುಧವಾರ ಸೆಣಸಾಡಿದ ಪೈಲ್ವಾನರು.

ಸಾರ್ವಜನಿಕ ತಿಳುವಳಿಕೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ನಮ್ಮ ಕಕ್ಷಿದಾರರು, ಇದೇ ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಬರಡನಪುರಗ್ರಾಮ, 2ನೇ ಬೀದಿ, ಮನೆ ನಂ.119 ರಲ್ಲಿ ವಾಸವಾಗಿರುವ, ಲೇಟ್.ಬಸವಲಿಂಗಪ್ಪ ಉರುಫ್ ಬಸವಲಿಂಗಯ್ಯ ರವರ ಮಗ ಶ್ರೀ.ಬಸವಣ್ಣ ಹಾಗೂ ಇವರ ಧರ್ಮಪತ್ನಿ ಶ್ರೀಮತಿ.ಮಂಜುಳ ಹಾಗೂ ಇವರ ಮಕ್ಕಳಾದ ಶ್ರೀಮತಿ.ಕಾವ್ಯ.ಬಿ ಹಾಗೂ ಶ್ರೀ.ಶಿವಕುಮಾರ್ ಇವರುಗಳ ಸಂಪೂರ್ಣ ಸ್ವಾಧೀನಾನುಭವ ಹಾಗೂ ಮಾಲೀಕತ್ವಕ್ಕೆ ಒಳಪಟ್ಟ ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಬರಡನಪುರ ಗ್ರಾಮ, ಸರ್ವೇ ನಂ. **112/RS1** ಇದರ ಒಟ್ಟು ವಿಸ್ತೀರ್ಣ 2 ಎಕರೆ ಪೈಕಿ 0–20 ಗುಂಟೆ ಜಮೀನು ಇದರ ಪೂರ್ವಕ್ಕೆ : ಸರ್ವೇ ನಂ. **115/RS10,** ಪಶ್ಚಿಮಕ್ಕೆ : ಸರ್ವೇ ನಂ. **111/RS11,** ಉತ್ತರಕ್ಕೆ: ಸರ್ವೇ ನಂ. **112/RS1** ರ ಉಳಿಕೆ ಜಮೀನು ಹಾಗೂ ದಕ್ಷಿಣಕ್ಕೆ: ಸರ್ವೇ ನಂ. **112/RS4** ಮತ್ತು ಸರ್ವೇ ನಂ.**112/RS3** ಈ ಮಧ್ಯೆ ಇರುವ ಮೇಲ್ಕಂಡ ಜಮೀನನ್ನು ನಮ್ಮ ಕಕ್ಷಿದಾರರು ನೋಂದಾಯಿತ ಕ್ರಯ ಪತ್ರದ ಮೂಲಕ ಕ್ರಯಕ್ಕೆ ಪಡೆಯಲು ಇಚ್ಛಿಸಿರುವುದು ಸ–ರಿಯಷ್ಟೆ. ಈ ಮೇಲ್ಕಂಡ ಸ್ವತ್ತಿಗೆ ಸಂಬಂಧಪಟ್ಟಂತೆ ಯಾವುದಾದರು ತಂಟೆ ತಕರಾರುಗಳು ಹಾಗೂ ಕ್ಲೇಮ್ ಗಳಿದ್ದ ಪಕ್ಷದಲ್ಲಿ ಈ ಸಾರ್ವಜನಿಕ ತಿಳುವಳಿಕೆಯು ಪ್ರಕಟಣೆಯಾದ 7 ದಿನಗಳ ಒಳಗಾಗಿ ನಮ್ಮನ್ನು ಈ ಕೆಳಕಂಡ ವಿಳಾಸದ ಕಛೇ–ರಿಯಲ್ಲಿ ಸೂಕ್ತ ದಾಖಲೆಗಳ ಸಮೇತವಾಗಿ ಖುದ್ದಾಗಿ ಅಥವಾ ಲಿಖಿತ ರೂಪದಲ್ಲಿ ತಮ್ಮ ತಕರಾರುಗಳನ್ನು ಸಲ್ಲಿಸತಕ್ಕದ್ದು, ಹಾಗೊಂದು ವೇಳೆ ಯಾವುದೇ ತಂಟೆ ತಕರಾರುಗಳು ಸದರಿ 7 ದಿನಗಳ ಒಳಗಾಗಿ ನಮ್ಮನ್ನು ತಲುಪದಿದ್ದ ಪಕ್ಷದಲ್ಲಿ, ನಮ್ಮ ಕಕ್ಷಿದಾರರು ಮೇಲೆ ಹೇಳಿದ ಸ್ವತ್ತನ್ನು ಖರೀದಿಸಲು ಸಂಪೂರ್ಣವಾಗಿ ಕಾನೂನು ಸಮ್ಮತವಾಗಿ ಹಕ್ಕುಳ್ಳವರಾಗಿರುತ್ತಾರೆ ಎಂದು ಈ ಮೂಲಕ ತಿಳಿಯಪಡಿಸಲಾಗಿರುತ್ತದೆ.

Sd/- N. Mahadevaswamy
B.A.L.,LLB., Advocate/Leagal Advisor,No, 376/A, 12th cross, Ramakrishna Nagara "G" block, Mysore-22. Mobile-9448038689
ದಿನಾಂಕ: 24–09–2025, ಸ್ಥಳ: ಮೈಸೂರು

ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು



ಸಾರ್ವಜನಿಕ ತಿಳುವಳಿಕೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ನಮ್ಮ ಕಕ್ಷಿದಾರರು, ಇದೇ ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಬರಡನಪುರ ಗ್ರಾಮದ ಮೂಲ ನಿವಾಸಿ ಹಾಲಿ ವಾಸ ಮೈಸೂರು ತಾಲ್ಲೂಕು, ಅರಸಿನಕೆರೆ, ಮಾರ್ಬಳ್ಳಿ ಪೋಸ್ಟ್, ಜಯಪುರ ಹೋಬಳಿ, ಹೊಸ ಬೀದಿ ಮನೆ ನಂ.59 ರಲ್ಲಿ ವಾಸವಾಗಿರುವ, ಶ್ರೀ.ಮಹದೇವಪ್ಪ ಮತ್ತು ಶ್ರೀಮತಿ.ಪುಟ್ಟನಂಜಮ್ಮ ರವರುಗಳ ಮಕ್ಕಳಾದ ಶ್ರೀಮತಿ, ಎಂ. ಸುವರ್ಣಮ್ಮ ಶ್ರೀಮತಿ.ಭವಾನಿ ಶ್ರೀ.ಮಹದೇವ ಸ್ವಾಮಿ ಹಾಗೂ ಶ್ರೀ.ಮಹದೇವ ಸ್ವಾಮಿ ಮಕ್ಕಳಾದ ಶ್ರೀಮತಿ ಜ್ಯೋತಿ ಎಂ ಶ್ರೀಮತಿ.ಪಲ್ಲವಿ ಎಂ. ಶ್ರೀ.ಸಂತೋಷ್ ಎಂ ಹಾಗೂ ಶ್ರೀ.ಶಿವಪ್ಪ ರವರ ಮಗ ಶ್ರೀ.ಎನ್ ಸದಾನಂದ ಹಾಗೂ ಶ್ರೀ.ಎಸ್ ಸದಾನಂದ ರವರ ಮಕ್ಕಳಾದ ಶ್ರೀಮತಿ.ಕಾವ್ಯ ಎಸ್ ಮತ್ತು ಶ್ರೀಮತಿ.–ಅಂಜಲಿ ಎಸ್ ಇವರುಗಳ ಸಂಪೂರ್ಣ ಸ್ವಾಧೀನಾನುಭವ ಹಾಗೂ ಮಾಲೀಕತ್ವಕ್ಕೆ ಒಳಪಟ್ಟ ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಬರಡನಪುರ ಗ್ರಾಮ, ಸರ್ವೇ ನಂ. **112/RS2** ಇದರ ಒಟ್ಟು ವಿಸ್ತೀರ್ಣ 0–28 ಗುಂಟೆ ಜಮೀನು ಇದರ ಪೂರ್ವಕ್ಕೆ : ಸರ್ವೇ ನಂ. **115/RS5** ಮತ್ತು **115/RS10,** ಪಶ್ಚಿಮಕ್ಕೆ : ಸರ್ವೇ ನಂ. **32/RS1,** ಉತ್ತರಕ್ಕೆ: ಸರ್ವೇ ನಂ. **112/RS3** ಮತ್ತು **112/RS4** ಹಾಗೂ ದಕ್ಷಿಣಕ್ಕೆ: ಸರ್ವೇ ನಂ. **113/RS 3** ಈ ಮಧ್ಯೆ ಇರುವ ಮೇಲ್ಕಂಡ ಜಮೀನನ್ನು, ನಮ್ಮ ಕಕ್ಷಿದಾರರು ನೋಂದಾಯಿತ ಕ್ರಯ ಪತ್ರದ ಮೂಲಕ ಪ್ರಯಕ್ಕೆ ಪಡೆಯಲು ಇಚ್ಛಿಸಿರುವುದು ಸ–ರಿಯಷ್ಟೆ. ಈ ಮೇಲ್ಕಂಡ ಸ್ವತ್ತಿಗೆ ಸಂಬಂಧಪಟ್ಟಂತೆ ಯಾವುದಾದರು ತಂಟೆ ತಕರಾರುಗಳು ಹಾಗೂ ಪ್ರೇಮ್ ಗಳಿದ್ದ ಪಕ್ಷದಲ್ಲಿ ಈ ಸಾರ್ವಜನಿಕ ತಿಳುವಳಿಕೆಯು ಪ್ರಕಟಣೆಯಾದ 7 ದಿನಗಳ ಒಳಗಾಗಿ ನಮ್ಮನ್ನು ಈ ಕೆಳಕಂಡ ವಿಳಾಸದ ಕಛೇ–ರಿಯಲ್ಲಿ ಸೂಕ್ತ ದಾಖಲೆಗಳ ಸಮೇತವಾಗಿ ಖುದ್ದಾಗಿ ಅಥವಾ ಅಹಿತ ರೂಪದಲ್ಲಿ ತಮ್ಮ ತಕರಾರುಗಳನ್ನು ಸಲ್ಲಿಸತಕ್ಕದ್ದು, ಹಾಗೊಂದು ವೇಳೆ ಯಾವುದೇ ತಂಟೆ ತಕರಾರುಗಳು ಸದರಿ 7 ದಿನಗಳ ಒಳಗಾಗಿ ನಮ್ಮನ್ನು ತಲುಪದಿದ್ದ ಪಕ್ಷದಲ್ಲಿ, ನಮ್ಮ ಕಕ್ಷಿದಾರರು ಮೇಲೆ ಹೇಳಿದ ಸ್ವತ್ತನ್ನು ಖರೀರಿಸಲು ಸಂಪೂರ್ಣವಾಗಿ ಕಾನೂನು ಸಮ್ಮತವಾಗಿ ಹಕ್ಕುಳ್ಳವರಾಗಿರುತ್ತಾರೆ ಎಂದು ಈಮೂಲಕ ತಿಳಿಯಪಡಿಸಲಾಗಿರುತ್ತದೆ.

Sd/- N. Mahadevaswamy
B.A.L.,LLB., Advocate/Leagal Advisor,No, 376/A, 12th cross, Ramakrishna Nagara "G" block, Mysore-22. Mobile-9448038689
ದಿನಾಂಕ: 24–09–2025, ಸ್ಥಳ: ಮೈಸೂರು

ಕನ್ನಡ ಸಾಹಿತ್ಯವನ್ನು ವಿಶ್ವಮಟ್ಟಕ್ಕೆ ಕೊಂಡೊಯ್ದವರು ಭೈರಪ್ಪನವರು

ಗಣ್ಯರ ಸಂತಾಪ

ಸಿಎಂ ಸಿದ್ದರಾಮಯ್ಯ ಸಂತಾಪ



ಕನ್ನಡ ಸಾರಸ್ವತ ಲೋಕದ ಹಿರಿಯ ಬರಹಗಾರರಾದ ಎಸ್.ಎಲ್. ಭೈರಪ್ಪನವರ ನಿಧನವಾರ್ತೆ ನೋವು ತಂದಿದೆ. ಭೈರಪ್ಪನವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಪ್ರಾರ್ಥಿಸುತ್ತೇನೆ ಎಂದು ಸಿಎಂ ಸಿದ್ದರಾಮಯ್ಯ ಸಾಮಾಜಿಕ ಜಾಲತಾಣದಲ್ಲಿ ಸಂತಾಪ ಸೂಚಿಸಿದ್ದಾರೆ.

ಓದುವ ವಿಧಾನವನ್ನೇ ಬದಲಿಸಿದ ಕಾದಂಬರಿಕಾರ

ಮಹಾಭಾರತ ಮತ್ತು ರಾಮಾಯಣವನ್ನು ಗ್ರಹಿಸುವ ಮತ್ತು ಓದುವ ವಿಧಾನವನ್ನೇ ತಮ್ಮ ಪರ್ವ ಮತ್ತು ಉತ್ತರಕಾಂಡದ ಕಾದಂಬರಿಗಳ ಮೂಲಕ ಪರಿವರ್ತಿಸಿದ ಖ್ಯಾತ ಕಾದಂಬರಿಕಾರ ಮತ್ತು ಪದ್ಮಭೂಷಣ ಪ್ರಶಸ್ತಿ ಪುರಸ್ಕೃತ ಎಸ್.ಎಲ್.ಭೈರಪ್ಪ ಅವರ ನಿಧನದ ಸುದ್ದಿ ತೀವ್ರ ಆಘಾತವನ್ನುಂಟು ಮಾಡಿದೆ. ಭೈರಪ್ಪ ಅವರ ಕಾದಂಬರಿಗಳನ್ನು ನಾನು ಓದಿದ್ದೇನೆ ಮತ್ತು ಅವರ



ನಿರೂಪಣಾ ಶೈಲಿ ಮತ್ತು ಪಾತ್ರ ಸೃಷ್ಟಿಯಲ್ಲಿನ ಅವರ ಪ್ರತಿಭೆಯಿಂದ ಆಳವಾಗಿ ಆಕರ್ಷಿತನಾಗಿದ್ದೇನೆ. ಅವರು ಕರ್ನಾಟಕದಲ್ಲಿ ಜನಿಸಿದ ಮತ್ತು ಕನ್ನಡದಲ್ಲಿಯೇ ಬರೆಯುವ ನಿಜವಾದ ಭಾರತೀಯ ಕಾದಂಬರಿಕಾರರಾಗಿದ್ದರು. ಈ ಅಮರ ಪ್ರತಿಭೆ ಹಾಸನ ಜಿಲ್ಲೆಯಲ್ಲಿ ಜನಿಸಿದರು ಎಂಬ ಬಗ್ಗೆ ನನಗೆ ಹೆಮ್ಮೆ ಇದೆ. ಅವರ ನಿಧನವು ನನಗೆ ಅಪಾರ ವೈಯಕ್ತಿಕ ದುಃಖವನ್ನುಂಟು ಮಾಡಿದೆ. ಅವರ ಆತ್ಮಕ್ಕೆ ಶಾಶ್ವತ ಶಾಂತಿ ಸಿಗಲಿ ಮತ್ತು ಅವರ ಕುಟುಂಬ ಸದಸ್ಯರು ಮತ್ತು ಅಭಿಮಾನಿಗಳಿಗೆ ಈ ದುಃಖವನ್ನು ಭರಿಸುವ ಶಕ್ತಿಯನ್ನು ದೇವರು ನೀಡಲಿ ಎಂದು ನಾನು ಪ್ರಾರ್ಥಿಸುತ್ತೇನೆ.

-ಹೆಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

ಭೈರಪ್ಪನವರ ಬದುಕು ಕೊನೆಯಿಲ್ಲದ 'ಯಾನ'

ಭೈರಪ್ಪನವರ ಬದುಕು ಕೊನೆಯಿಲ್ಲದ 'ಯಾನ', ಹಿಮಾಲಯದಷ್ಟೇ ಎತ್ತರದ ವ್ಯಕ್ತಿತ್ವ ಅವರದ್ದು, ತಮ್ಮ ಕಾದಂಬರಿಯ ಮೂಲಕವೇ ವಿಜ್ಞಾನಿಗಳು ಯೋಚಿಸಲೂ ಸಾಧ್ಯವಾಗದ ಪಾತ್ರಗಳನ್ನು ಸೃಷ್ಟಿಸಿದವರು. ಈ ನವರಾತ್ರಿಯ ಸಂದರ್ಭದಲ್ಲಿ ಅವರನ್ನು ಕಳೆದುಕೊಂಡಿದ್ದು ಬಹಳ ದುಃಖ ತಂದಿದೆ. ನಾವೆಲ್ಲರೂ ಭೈರಪ್ಪನವರ ಕಾದಂಬರಿ ಓದಿ ಮೆಚ್ಚಿದವರು. ಅವರ 'ನಾಯಿ ನೆರಳು' ಕಾದಂಬರಿ ಸಿನಿಮಾ ಆಗಿ ಪರಿವರ್ತನೆ ಆಯಿತು. ನನಗೆ ಮುಖ್ಯಪಾತ್ರದಲ್ಲಿ ಅವಕಾಶ ಮಾಡಿಕೊಟ್ಟರು. ಅಲ್ಲಿಂದಲೇ ನನ್ನ ನಟನೆ ಆರಂಭವಾಯಿತು ಎಂದು ತಿಳಿಸಿದರು. 'ಯಾನ' ನನ್ನ ನೆಚ್ಚಿನ ಕಾದಂಬರಿ. ಇಡೀ ವಿಶ್ವದಲ್ಲೇ ಆ ರೀತಿಯ ಸ್ಪೇಸ್ (ಬಾಹ್ಯಾಕಾಶ) ಸೃಷ್ಟಿಸಿ ಯಾರೂ ಬರೆದಿಲ್ಲ. ವಿಜ್ಞಾನಿಗಳಿಗೂ ಯೋಚನೆ ಮಾಡಲು ಸಾಧ್ಯವಾಗದಂತಹ ಸ್ಪೇಸ್ ಅದು. ನಮ್ಮ ಹಿಂದೂ ತತ್ವಶಾಸ್ತ್ರವನ್ನು ಯಾರು ಅಭ್ಯಾಸ ಮಾಡಿದ್ದಾರೋ ಅವರು ಮಾತ್ರ ಅರ್ಥ ಮಾಡಿಕೊಳ್ಳೋದಕ್ಕೆ ಸಾಧ್ಯ.



-ಅನಂತನಾಗ್, ಹಿರಿಯ ನಟ

ಬೃಹತ್ ಓದುಗ ವರ್ಗವನ್ನೇ ಸೃಷ್ಟಿಸಿಕೊಂಡಿದ್ದರು

ಕನ್ನಡ ಹಾಗೂ ದೇಶದ ಸಾಹಿತ್ಯ ಲೋಕದ ಕೊಂಡಿಯಾಗಿದ್ದ ಅವರು ತಮ್ಮ ಕಾದಂಬರಿಗಳಿಂದ ಬೃಹತ್ ಓದುಗ ವರ್ಗವನ್ನೇ ಸೃಷ್ಟಿಸಿಕೊಂಡಿದ್ದರು. ಹಿಂದಿ, ಇಂಗ್ಲಿಷ್ ಸೇರಿದಂತೆ ಭಾರತೀಯ ಇತರೆ ಭಾಷೆಗಳಿಗೆ ಇವರ ಕಾದಂಬರಿಗಳು ಅನುವಾದಗೊಂಡು ಸಾಕಷ್ಟು ಪ್ರಸಿದ್ಧಿ ಪಡೆದಿದ್ದವು. ನಾಲ್ಕು ದಶಕಗಳಲ್ಲಿ ಅನೇಕ ಕಾದಂಬರಿಗಳನ್ನು ರಚಿಸಿದ್ದರು. ಇವರ ಬರಹ ನಡೆ, ನುಡಿ ಸಾಹಿತ್ಯ ಲೋಕದಲ್ಲಿ ಸದಾ ಚರ್ಚೆಗೆ ಒಳಗಾಗುತ್ತಿತ್ತು. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಸರಸ್ವತಿ ಸಮ್ಮಾನ್, ಪದ್ಮಭೂಷಣ,



ಪದ್ಮಶ್ರೀ, ನಾಡೋಜ ಸೇರಿದಂತೆ ಹಲವಾರು ಪ್ರಶಸ್ತಿಗಳಿಗೆ ಭಾಜನರಾಗಿದ್ದ ಇವರ ನಿಧನದಿಂದ ಕನ್ನಡ ಸಾರಸ್ವತ ಲೋಕದ ತಲೆಮಾರಿನ ಅದ್ಭುತ ಪ್ರತಿಭೆ ಕಣ್ಮರೆಯಾದಂತಾಗಿದೆ. 1999ರಲ್ಲಿ ಕನಕಪುರಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಭೈರಪ್ಪ ಅವರು ಆಯ್ಕೆಯಾಗಿದ್ದರು. ಭೈರಪ್ಪನವರ ಕುಟುಂಬ ವರ್ಗ, ಬಂಧುಗಳು, ಅಪಾರ ಅಭಿಮಾನಿಗಳಿಗೆ ಅವರ ನಿಧನದ ದುಃಖ ಭರಿಸುವ ಶಕ್ತಿಯನ್ನು ಆ ಭಗವಂತ ಕರುಣಿಸಲಿ ಎಂದು ಪ್ರಾರ್ಥನೆ ಮಾಡುತ್ತೇನೆ.

-ಡಿ.ಕೆ.ಶಿವಕುಮಾರ್, ಉಪ ಮುಖ್ಯಮಂತ್ರಿ

ಸಾಹಿತ್ಯ ಲೋಕಕ್ಕೆ ತುಂಬಲಾರದ ನಷ್ಟ

ದೇಶ ಕಂಡ ಶ್ರೇಷ್ಠ ಸಾಹಿತಿಗಳಲ್ಲಿ ಎಸ್.ಎಲ್.ಭೈರಪ್ಪ ಕೂಡ ಒಬ್ಬರು. ಜನಪ್ರಿಯತೆ ಹಾಗೂ ಚಿಂತನಾಶೀಲರಾಗಿದ್ದ ಭೈರಪ್ಪ ಅವರು ಸರಸ್ವತಿ ಸನ್ಮಾನ್, ಪದ್ಮಭೂಷಣ ಸೇರಿದಂತೆ ಹಲವು ಪ್ರಶಸ್ತಿ ಪುರಸ್ಕತರು. ಭೈರಪ್ಪ ಅವರ ಕೃತಿಗಳು ದೇಶದ ವಿವಿಧ ಭಾಷೆಗಳಿಗೆ ಅನುವಾದವಾಗಿ ಅಲ್ಲೂ ಬೇಡಿಕೆ ಪಡೆದಿತ್ತು. ಒಂದಕ್ಕಿಂತ ಒಂದು ಭಿನ್ನವಾಗಿದ್ದ ಅವರ ಕಾದಂಬರಿಗಳು ಓದುಗರಲ್ಲಿ ವಿಶಿಷ್ಟ ಅನುಭವ ಮೂಡಿಸುತ್ತಿತ್ತು. ಎಸ್.ಎಲ್.ಭೈರಪ್ಪ ಅವರ ನಿಧನದಿಂದ ಅವರ ಕುಟುಂಬಕ್ಕಷ್ಟೇ ಅಲ್ಲದೆ ಇಡೀ ಸಾಹಿತ್ಯ ಲೋಕಕ್ಕೆ ತುಂಬಲಾಗದ ನಷ್ಟವಾಗಿದೆ.



- ಜಿ.ಟಿ.ದೇವೇಗೌಡರು, ಚಾಮುಂಡೇಶ್ವರಿ ಕ್ಷೇತ್ರದ ಶಾಸಕರು

ಅವರ ನೇರ, ನಡೆ, ನುಡಿ ಮಾದರಿ



ಎಸ್.ಎಲ್.ಭೈರಪ್ಪ ಅವರು ಶ್ರೇಷ್ಠ ಕಾದಂಬರಿಕಾರರಾಗಿದ್ದಾರೆ. ನೇರ, ನಡೆ, ನುಡಿಯ ಭೈರಪ್ಪ ಅವರ ವ್ಯಕ್ತಿತ್ವ ಇತರರಿಗೆ ಮಾದರಿಯಾಗಿದೆ. ನಾನು ಶಾಸಕನಾಗಿ ಆಯ್ಕೆಯಾದ ನಂತರ ಮೂರು ಬಾರಿ ಅವರನ್ನು ಭೇಟಿ ಮಾಡಿ, ಅವರ ಆಶೀರ್ವಾದ ಪಡೆದಿದ್ದೇನೆ. ಭೈರಪ್ಪ ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ದೇವರನ್ನು ಬೇಡುತ್ತೇನೆ.

-ಟಿ.ಎಸ್.ಶ್ರೀವತ್ಸ, ಶಾಸಕರು, ಕೆ.ಆರ್.ಕ್ಷೇತ್ರ

ಕನ್ನಡ ಸಾಹಿತ್ಯದ ಸಾಕ್ಷ್ಯಪ್ರಜ್ಞೆ



ಎಸ್.ಎಲ್. ಭೈರಪ್ಪನವರು ಈ ನಾಡು ಕಂಡ ಶ್ರೇಷ್ಠ ಚಿಂತಕರು, ದಾರ್ಶನಿಕರು, ಬರಹಗಾರರು. ಅವರ ಕೃತಿಗಳು ವಿಶೇಷತೆ ಹಾಗೂ ವಿಭಿನ್ನತೆಯಿಂದ ಕೂಡಿರುತ್ತಿತ್ತು. ನಾನು ಚಿಕ್ಕ ವಯಸ್ಸಿನಿಂದಲೂ ಅವರ ಕೃತಿಗಳನ್ನು ಓದುತ್ತಾ ಬಂದಿದ್ದೇನೆ. ಅವರ ಪ್ರತಿ ಕೃತಿಯೂ ಅತ್ಯಂತ ಆಳವಾದ ಅಧ್ಯಯನಶೀಲತೆಯಿಂದ ಕೂಡಿರುತ್ತಿತ್ತು. ಅವರ 'ಮತದಾನ' ಕಾದಂಬರಿಯಲ್ಲಿ ಜಾತಿ ಆಧಾರಿತ ರಾಜಕೀಯ ವ್ಯವಸ್ಥೆ ಮತ್ತು ಪ್ರಜಾಪ್ರಭುತ್ವದ ಹಿಡಿತದ ಬಗ್ಗೆ ಬರೆದಿದ್ದಾರೆ. ಭೈರಪ್ಪನವರ ಯಾವುದೇ ಕೃತಿಯನ್ನು ಅಧ್ಯಯನ ಮಾಡಿದರೆ ನಮಗೆ ಹೊಸ ಜಗತ್ತಿನ ಪರಿಚಯವಾದಂತೆ ಭಾಸವಾಗುತ್ತದೆ. ಅವರ ಕೃತಿಗಳು ವೈವಿಧ್ಯತೆಯಿಂದ ಕೂಡಿದ್ದು, ಹೆಚ್ಚು ಚರ್ಚೆಗೆ ಒಳಪಡುತ್ತಿದ್ದವು. ಅಂತಹ ಸಾಹಿತ್ಯ ದಿಗ್ಗಜರ ನಿಧನ ನಾಡಿಗೆ ತುಂಬಲಾರದ ನಷ್ಟ.

- ಎಂ.ಕೆ. ಸೋಮಶೇಖರ್, ಮಾಜಿ ಶಾಸಕರು.

ಭೈರಪ್ಪ ಅವರ ನಿಧನದಿಂದ ಶೂನ್ಯ ವಾತಾವರಣ



ಸರಸ್ವತಿ ಸಮ್ಮಾನ್, ಪದ್ಮಭೂಷಣ ಪುರಸ್ಕೃತ ಸಾಹಿತಿ ಎಸ್.ಎಲ್.ಭೈರಪ್ಪ ಅವರ ನಿಧನದಿಂದ ಸಾಹಿತ್ಯ ಲೋಕದಲ್ಲಿ ಶೂನ್ಯ ವಾತಾವರಣ ನಿರ್ಮಾಣವಾಗಿದೆ. ರಾಷ್ಟ್ರ ಹಾಗೂ ಕನ್ನಡ ಬದ್ಧತೆಯು ಭೈರಪ್ಪನವರ ಎರಡು ಕಣ್ಣುಗಳಾಗಿದ್ದವು. ಶತಾಯುಷಿಗಳಾಗುತ್ತಾರೆ ಎಂದು ನಿರೀಕ್ಷೆ ಹೊಂದಿದ್ದ ಭೈರಪ್ಪ ಅವರ ಅಪಾರ ಓದುಗ ಅಭಿಮಾನಿಗಳಿಗೆ ನಿರಾಸೆಯಾಗಿದೆ. ಭೈರಪ್ಪ ಅವರು ಬಿಟ್ಟು ಹೋದ ಕಾದಂಬರಿ, ಸಾಹಿತ್ಯಗಳು ಧ್ರುವತಾರೆಗಳಂತೆ ಮಿನುಗಲಿ.

-ರಘು ಕೌಟಿಲ್ಯ, ರಾಜ್ಯಾಧ್ಯಕ್ಷ, ಬಿಜೆಪಿ ಹಿಂದುಳಿದ ಮೋರ್ಚಾ

ಮೌನ ಜ್ಞಾನಿಯಾಗಿ ಸಾಹಿತ್ಯ ಕೃಷಿ ಮಾಡಿದ್ದಾರೆ

ಎಸ್.ಎಲ್.ಭೈರಪ್ಪ ಅವರಲ್ಲಿ ಮಾತು ಕಡಿಮೆಯಾಗಿದ್ದರೆ, ಬರಹ ಹೆಚ್ಚಾಗಿರುತ್ತಿತ್ತು. ಮೌನ ಜ್ಞಾನಿಯಾದ ಭೈರಪ್ಪ ಅವರು ಸಾಹಿತ್ಯ ಕೃಷಿಯಲ್ಲಿ ಅದ್ವಿತೀಯ ಸಾಧನೆ ಮಾಡಿದ್ದಾರೆ. ಸಾಧನೆಯ ಶಿಖರದಲ್ಲಿದ್ದ ಭೈರಪ್ಪ ಅವರು ಪ್ರಚಾರದಿಂದ ದೂರ ಇರುತ್ತಿದ್ದರು. ನಾನು ಭೈರಪ್ಪ ಅವರನ್ನು ಅನೇಕ ಬಾರಿ ಸಂದರ್ಶಿಸಿದ್ದೇನೆ. ಅದರಲ್ಲಿ ಕೊರೊನಾ ಸಮಯದಲ್ಲಿ ಮಾಡಿದ್ದ ಸಂದರ್ಶನ ನನ್ನ ಮನಸ್ಸಿನಲ್ಲಿ ಹಚ್ಚ ಹಸಿರಾಗಿದೆ. ಕೊರೊನಾ ಸಮಯದಲ್ಲಿ ಯಾರು, ಯಾರನ್ನು ಭೇಟಿಯಾಗದ ಪರಿಸ್ಥಿತಿ ಇತ್ತು. ಆದರೆ ಆ ಸಮಯದಲ್ಲಿ ಭೈರಪ್ಪ ಅವರು ನನಗೆ ಸಂದರ್ಶನ ನೀಡಿದ್ದರು.



- ರಾಮ್, ಟಿವಿ9 ಮೈಸೂರು.

ಭಾರತೀಯ ಸಾಹಿತ್ಯದ ಮೇಲೆ ಶಾಶ್ವತ ಪ್ರಭಾವ

ಎಸ್.ಎಲ್.ಭೈರಪ್ಪ ಅವರ ಕೃತಿಗಳು ಸತ್ಯ, ಸಂಸ್ಕೃತಿ ಮತ್ತು ತತ್ವಶಾಸ್ತ್ರವನ್ನು ಬಿಂಬಿಸುತ್ತವೆ. ಕನ್ನಡ ಮತ್ತು ಭಾರತೀಯ ಸಾಹಿತ್ಯದ ಮೇಲೆ ಶಾಶ್ವತವಾದ ಪ್ರಭಾವ ಬೀರಿದೆ. ಹಲವು ಪ್ರಶಸ್ತಿ, ಬಿರುದುಗಳನ್ನು ಪಡೆದಿರುವ ಭೈರಪ್ಪ ಅವರ ನಿಧನದಿಂದ ಸಾಹಿತ್ಯ ಲೋಕಕ್ಕೆ ತುಂಬಲಾರದ ನಷ್ಟವಾಗಿದೆ. -ಸಿ.ಎಸ್.ಅಚ್ಯುತ, ಹೊಯ್ಸಳ ಕರ್ನಾಟಕ ಸಂಘ ಚಾರಿಟಬಲ್ ಟ್ರಸ್ಟ್

ಅಪರೂಪದಲ್ಲಿ ಅಪರೂಪದ ವ್ಯಕ್ತಿತ್ವ



ಎಸ್.ಎಲ್.ಭೈರಪ್ಪ ಅವರದು ಅಪರೂಪದಲ್ಲಿ ಅಪರೂಪದ ವ್ಯಕ್ತಿತ್ವವಾಗಿದೆ. ಅವರ ನಡೆ, ನುಡಿಯಲ್ಲಿನ ಸರಳತೆ ಅನುಕರಣೀಯವಾಗಿದೆ. ಭೈರಪ್ಪ ಅವರಿಗೆ ಸರಸ್ವತಿ ಸಮ್ಮಾನ್ ಸೇರಿದಂತೆ ಹಲವು ಪ್ರಶಸ್ತಿಗಳು ಬಂದಿದೆ. ಇದೆಲ್ಲವೂ ಅವರ ಸಾಧನೆಗೆ ದೊರೆತ ಗೌರವಗಳಾಗಿವೆ. ಭೈರಪ್ಪ ಅವರ ನಿಧನ ಸಾಹಿತ್ಯ ಕ್ಷೇತ್ರಕ್ಕೆ ತುಂಬಲಾಗದ ನಷ್ಟವಾಗಿದೆ.

-ಹೆಚ್.ಎ.ವೆಂಕಟೇಶ್, ಮಾಜಿ ಅಧ್ಯಕ್ಷ, ಮೈಲ್ಯಾಕ್

ಅಪ್ರತಿಮ ದೇಶಪ್ರೇಮಿ

ಎಸ್.ಎಲ್.ಭೈರಪ್ಪ ಅವರು ಸದಾ ಅಧ್ಯಯನಶೀಲ, ಸೃಜನಶೀಲ, ಸಾಮಾಜಿಕ ಕಳಕಳಿಯುಳ್ಳ ಲೇಖಕರಾಗಿದ್ದರು. ನನ್ನ ವೈದ್ಯಕೀಯ ಲೇಖನಗಳ ಬಗ್ಗೆ ಅತೀವ ಸಂತಸ ವ್ಯಕ್ತಪಡಿಸುತ್ತಿದ್ದ ಭೈರಪ್ಪ ಅವರು, ನಾನು ಬರೆಯುತ್ತಿದ್ದ ಆರೋಗ್ಯ ದರ್ಶನ, ಆಧ್ಯಾತ್ಮಿಕ ಆರೋಗ್ಯ ದರ್ಶನ ಕೃತಿಗಳನ್ನು ಓದಿ ಬೆನ್ನು ತಟ್ಟುತ್ತಿದ್ದರು. ಇಂದು ದೇಶದ ಒಬ್ಬ ಅಪ್ರತಿಮ ದೇಶಪ್ರೇಮಿ, ಭಾರತೀಯ ಸಂಸ್ಕೃತಿಯ ಪ್ರೇಮಿ, ದೊಡ್ಡ ಲೇಖಕನನ್ನು ಕಳೆದುಕೊಂಡಿದ್ದೇವೆ.



-ಡಾ.ಎಸ್.ಪಿ.ಯೋಗಣ್ಣ, ವೈದ್ಯ ಸಾಹಿತಿ

ದಸರಾ ಪುಸ್ತಕ ಮೇಳದಲ್ಲಿ ಭೈರಪ್ಪನವರಿಗೆ ನುಡಿನಮನ



ಡಾ.ಎಸ್.ಎಲ್.ಭೈರಪ್ಪನವರ ನಿಧನಕ್ಕೆ ಮೈಸೂರು ದಸರಾ ಪುಸ್ತಕ ಮೇಳದಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರ ಹಾಗೂ ವಿವಿಧ ಪ್ರಕಾಶಕರು ಶ್ರದ್ಧಾಂಜಲಿ ಅರ್ಪಿಸಿದರು.

ಮೈಸೂರು,ಸೆ.24(ಎಸ್‌ಪಿಎನ್)– ಕನ್ನಡ ಸಾಹಿತ್ಯ ಕ್ಷೇತ್ರವನ್ನು ಅಂತರರಾಷ್ಟ್ರೀಯ ಮಟ್ಟಕ್ಕೆ ಪಸರಿಸುವಂತೆ ಮಾಡಿದ ಕೀರ್ತಿ ಡಾ.ಎಸ್.ಎಲ್.ಭೈರಪ್ಪನವರಿಗೆ ಸಲ್ಲುತ್ತದೆ. ಅವರ ನಿಧನದಿಂದ ನಾಡಿಗೆ ತುಂಬಲಾರದ ನಷ್ಟವಾಗಿದೆ ಎಂದು ಹಿರಿಯ ಬರಹಗಾರ ಡಾ.ರಾಜಪ್ಪ ದಳವಾಯಿ ನುಡಿನಮನ ಸಲ್ಲಿಸಿದರು.

ಮೈಸೂರು ಹಳೆ ಜಿಲ್ಲಾಧಿಕಾರಿಗಳ ಕಚೇರಿ ಹಿಂಭಾಗದ ಸ್ಕೌಟ್ಸ್ ಮತ್ತು ಗೈಡ್ಸ್ ಮೈದಾನದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮೈಸೂರು ದಸರಾ ಮಹೋತ್ಸವ ಸಮಿತಿ ಹಾಗೂ ಬೆಂಗಳೂರು ಕನ್ನಡ ಪುಸ್ತಕ ಪ್ರಾಧಿಕಾರದ ಸಹಯೋಗದೊಂದಿಗೆ ಆಯೋಜಿಸಿದ್ದ ಸಾಹಿತಿಗಳೊಂದಿಗೆ ಸೆಲ್ಫಿ, ಸುಗಮ ಸಂಗೀತ ಹಾಗೂ ಇಂದು ನಿಧನರಾದ ಹಿರಿಯ ಸಾಹಿತಿ ಡಾ.ಎಸ್.ಎಲ್.ಭೈರಪ್ಪನವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ನುಡಿನಮನ ಸಲ್ಲಿಸಿದರು.

ಡಾ.ಎಸ್.ಎಲ್.ಭೈರಪ್ಪನವರು ಆಧುನಿಕ ಕನ್ನಡ ಸಾಹಿತ್ಯದ ಪ್ರಮುಖ ಕಾದಂಬರಿಕಾರರಲ್ಲಿ ಪ್ರಮುಖರು. ಇವರು ಬರೆದಿರುವ ಬಹುತೇಕ ಕಾದಂಬರಿಗಳು ದೇಶದ ಬೇರೆ ಬೇರೆ ಭಾಷೆಗೆ ಅನುವಾದಗೊಂಡಿವೆ. ಇನ್ನೂ ಕೆಲವು ಇಂಗ್ಲಿಷ್ ಭಾಷೆಗೂ ಅನುವಾದಗೊಂಡಿವೆ. 22ಕ್ಕೂ ಕೃತಿಗಳನ್ನು ರಚಿಸಿದ್ದಾರೆ. ಅವರು ರಚಿಸಿದ ಗೃಹಭಂಗ, ವಂಶವೃಕ್ಷ, ನಾಯಿನೆರಳು ಸೇರಿದಂತೆ ಹಲವು ಕೃತಿಗಳು ಬಹಳ ಜನರನ್ನು ತಲುಪಿವೆ. ಇವರ ಅಗಲಿಕೆ ಸಾಹಿತ್ಯ ಲೋಕಕ್ಕೆ ಅಪಾರ ನಷ್ಟವಾಗಿದೆ ಎಂದು ನುಡಿನಮನ ಸಲ್ಲಿಸಿದರು.

ದಸರಾ ಮಹೋತ್ಸವದಲ್ಲಿ ರಾಜ್ಯ ಸರ್ಕಾರ, ಪುಸ್ತಕ ಮೇಳಕ್ಕೆ ಆದ್ಯತೆ ನೀಡಿರುವುದು ಸಂತೋಷ ಸಂಗತಿ. ಮೈಸೂರು ಪುಸ್ತಕ ಪ್ರಿಯರು ಈ ಮೇಳಕ್ಕೆ ಆಗಮಿಸಿ, ತಮಗಿಷ್ಟದ ಪುಸ್ತಕಗಳನ್ನು ಖರೀದಿಸುವಂತೆ ಮನವಿ ಮಾಡಿದ ಅವರು, ನಿಮ್ಮ ಮನೆಗಳಲ್ಲಿ ಪುಸ್ತಕಗಳನ್ನು ಜೋಡಿಸಿಟ್ಟರೆ, ಕಳವಿಗೆ ಬರುವ ಕಳ್ಳ, ಪುಸ್ತಕ ರಾಶಿಯನ್ನು ನೋಡಿ, ಬಂದ ದಾರಿಗೆ ಸುಂಕವಿಲ್ಲದಂತೆ ಬರಿಗೈಯಲ್ಲಿ ಹಿಂದಿರುಗುತ್ತಾನೆ ಎಂದು ಹಾಸ್ಯ ಚಟಾಕಿ ಹಾರಿಸಿದರು.

ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಮಾನಸ ನುಡಿನಮನ ಸಲ್ಲಿಸುತ್ತಾ, ಡಾ.ಎಸ್.ಎಲ್.ಭೈರಪ್ಪನವರ ಕಾದಂಬರಿಗಳು ಸಾರ್ವಕಾಲಿಕ. ಅವರು ರಚಿಸಿರುವ ಒಂದೊಂದು ಕಾದಂಬರಿಗಳು ನೂರಾರು ವರ್ಷ ಜನಮಾನಸದಲ್ಲಿರುತ್ತವೆ. ಅವರು ಹೆಚ್ಚು ಜನರೊಂದಿಗೆ ಬೆರೆಯದಿದ್ದರೂ, ಸದಾ ಸಂಶೋಧನಾತ್ಮಕ ಸಾಹಿತ್ಯ ಕೃಷಿಗೆ ಒತ್ತು ನೀಡುತ್ತಿದ್ದರು. ಭೈರಪ್ಪನವರ ನಿಧನದಿಂದ ಸಾಹಿತ್ಯ ಕ್ಷೇತ್ರ ಬಡವಾಗಿದೆ ಎಂದು ನುಡಿನಮನ ಸಲ್ಲಿಸಿದರು.

ಭೈರಪ್ಪನವರ ಕಾದಂಬರಿಗಳಿಗೆ ರಾಜ್ಯ, ದೇಶ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಅಪಾರ ಓದುಗ ಬಳಗವಿದೆ. ಅವರ ಕಾದಂಬರಿಗಳು ಒಮ್ಮೆ ಪ್ರಕಟವಾದರೆ, ದೇಶದ ಬಹುತೇಕ ಭಾಷೆಗಳಿಗೆ ಅನುವಾದಗೊಳ್ಳುತ್ತಿದ್ದವು. ಅಲ್ಲದೆ, ಅನೇಕ ಮುದ್ರಣಗಳನ್ನು ಕಂಡಿವೆ. ಅವರ ಕಾದಂಬರಿಗಳು ಎಲ್ಲಾ ಗಡಿಗಳನ್ನು ದಾಟಿ ಓದುಗರನ್ನು ತಲುಪಿವಿರುವುದು ಕನ್ನಡ ಸಾರಸ್ವತ ಲೋಕದ ಹೆಮ್ಮೆಯ ಸಂಗತಿ.

- ಡಾ.ರಾಜಪ್ಪ ದಳವಾಯಿ, ಹಿರಿಯ ಬರಹಗಾರ

ಹುಬ್ಬಳ್ಳಿಯ ಕವಿಯತ್ರಿ ಡಾ.ಸುಕನ್ಯಾ ಮಾರುತಿ ಮಾತನಾಡಿ, ಡಾ.ಎಸ್.ಎಲ್.ಭೈರಪ್ಪ ಎಲ್ಲಾ ವರ್ಗದ ಓದುಗರನ್ನು ತಲುಪಿದ ಕೀರ್ತಿ ಭೈರಪ್ಪನವರ ಕಾದಂಬರಿಗಳಿಗೆ ಸಲ್ಲುತ್ತವೆ. ಸಾರಸ್ವತ ಲೋಕದಲ್ಲಿ ಅವರು ಪುಸ್ತಕಗಳನ್ನು ಹೊಸಹೊಸ ಓದುಗರನ್ನು ಸೃಷ್ಟಿಸಿವೆ. ಅವರು ರಚಿಸಿರುವ ವಂಶವೃಕ್ಷ, ದೂರಸರಿದವರು ಪುಸ್ತಕಗಳನ್ನು ಪ್ರೇರಣೆಯಾಗಿ, ನಾನು ಸಾಹಿತ್ಯ ರಚನೆಗೆ ಮುಂದಾದ ಪ್ರಸಂಗವನ್ನು ವಿವರಿಸಿದರಲ್ಲದೆ ಸೈದ್ಧಾಂತಿಕವಾಗಿ ಅವರೊಂದಿಗೆ ಅಭಿಪ್ರಾಯಭೇದವಿದ್ದರೂ ಸಾಹಿತ್ಯಿಕವಾಗಿ ಅಚ್ಚುಮೆಚ್ಚಿನ ಸಾಹಿತಿ. ಅವರ ನಿಧನದಿಂದ ಸಾರಸ್ವತ ಲೋಕಕ್ಕೆ ಅಪಾರ ನಷ್ಟವಾಗಿದೆ ಎಂದರು.

ವೇದಿಕೆ ಕಾರ್ಯಕ್ರಮದ ಬಳಿಕ ಚಿಂತನ ಚಿತ್ತಾರ ಹಾಗೂ ಗಾಯಿತ್ರಿ ಬುಕ್ ಹೌಸ್ ಮಳಿಗೆಗಳಿಗೆ ಹಿರಿಯ ಸಾಹಿತಿ ಡಾ.ರಾಜಪ್ಪ ದಳವಾಯಿ, ಕವಿಯತ್ರಿ ಡಾ.ಸುಕನ್ಯಾ ಮಾರುತಿ ಸೇರಿದಂತೆ ಇತರರು ಭೇಟಿ ನೀಡಿ ಗ್ರಾಹಕರೊಂದಿಗೆ ಸೆಲ್ಫಿ ಕ್ಲಿಕ್ಕಿಸಿಕೊಂಡರು. ಈ ವೇಳೆ ಮೈಸೂರು ದಸರಾ ಪುಸ್ತಕ ಮೇಳದ ಉಪ ಸಮಿತಿ ಸದಸ್ಯ ಎಂ.ಚಂದ್ರಶೇಖರ್, ಡಾ.ಎಂ. ಮಹೇಶ್ ಚಿಕ್ಕಲ್ಲೂರು, ಸುಚಿತ್ರಾ ಹೆಗಡೆ, ಹಿರಿಯ ರಂಗಕರ್ಮಿ ರಾಜಶೇಖರ್ ಕದಂಬ, ಪ್ರಕಾಶಕ ನಿಂಗರಾಜು ಚಿತ್ತಣ್ಣವರ್, ಪ್ರವೀಣ್ ಉಪಸ್ಥಿತರಿದ್ದರು.

ಕನ್ನಡ ಕಾದಂಬರಿ ಪ್ರಕಾರಕ್ಕೆ ಅಪಾರ ಮತ್ತು ಅನನ್ಯ ಕೊಡುಗೆ ನೀಡಿರುವ ಡಾ. ಎಸ್.ಎಲ್.ಭೈರಪ್ಪ ಅವರ ಅಗಲಿಕೆ ನಿಜಕ್ಕೂ ನೋವಿನ ಸಂಗತಿ. ತಮ್ಮ ಕಾದಂಬರಿಗಳ ಮೂಲಕ 'ಓದುವ ಸಂಸ್ಕೃತಿ'ಯನ್ನು ಜೀವಂತಿಕೆಯಾಗಿಟ್ಟ ಹೆಗ್ಗಳಿಕೆ ಅವರದ್ದು. ಅಷ್ಟು ಮಾತ್ರವಲ್ಲದೆ, ಹಿರಿಯ ಮತ್ತು ಕಿರಿಯರಲ್ಲಿ ಓದುವ ಹವ್ಯಾಸವನ್ನು ಜಾಗೃತಗೊಳಿಸಿದ್ದು ಗಮನಾರ್ಹ. ಅವರ ಕೃತಿಗಳು ಹಲವು ಮುದ್ರಣಗಳನ್ನು ಕಂಡು ಕನ್ನಡ ಪುಸ್ತಕೋದ್ಯಮದ ಮಾರುಕಟ್ಟೆಯನ್ನು ವಿಸ್ತರಿಸಿರುವುದು ವಿಶೇಷ. ಅವರ ದಟ್ಟವಾದ ಜೀವನಾನುಭವ ಮತ್ತು ನಿರೂಪಣೆ ಶೈಲಿ ನಿಜವಾಗಿಯೂ ಹೊಸ ತಲೆಮಾರಿನ ಬರಹಗಾರರಿಗೆ ಮಾದರಿಯಾದದ್ದು. ಅವರ ಅಕಾಲಿಕ ಸಾವು ಕನ್ನಡ ಸಾಹಿತ್ಯ ಲೋಕಕ್ಕೆ ಅಪಾರ ನಷ್ಟವನ್ನುಂಟು ಮಾಡಿದೆ.



- ಟಿ.ಸತೀಶ್ ಜವರೇಗೌಡ, ಯುವ ಸಾಹಿತಿ

ಕನ್ನಡದ ಸುಪ್ರಸಿದ್ಧ ಕಾದಂಬರಿಕಾರರು, ಪದ್ಮಭೂಷಣ, ಸರಸ್ವತಿ ಸಮ್ಮಾನ್ ಪುರಸ್ಕೃತರಾದ ಡಾ.ಎಸ್.ಎಲ್.ಭೈರಪ್ಪ (94) ಅವರ ನಿಧನ ವಾರ್ತೆ ಸಾಹಿತ್ಯಲೋಕ ಮತ್ತು ನಾಡಿಗೆ ಅಪಾರ ನಷ್ಟವನ್ನುಂಟು ಮಾಡಿದೆ. ಶ್ರೀಯುತರ ಆತ್ಮಕ್ಕೆ ಸದ್ಗತಿ ಕರುಣಿಸಲಿ ಹಾಗೂ ಅವರ ಕುಟುಂಬ ವರ್ಗಕ್ಕೆ ದುಃಖ ಭರಿಸುವ ಶಕ್ತಿಯನ್ನು ಭಗವಂತ ನೀಡಲಿ ಎಂದು ಪ್ರಾರ್ಥಿಸುತ್ತೇನೆ.



- ಕುರುಬೂರು ಶಾಂತಕುಮಾರ್, ರೈತ ಮುಖಂಡ

ಒಡನಾಡಿಯೊಂದಿಗಿನ ಒಡನಾಟ ಮರೆಯಲಾಗದು

ಭೈರಪ್ಪನವರು ಆರಂಭದ ದಿನಗಳಲ್ಲಿ ಈ ಸಹಾಯವನ್ನು ಯಾರಿಗೂ ಹೇಳಬಾರದು ಎಂಬ ಷರತ್ತು ಹಾಕಿ ನಮ್ಮ ಸಂಸ್ಥೆಗೆ ಒಮ್ಮೆ 25 ಸಾವಿರ, ಮತ್ತೊಮ್ಮೆ 10 ಸಾವಿರ ರೂ. ದೇಣಿಗೆ ನೀಡಿದ್ದರು. ಅವರ ಸೈದ್ಧಾಂತಿಕ ನಿಲುವು ಏನೇ ಇದ್ದರೂ ನಮ್ಮೊಂದಿಗೆ ಆತ್ಮೀಯವಾಗಿರುತ್ತಿದ್ದರು. ನಾವು ಸಹ ಕುವೆಂಪುನಗರದಲ್ಲಿರುವ ಭೈರಪ್ಪನವರ ಮನೆಗೆ ಹೋಗಿ ಬಂದು ಮಾಡುತ್ತಿದ್ದೆವು. ಅವರ ಧರ್ಮಪತ್ನಿ, ಮಗ ಕೂಡ ನಮ್ಮೊಂದಿಗೆ ನಮ್ಮ ಸಂಸ್ಥೆಯೊಂದಿಗೆ ಮಾನವೀಯ ಸಂಬಂಧಗಳನ್ನಿಟ್ಟುಕೊಂಡಿದ್ದರು. ಒಡನಾಡಿ ಸಂಸ್ಥೆ ಎಸ್‌ಆರ್‌ಎಸ್ ಕಾಲೋನಿಗೆ ಶಿಫ್ಟ್ ಆದಾಗಲೂ ಅವರು ಬಂದಿದ್ದರು. ಭೈರಪ್ಪನವರ ಈ ವಿಶಿಷ್ಟ ಗುಣವನ್ನು ನಾವು ಎಂದಿಗೂ, ಮುಂದೆಯೂ ಮರೆಯುವುದಿಲ್ಲ. ಅವರ ಆತ್ಮಕ್ಕೆ ಶಾಂತಿ ಸಿಗಲಿ.

-ಸ್ಟ್ಯಾನ್ಲಿ, ಒಡನಾಡಿ ಸೇವಾ ಸಂಸ್ಥೆ

ಕನ್ನಡ ಭಾಷೆಯ ಸೂಕ್ಷ್ಮಗಳು ಚೆನ್ನಾಗಿ ತಿಳಿದಿತ್ತು

ಎಸ್.ಎಲ್. ಭೈರಪ್ಪನವರ ಆಸಕ್ತಿಗಳು ಅನೇಕವಿದ್ದರೂ ಮುಖ್ಯವಾಗಿ ಅವರು ಕಾದಂಬರಿಕಾರರು. ನನ್ನ ವಿದ್ಯಾರ್ಥಿ ಜೀವನದಲ್ಲಿ ನಾನು ಹೆಚ್ಚಿಗೆ ಓದಿದ್ದು ಭೈರಪ್ಪ ಮತ್ತು ಶಿವರಾಮ ಕಾರಂತರ ಕಾದಂಬರಿಗಳನ್ನು. ಭೈರಪ್ಪನವರಿಗೆ ಕನ್ನಡ ಭಾಷೆಯ ಸೂಕ್ಷ್ಮಗಳು ಚೆನ್ನಾಗಿ ತಿಳಿದಿತ್ತು. ಮಾನವನ ದೌರ್ಬಲ್ಯಗಳ ಬಗ್ಗೆ ಅವರಿಗೆ ಅನುಕಂಪ ಇತ್ತು. ಕಾಮ ಮತ್ತು ಸಂತಾನವನ್ನು ಅವರಂತೆ ಸಮಗ್ರವಾಗಿ ವಿಶ್ಲೇಷಿಸಿದ ಇನ್ನೊಬ್ಬ ಕಾದಂಬರಿಕಾರರು ಕನ್ನಡದಲ್ಲಿ ಇಲ್ಲ. ಅವರ ನಿಧನದೊಂದಿಗೆ ಕನ್ನಡದ ದೊಡ್ಡ ಲೇಖಕರೊಬ್ಬರು ಕಣ್ಮರೆಯಾದಂತಾಯಿತು. ಅವರಿಗೆ ಅಂತಿಮ ನಮನಗಳು.

-ಡಾ. ಪುರುಷೋತ್ತಮ ಬಿಳಿಮಲೆ, ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ

ಲಿಪಿ ಇಲ್ಲದ ಭಾಷಿಗರು, ದೃಷ್ಟಿ ವಿಶೇಷಚೇತನರನ್ನೂ ಭೈರಪ್ಪ ಮುಟ್ಟಿದ್ದಾರೆ...!

ಮೈಸೂರು, ಸೆ.24(ಎಸ್‌ಬಿಡಿ)– ಲಿಪಿ ಇಲ್ಲದ ಭಾಷಿಗರು ಹಾಗೂ ದೃಷ್ಟಿ ವಿಶೇಷಚೇತನ ಸಾಹಿತ್ಯ ಪ್ರೇಮಿಗಳನ್ನೂ ಎಸ್.ಎಲ್.ಭೈರಪ್ಪನವರು ತಲುಪಿದ್ದಾರೆ ಎಂದರೆ ಅವರ ಸಾಧನೆ ಅರಿವಾಗುತ್ತದೆ ಎಂದು ಅವರ ಆತ್ಮೀಯರಾಗಿದ್ದ ಹಿರಿಯ ವಿದ್ವಾಂಸ ಡಾ.ಪ್ರಧಾನ ಗುರುದತ್ತ ಅವರು ಹೇಳಿದ್ದಾರೆ.

ಭೈರಪ್ಪನವರ ಹಲವು ಕಾದಂಬರಿಗಳನ್ನು ಭಾಷಾಂತರ ಮಾಡಿರುವ, ಸುಮಾರು ಐವತ್ತು ವರ್ಷಗಳಿಂದ ಒಡನಾಡಿಯಾಗಿದ್ದ ಪ್ರಧಾನ ಗುರುದತ್ತರು 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಕನ್ನಡ ಹಾಗೂ ಭಾರತೀಯ ಸಾಹಿತ್ಯ ಮಾತ್ರವಲ್ಲ ಜಾಗತಿಕ ಸಾಹಿತ್ಯದಲ್ಲೇ ಅತ್ಯುನ್ನತ ಶ್ರೇಣಿಯ ಲೇಖಕರಲ್ಲಿ ಭೈರಪ್ಪನವರು ಒಬ್ಬರಾಗಿದ್ದರು ಎಂದು ಸ್ಮರಿಸಿಕೊಂಡಿದ್ದಾರೆ.

ಕನ್ನಡದಲ್ಲಿ ಅವರಷ್ಟು ಜನಪ್ರಿಯ ಸಾಹಿತಿ ಮತ್ತೊಬ್ಬರಿಲ್ಲ. ಇತಿಹಾಸ ಸೃಷ್ಟಿಸುವ ರೀತಿಯಲ್ಲಿ ಅವರ ಎಲ್ಲಾ ಕಾದಂಬರಿಗಳೂ ಪುನರ್ ಮುದ್ರಣ ಆಗಿವೆ. ಕೆಲವು ಕಾದಂಬರಿಗಳು 70–75 ಮರು ಮುದ್ರಣ ಕಂಡಿವೆ. ಭಾರತೀಯ ಸಾಹಿತ್ಯ ಕ್ಷೇತ್ರದಲ್ಲಿ ಅನೇಕ ಭಾಷೆಗಳಿಗೆ ಭಾಷಾಂತರ ಆಗಿರುವ ಸಾಹಿತ್ಯ ಕರ್ತೃ ಬೇರೊಬ್ಬರಿಲ್ಲ. ಲಿಪಿಯೇ ಇಲ್ಲದ



ಡಾ.ಎಸ್.ಎಲ್.ಭೈರಪ್ಪ ಹಾಗೂ ಡಾ.ಪ್ರಧಾನ ಗುರುದತ್ತ

ಭಾಷಿಗರನ್ನೂ ಭೈರಪ್ಪ ಅವರ ಕಾದಂಬರಿಗಳು ತಲುಪಿವೆ. ಬ್ರೈಲ್ ಲಿಪಿಯಲ್ಲೂ ಮುದ್ರಣವಾಗಿ ದೃಷ್ಟಿ ಚೇತನರನ್ನೂ ಮುಟ್ಟಿವೆ. ಪರ್ಷಿಯನ್ ಮತ್ತೆ ಚೀನಿ ಭಾಷೆಗಳಿಗೂ ಭಾಷಾಂತರವಾಗಿವೆ ಎಂದರೆ ಅವರ ಪ್ರಖ್ಯಾತಿಯನ್ನು ಊಹಿಸಿಕೊಳ್ಳಬಹುದು ಎಂದಿದ್ದಾರೆ.

ಎಸ್.ಎಲ್.ಭೈರಪ್ಪನವರು ಅಪರೂಪದ ಸಾಹಿತಿ. ತತ್ವಶಾಸ್ತ್ರ ಕ್ಷೇತ್ರದಲ್ಲಿದ್ದುಕೊಂಡು ಸಾಹಿತ್ಯ ಕ್ಷೇತ್ರವನ್ನು ಆರಿಸಿಕೊಂಡು ಅದ್ವಿತೀಯ ಸಾಧನೆ ಮಾಡಿದ್ದಾರೆ. 50 ವರ್ಷಗಳ ಹಿಂದೆ 1970ರಲ್ಲಿ ಅವರೊಂದಿಗೆ ನನ್ನ ಆತ್ಮೀಯತೆ ಶುರುವಾಯಿತು. ಅವರ 'ದಾಟು' ಕಾದಂಬರಿಯನ್ನು ನಾನು ಇಂಗ್ಲಿಷ್‌ಗೆ ಭಾಷಾಂತರ ಮಾಡಿದೆ. ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರಕಾಶನದಿಂದ ಪ್ರಕಟಗೊಂಡಿತು. ಅದರ ಪರಿಷ್ಕೃತ ಪುಸ್ತಕವನ್ನು ಸಾಹಿತ್ಯ ಅಕಾಡೆಮಿ ಬಿಡುಗಡೆ ಮಾಡಿತು. ಅವರ ಆರೇಳು ಕಾದಂಬರಿಯನ್ನು ಹಿಂದಿಗೆ ಅನುವಾದಿಸಿದ್ದೇನೆ. ಇತ್ತೀಚೆಗೆ 'ಉತ್ತರಕಾಂಡ' ಕಾದಂಬರಿಯನ್ನು ಹಿಂದಿಗೆ ಭಾಷಾಂತರ ಮಾಡಿದ್ದೇನೆ ಎಂದು ತಿಳಿಸಿದ್ದಾರೆ.

ನಮ್ಮಿಬ್ಬರಲ್ಲಿ ತುಂಬಾ ಆತ್ಮೀಯತೆ ಇತ್ತು. ಮೈಸೂರಿನಲ್ಲಿದ್ದಾಗ ಪ್ರತಿದಿನ ಬೆಳಗ್ಗೆ ಐದೂಕಾಲು ಗಂಟೆಗೆ ಭೇಟಿಯಾಗುತ್ತಿದ್ದೆವು. ಪ್ರತಿನಿತ್ಯ ಬೆಳಗ್ಗೆ ಮತ್ತು ಸಂಜೆ ವಾಕಿಂಗ್‌ಗೆ ಹೋಗುತ್ತಿದ್ದೆವು. ಊರಿನಲ್ಲಿ ಇಲ್ಲದಿದ್ದರೆ ಕರೆ ಮಾಡಿ, ಮಾತನಾಡುತ್ತಿದ್ದರು. ಕಾದಂಬರಿಗಳ ಬಗ್ಗೆ ಚರ್ಚೆ ಮಾಡುತ್ತಿದ್ದೆವು. ಹೊಸ ಕಾದಂಬರಿಯ ವಸ್ತುಗಳ ಬಗ್ಗೆಯೂ ಮಾತನಾಡುತ್ತಿದ್ದೆವು. 'ಉತ್ತರಕಾಂಡ' ಅವರ ಕೊನೆಯ ಕಾದಂಬರಿ. ಎರಡು ವರ್ಷಗಳಿಂದ ಬರವಣಿಗೆ ನಿಲ್ಲಿಸಿದ್ದರು. ಜಗತ್ತಿನ ಎಲ್ಲಾ ಖಂಡಗಳನ್ನೂ ಸುತ್ತಿರುವ ಏಕೈಕ ಸಾಹಿತಿ ಅವರು. ಭೈರಪ್ಪರಂತಹ ಮಹಾಸಾಹಿತಿ ಆತ್ಮೀಯರಾಗಿದ್ದರು ಎಂಬುದು ನನಗೆ ಹೆಮ್ಮೆಯ ವಿಚಾರ. ಅವರನ್ನು ಕಳೆದುಕೊಂಡಿದ್ದು ಅಷ್ಟೇ ದುಃಖದ ಸಂಗತಿ ಎಂದು ವಿಷಾದ ವ್ಯಕ್ತಪಡಿಸಿದ್ದಾರೆ.

ಭೈರಪ್ಪನವರಿಗೆ 'ಜ್ಞಾನಪೀಠ' ಪುರಸ್ಕಾರ ದೊರಕದೇ ಇದ್ದದ್ದು ವಿಷಾದಕರ: ಸಿಪಿಕೆ

ಮೈಸೂರು, ಸೆ.24(ಎಸ್‌ಬಿಡಿ)– ಸರಸ್ವತಿ ಸಮ್ಮಾನ್ ಪುರಸ್ಕೃತರಾಗಿದ್ದ ಡಾ.ಎಸ್.ಎಲ್. ಭೈರಪ್ಪನವರಿಗೆ 'ಜ್ಞಾನಪೀಠ' ಪುರಸ್ಕಾರ ದೊರಕದಿರುವುದು ವಿಷಾದಕರ. ಆದರೆ ಅವರು ಜನಮಾನಸದಲ್ಲಿ ಸ್ಥಾಪಿತರಾಗಿದ್ದಾರೆ ಎಂದು ಹಿರಿಯ ಸಾಹಿತಿ ಸಿ.ಪಿ.ಕೃಷ್ಣಕುಮಾರ್ ಸ್ಮರಿಸಿದ್ದಾರೆ.



ಭೈರಪ್ಪನವರ ಸುದ್ದಿಯನ್ನು 'ಮೈಸೂರು ಮಿತ್ರ'ನ ಮೂಲಕ ತಿಳಿದು ಅತೀವ ಬೇಸರದಿಂದಲೇ ಮಾತನಾಡಿದ ಅವರು, ಎಸ್.ಎಲ್.ಭೈರಪ್ಪನವರು ಶ್ರೇಷ್ಠ ಆಧುನಿಕ ಕಾದಂಬರಿಕಾರರಲ್ಲಿ ಒಬ್ಬರಾಗಿದ್ದರು. ಅವರು ಕನ್ನಡದಲ್ಲಿ ಬರೆದರೂ ಒಂದು ರೀತಿಯಲ್ಲಿ ಅಖಿಲ ಭಾರತೀಯ ಲೇಖಕರಾಗಿದ್ದರು. ಅವರ ಎಲ್ಲಾ ಕಾದಂಬರಿಗಳೂ ಭಾರತೀಯ ವಿವಿಧ ಭಾಷೆಗಳಿಗೆ ಅನುವಾದಗೊಂಡಿವೆ. ಇಂಗ್ಲಿಷ್, ಸಂಸ್ಕೃತಕ್ಕೂ ಅನುವಾದಗೊಂಡಿವೆ. ಮೂಲತಃ ತತ್ವಶಾಸ್ತ್ರ ಪ್ರಾಧ್ಯಾಪಕರಾಗಿದ್ದರಿಂದ ತತ್ವಶಾಸ್ತ್ರ ಅಂಶಗಳನ್ನು ತಮ್ಮ ಕೃತಿಗಳಲ್ಲಿ ತಂದಿದ್ದಾರೆ.

ಸಮಾಜಮುಖಿ ಲೇಖಕರಾಗಿದ್ದ ಭೈರಪ್ಪನವರು, ತಮ್ಮ ಹುಟ್ಟೂರು ಸಂತೆಶಿವರಕ್ಕೆ ಸಾಕಷ್ಟು ಅನುಕೂಲಗಳನ್ನು ಮಾಡಿಕೊಟ್ಟಿದ್ದಾರೆ. ಅವರ ಕಾದಂಬರಿಗಳು ನಿಜಕ್ಕೂ ಅದ್ಭುತವಾದವು. ವಿಶೇಷವಾಗಿ ಕಾದಂಬರಿ ಪ್ರಕಾರದಲ್ಲೇ ಕೃಷಿ ಮಾಡಿದರು. ಸಣ್ಣ ಕತೆ, ಕಾವ್ಯ ಬೇರೆನನ್ನೂ ಬರೆಯಲಿಲ್ಲ ಎನ್ನುವುದು ಅವರ ವೈಶಿಷ್ಟ್ಯ. ಕಾದಂಬರಿಗಳಲ್ಲೇ ತಮ್ಮ ವಿಶಿಷ್ಟತೆ ತೋರಿದರು.

ಸರಸ್ವತಿ ಸಮ್ಮಾನ್ ಪ್ರಶಸ್ತಿ ಪುರಸ್ಕೃತರಾದ ಭೈರಪ್ಪನವರು ಒಳ್ಳೆಯ ವಾಗ್ಮಿ ಹಾಗೂ ಅನುಪಮ ಕಾದಂಬರಿಕಾರರಾಗಿದ್ದರು. ಜ್ಞಾನಪೀಠ ಪ್ರಶಸ್ತಿ ಆಯ್ಕೆ ಸಮಿತಿಯಲ್ಲಿ ನಾನೂ ಇದ್ದೇನೆ. ಪ್ರತಿಯೊಬ್ಬ ಲೇಖಕನಿಗೂ ಪರ–ವಿರೋಧ ಇದ್ದೇ ಇರುತ್ತದೆ. ಅದನ್ನು ಭೈರಪ್ಪನವರೂ ಎದುರಿಸಿದ್ದರು. ಅವರನ್ನು ಕೆಲವರು ಮಹಿಳಾ ವಿರೋಧಿ ಕಾದಂಬರಿಕಾರರು ಎಂದು ಗುರುತಿಸುತ್ತಿದ್ದರು. ಆದರೆ ಅವರ ಕಾದಂಬರಿಗಳನ್ನು ವಿಶೇಷವಾಗಿ ಇಷ್ಟಪಟ್ಟವರು ಮಹಿಳೆಯರೇ ಎನ್ನುವುದು ವಿಪರ್ಯಾಸ. ಜ್ಞಾನಪೀಠ ಪ್ರಶಸ್ತಿ ಆಯ್ಕೆ ಸಮಿತಿಯಲ್ಲಿ ನಾನೂ ಇದ್ದೇನೆ. ಆದರೆ ಇತ್ತೀಚೆಗೆ ಕನ್ನಡಕ್ಕೆ ಈ ಪುರಸ್ಕಾರ ದೊರೆತಿಲ್ಲ. ಭೈರಪ್ಪನವರಿಗೆ ಜ್ಞಾನಪೀಠ ಪುರಸ್ಕಾರ ಸಂದಲಿಲ್ಲ ಎನ್ನುವುದು ವಿಷಾದಕರ. ಆದರೆ ಪ್ರಶಸ್ತಿ ಅಷ್ಟು ಮುಖ್ಯವಲ್ಲ. ಜನಮಾನಸದಲ್ಲಿ ಅವರು ಸ್ಥಾಪಿತರಾಗಿದ್ದಾರೆ. ಯಾವ ದೃಷ್ಟಿಯಲ್ಲಿ ನೋಡಿದರೂ ಅವರ ಅಗಲಿಕೆಯಿಂದ ಸಾಹಿತ್ಯ ಕ್ಷೇತ್ರಕ್ಕೆ ತುಂಬಲಾರದ ನಷ್ಟವಾಗಿದೆ ಎಂದು ವಿಷಾದಿಸಿದರು.


'ಭೈರಪ್ಪನವರ ನಿವಾಸ'



ಮೈಸೂರಿನ ಕುವೆಂಪುನಗರ ಉದಯರವಿ ರಸ್ತೆಯಲ್ಲಿರುವ ಡಾ.ಎಸ್.ಎಲ್.ಭೈರಪ್ಪನವರ ನಿವಾಸದಲ್ಲಿ ಬುಧವಾರ ನೀರವ ಮೌನ ಆವರಿಸಿತ್ತು.

ವಂಶವೃಕ್ಷ, ದಾಟು ನಾನು ಮೆಚ್ಚಿದ ಶ್ರೇಷ್ಠ ಕಾದಂಬರಿಗಳು; ನಾವು ಪರಸ್ಪರ ಸ್ನೇಹಿತರು

ಮೈಸೂರು, ಸೆ.24(ಎಸ್‌ಪಿಎನ್)– ನಾನು ಮತ್ತು ಡಾ.ಎಸ್.ಎಲ್.ಭೈರಪ್ಪನವರು ಎದುರು–ಬದುರು ಮನೆಯವರು. ನನ್ನ ಜೊತೆಗೆ ಆತ್ಮೀಯವಾಗಿದ್ದರು. ಅವರು ರಚಿಸಿದ 'ವಂಶವೃಕ್ಷ' ಮತ್ತು 'ದಾಟು' ನಾನು ಮೆಚ್ಚಿದ ಶ್ರೇಷ್ಠ ಕಾದಂಬರಿಗಳು ಎಂದು ಬಂಡಾಯ ಸಾಹಿತಿ ಪ್ರೊ.ಕೆ.ಎಸ್. ಭಗವಾನ್ ಅಭಿಪ್ರಾಯಪಟ್ಟರು.



ಮೈಸೂರು ಕುವೆಂಪು ನಗರದ ತಮ್ಮ ನಿವಾಸದಲ್ಲಿ ಭೇಟಿ ಮಾಡಿದ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಶ್ರೇಷ್ಠ ಕಾದಂಬರಿಕಾರರಾದ ಡಾ.ಎಸ್.ಎಲ್.ಭೈರಪ್ಪನವರ ಅಗಲಿಕೆ ತುಂಬಾ ದುಃಖಕ್ಕೀಡು ಮಾಡುತ್ತಿದೆ. ನಾನು, ಅವರು ಒಳ್ಳೆಯ ಸ್ನೇಹಿತರು. ಅವರೊಬ್ಬ ಹೆಸರಾಂತ ಕಾದಂಬರಿಕಾರರು. ಅವರಿಗೆ ದೇಶದುದ್ದಕ್ಕೂ ಓದುಗರಿದ್ದಾರೆ. ಜೀವನದ ಎಲ್ಲಾ ಮಗ್ಗಲುಗಳ ನೋವು–ನಲಿವುಗಳನ್ನು ಅವರ ಕಾದಂಬರಿಯಲ್ಲಿ ಉಲ್ಲೇಖಿಸಿದ್ದು, ಅವರ ನಿಧನದಿಂದ ಕನ್ನಡ ಸಾರಸ್ವತ ಲೋಕಕ್ಕೆ ಅಪಾರ ನಷ್ಟವಾಗಿದೆ ಎಂದು ನುಡಿನಮನ ಸಲ್ಲಿಸಿದರು.

ಸದ್ಯಕ್ಕೆ ಕನ್ನಡದಲ್ಲಿ ಡಾ.ಎಸ್.ಎಲ್.ಭೈರಪ್ಪ ಅವರಷ್ಟು ಜನಪ್ರಿಯ ಕಾದಂಬರಿಕಾರು ಯಾರೂ ಇಲ್ಲ. ಅವರ ಅಗಲಿಕೆಯಿಂದ ಹಿರಿಯ ಆತ್ಮಿಯ ಸ್ನೇಹಿತನನ್ನು ಕಳೆದುಕೊಂಡಿದ್ದೇವೆ ಎನ್ನುವ ಭಾವನೆ ನನ್ನಲ್ಲಿ ಮೂಡುತ್ತಿದೆ. ಅವರ ನಂತರವೂ ಅವರು ರಚಿಸಿರುವ ಕಾದಂಬರಿಗಳು ಕನ್ನಡ ಸಾಹಿತ್ಯದಲ್ಲಿ ಶಾಶ್ವತವಾಗಿ ಉಳಿಯುತ್ತವೆ. 94 ವರ್ಷ ಸಾರ್ಥಕ ಜೀವನ ನಡೆಸಿದ್ದರೂ ಜೀವನದ ಪ್ರತಿಕ್ಷಣವನ್ನು ಅವರು ವ್ಯರ್ಥ ಮಾಡಿಲ್ಲ. ಅವರು ಇದ್ದಷ್ಟು ದಿನ ಸಮಾಜಕ್ಕೆ ಸಾಹಿತ್ಯದ ಮೂಲಕ ಅಪಾರ ಕೊಡುಗೆ ಸಲ್ಲಿಸಿದ್ದಾರೆ ಎಂದು ನೆನೆದರು. ನಮ್ಮಿಬ್ಬರ ಸೈದ್ಧಾಂತಿಕ ನಿಲುವು ಬೇರೆ ಬೇರೆಯಾಗಿತ್ತು. ಆದರೆ, ವೈಯಕ್ತಿಕವಾಗಿ ನಾವು ಪರಸ್ಪರ ಸ್ನೇಹಿತರು. ಬೇರೆಬೇರೆ ಸಂದರ್ಭದಲ್ಲಿ ನಮ್ಮ ಮನೆಗೆ ಅವರು, ನಾನೂ ಸಹ ಅವರ ಮನೆಗೆ ಹೋಗುತ್ತಿದ್ದೆ. ಭೇಟಿಯಾದಾಗ ಸಾಹಿತ್ಯ, ತತ್ವಜ್ಞಾನದ ಬಗ್ಗೆ ಚರ್ಚೆ ಮಾಡುತ್ತಿದ್ದೆವು. ಅವರ ಆಲೋಚನೆ ಅವರಿಗೆ ನಮ್ಮ ಆಲೋಚನೆ ನಮಗಿತ್ತು ಅಷ್ಟೇ ಎಂದು ತಮ್ಮ ವೈಯಕ್ತಿಕ ನೆಲೆಗಟ್ಟಿನ ಸ್ನೇಹವನ್ನು ನೆನೆದರು.

ಅವರ ಸಾಹಿತ್ಯ ಕ್ಷೇತ್ರದ ಸಾಧನೆಗೆ ಸರಸ್ವತಿ ಸಮ್ಮಾನ್ ಪ್ರಶಸ್ತಿಯು ದೊರಕಿತ್ತು. ಈ ಪ್ರಶಸ್ತಿ ಜ್ಞಾನಪೀಠ ಪ್ರಶಸ್ತಿಗಿಂತಲೂ ಎತ್ತರದ ಪ್ರಶಸ್ತಿ. ಇತ್ತೀಚಿನ ವರ್ಷಗಳಲ್ಲಿ ಅವರಿಗೆ ಪದ್ಮವಿಭೂಷಣ ಪ್ರಶಸ್ತಿಯೂ ಲಭಿಸಿದೆ. ಒಟ್ಟಿನಲ್ಲಿ ಅವರು ರಚಿಸಿದ ಎಲ್ಲಾ ಕಾದಂಬರಿಗಳು ಜನಮನ್ನಣೆಗಳಿಸಿರುವುದು ವಿಶೇಷ ಎಂದರು.

ಇಂದಿನ (ಸೆಪ್ಟೆಂಬರ್ 25) ದಸರಾ ಕಾರ್ಯಕ್ರಮಗಳು

ಸಾಂಸ್ಕೃತಿಕ ಕಾರ್ಯಕ್ರಮಗಳು



ಅರಮನೆ ವೇದಿಕೆ

ಮ. 3.30 : ವಿ. ಮಹೇಶ್‌ಕುಮಾರ್ ಮತ್ತು ತಂಡ, ಮೈಸೂರು ಅವರಿಂದ ನಾದಸ್ವರ

ಸಂ. 4.00 : ಸವಿಗಾನ ಲಹರಿ ಸುಗಮ ಸಂಗೀತ ಶಾಲೆ : ಟಿ. ರಾಜರಾಮ್ ಅವರಿಂದ ಸುಗಮ ಸಂಗೀತ

ಸಂ. 5.00 : ಡಾ. ಮೊಹಸಿನ್ ಖಾನ್ ಮತ್ತು ತಂಡದಿಂದ ಸಿತಾರ್ ವಾದನ

ಸಂ. 6.00 : ಎಸ್. ರಘುನಂದನ್ ಮತ್ತು ತಂಡದಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ

ರಾ. 7.00 : ರಶ್ಮಿ ಬಿ. ಚಿಕ್ಕಮಗಳೂರು ಹಾಗೂ ಶ್ರೀ ಹರ್ಷ ಮತ್ತು ತಂಡದಿಂದ ಕನ್ನಡ ಕವಿಗಳ ಗೀತಗಾಯನ

ರಾ. 8.30 : ನಿಮಿಷಾಂಭ ಡ್ಯಾನ್ಸ್ ಸ್ಕೂಲ್, ಆಪ್ತಮಿತ್ರ ಖ್ಯಾತಿಯ ವಿದ್ವಾನ್ ಶ್ರೀಧರ್ ಜೈನ್ ಮತ್ತು ತಂಡದಿಂದ ನೃತ್ಯರೂಪಕ : ಶಿವತಾಂಡವ

ಕಿರು ರಂಗಮಂದಿರ ವೇದಿಕೆ

ಮ. 2.00 : ಹಳೇ ಬೇರು ಹೊಸ ಚಿಗುರು ಕಲ್ಚರಲ್ ಟ್ರಸ್ಟ್ ಮೈಸೂರು – ರೇವಣ್ಣ ಅವರಿಂದ ಶಿಶುನಾಳ ಷರೀಫ್, ಕಬೀರ ವಿರಸನ ಗೀತೆಗಳು

ಮ. 3.00 : ರಂಗಕಹಳೆಯ ಎ.ಜೆ. ಸದಾಶಿವ ಮತ್ತು ತಂಡ, ಬೆಂಗಳೂರು ಅವರಿಂದ ನಾಟಕ : ಬೊಮ್ಮನಹಳ್ಳಿ ಕಿಂದರಿಜೋಗಿ

ರಾ. 7.00 : ಜನಮನ ಸಾಂಸ್ಕೃತಿಕ ಸಂಸ್ಥೆ, ವಿ. ಮಲ್ಲೇಶ್ ಅವರಿಂದ ನಾಟಕ : ಕಲ್ಲು ಕರಗುವ ಸಮಯ

ಪುರಭವನ ವೇದಿಕೆ

ಬೆ. 10.30 : ಶ್ರೀ ಬಸವೇಶ್ವರ ಕೃಪಾ ಪೋಷಿತ ನಾಟಕ ಮಂಡಳಿ, ಮೈಸೂರು – ರಮೇಶ್ ಅವರಿಂದ ರಂಗಗೀತೆ

ಮ. 3.00 : ಶ್ರೀ ನಂಜುಂಡೇಶ್ವರ ಕಲಾ ಸಂಘ, ತುಮಕೂರು – ಆರ್. ಮಲ್ಲಿಕಾರ್ಜುನ ಅವರಿಂದ ಸಾಮಾಜಿಕ ನಾಟಕ : ಮಿಸ್ಟರ್ ಗುಂಡಣ್ಣ

ಸಂ. 6.00 : ನರಸಿಂಹಸ್ವಾಮಿ ಕಲಾಬಳಗ, ಮೈಸೂರು ಅವರಿಂದ ನಾಟಕ : ಶ್ರೀ ಕೃಷ್ಣ ವಿಜಯ

ಚಿಕ್ಕಗಡಿಯಾರ ವೇದಿಕೆ

ಸಂ. 5.00 : ಗೋವಿಂದನಾಯಕ ಮತ್ತು ತಂಡದಿಂದ ಡೊಳ್ಳು ಕುಣಿತ

ಸಂ. 5.30 : ಕೆ.ಎಸ್. ಮಹದೇವಪ್ಪ ಮತ್ತು ತಂಡ, ಚಾಮರಾಜನಗರ ಅವರಿಂದ ತತ್ವಪದ

ಸಂ. 6.30 : ಯಶವಂತ್ ಎಚ್.ಒ. ಮತ್ತು ತಂಡ, ಮೈಸೂರು ಅವರಿಂದ ಜಾನಪದ ಗಾಯನ

ರಾ. 7.30 : ಶ್ರೀ ಶಿವಶಕ್ತಿ ಸುಡುಗಾಡು ಸಿದ್ಧರ ಜಾನಪದ ಕಲಾವಿದರ ಟ್ರಸ್ಟ್, ವಿಜಯನಗರ ಜಿಲ್ಲೆ, ಶೇಖಪ್ಪ ಮಾಯಪ್ಪ ಕಿನ್ನೂರಿ ಅವರಿಂದ ಸುಡುಗಾಡು ಸಿದ್ಧರ ಕೈಚಳಕ

ರಾ. 8.30 : ಕಾವ್ಯ ಕಲಾತಂಡ, ಮೈಸೂರು ಅವರಿಂದ ಜನಪದ ಗೀತೆ.

ನಾದಬ್ರಹ್ಮ ಸಂಗೀತಸಭಾ ವೇದಿಕೆ

ಸಂ. 4.30 : ಶ್ರೀ ಮಲೈ ಮಹದೇಶ್ವರ ಕಂಸಾಳೆ ಜಾನಪದ ಕಲಾ ಸಂಘ, ಮೈಸೂರು – ಎಂ. ಮಹದೇವ ಅವರಿಂದ ಬೀಸು ಕಂಸಾಳೆ

ಸಂ. 5.00 : ನಾಗರಾಜು ಮತ್ತು ತಂಡ, ದಕ್ಷಿಣ ಕನ್ನಡ ಅವರಿಂದ ಪೂಜಾ ಕುಣಿತ

ಸಂ. 5.30 : ಚಾಮರಾಜನಗರ ಜಿಲ್ಲಾ ಕಲಾವಿದರಿಂದ ಸೋಬಾನೆ ಪದ

ಸಂ. 6.30 : ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಭೀಮವ್ವ ದೊಡ್ಡಬಾಳಪ್ಪ ಶಿಳ್ಳೇಕ್ಯಾತರ ಅವರಿಂದ ತೊಗಲು ಬೊಂಬೆಯಾಟ

ರಾ. 7.30 : ರಾಧಿಕಾ ವೆಂಕಟರಮಣ ಮತ್ತು ತಂಡ, ಬೆಂಗಳೂರು ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ

ರಾ. 8.30 : ಸಿದ್ದರಾಜಯ್ಯ ಬಿ. ಮತ್ತು ತಂಡ ಅವರಿಂದ ಜನಪದ ಗಾಯನ

ಗಾನಭಾರತಿ ವೇದಿಕೆ

ಸಂ. 5.00 : ಗುರುಪ್ರಸಾದ ಹೆಗಡೆ ಮತ್ತು ತಂಡ, ಧಾರವಾಡ ಅವರಿಂದ ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ

ಸಂ. 5.30 : ಟಿ. ನಾಗೇಂದ್ರ ಮತ್ತು ತಂಡ ಅವರಿಂದ ಸುಗಮ ಸಂಗೀತ

ಸಂ. 6.30 : ರೂಪಾ ಗಿರೀಶ್ ಮತ್ತು ತಂಡ, ಬೆಂಗಳೂರು ಅವರಿಂದ ಭರತನಾಟ್ಯ

ರಾ. 7.30 : ಕು. ರಕ್ಷಿತಾ ಶಾನಭೋಗರ ಮತ್ತು ತಂಡ, ವಿಜಯನಗರ ಅವರಿಂದ ಸುಗಮ ಸಂಗೀತ

ರಾ. 8.30 : ಡಾ. ಗೀತಾ ಸಂಜೀವ್ ಕೊಡತೆ ಮತ್ತು ತಂಡ, ಬೆಳಗಾವಿ ಅವರಿಂದ ಜಾನಪದ ಸಂಗೀತ

ರಮಾಗೋವಿಂದ ವೇದಿಕೆ

ಸಂ. 4.15 : ಸುನಿಲ್ ಕುಮಾರ್ ಮತ್ತು ತಂಡ, ಮಂಡ್ಯ ಅವರಿಂದ ಪೂಜಾ ಕುಣಿತ

ಸಂ. 4.45 : ಮಹಾಲಿಂಗ ಎಂ. ಲಕ್ಷ್ಮೀಪುರ ಮತ್ತು ತಂಡ, ಮೈಸೂರು ಅವರಿಂದ ಜಾನಪದ ಗೀತೆ

ಸಂ. 5.30 : ವಿದುಷಿ ಗೀತಾ ಭತ್ತದ್ (ಯಶೋಧ ಜಿ.ಡಿ) ಮತ್ತು ತಂಡದಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ

ಸಂ. 6.30 : ಶ್ರೀ ಮಾರುತಿ ಕಲಾಸಂಘ, ವಿರೂಪಾಕ್ಷ ಅವರಿಂದ ಸುಗಮ ಸಂಗೀತ

ರಾ. 7.30 : ರಂಗಾಸ್ಥೆ, ಬೆಂಗಳೂರು, ಧನುಷ್ ಅವರಿಂದ ನಾಟಕ : ಕಾದು ಕತೆಯಾದವರು

ಶ್ರೀಕಂಠೇಶ್ವರ ದೇವಸ್ಥಾನ, ನಂಜನಗೂಡು

ಸಂ. 4.30 : ಕಿರಣ್ ಕೆ.ಎಸ್. ಮತ್ತು ತಂಡ, ಮಂಡ್ಯ ಅವರಿಂದ ಪೂಜಾ ಕುಣಿತ

ಸಂ. 5.00 : ರಾಜಶೇಖರಮೂರ್ತಿ ಮತ್ತು ತಂಡ, ಮೈಸೂರು ಜಿಲ್ಲೆ ಅವರಿಂದ ಸ್ಯಾಕ್ಸೋಫೋನ್ ವಾದನ

ಸಂ. 5.30 : ಮೆಹಬೂಬ್ ಕಿಲ್ಲೇದಾರ್ ಮತ್ತು ತಂಡ, ಕೊಪ್ಪಳ ಅವರಿಂದ ಜಾನಪದ ಗಾಯನ

ಸಂ. 6.30 : ವಿದ್ವಾನ್ ಬಿಎನ್‌ಎಸ್ ಮುರಳಿ, ಹಾಸನ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ

ರಾ. 7.30 : ನವ್ಯ ನಾಟ್ಯ ಸಂಗಮ, ಬೆಂಗಳೂರು, ಗೀತಾ ಅವರಿಂದ ಭರತನಾಟ್ಯ

ರಾ. 8.30 : ನಾದಮಯ ಸಂಗೀತ ಕಲಾಸಂಸ್ಥೆ, ಬೆಂಗಳೂರು, ಸತ್ಯನಾರಾಯಣ ಉಂಡಾಳೆ ಅವರಿಂದ ಪುರಂದರ ದಾಸರ ಕೀರ್ತನೆ, ಭಕ್ತಿಗೀತೆ

ಜಗನ್ಮೋಹನ ಅರಮನೆ ವೇದಿಕೆ

ಸಂ. 5.00 : ವೀರೇಶ್ ಅಕ್ಕಿ ಮತ್ತು ತಂಡ, ಹುಬ್ಬಳ್ಳಿ ಅವರಿಂದ ಸಪ್ತ ತಬಲ ವಾದನ

ಸಂ. 5.30 : ಜೀನಾ ಶ್ರೀಜಿ ಮತ್ತು ತಂಡ, ಬೆಂಗಳೂರು ಅವರಿಂದ ಭರತನಾಟ್ಯ

ಸಂ. 6.30 : ಪ್ರವೀಣ್ ಮತ್ತು ತಂಡ ಅವರಿಂದ ಸುಗಮ ಸಂಗೀತ

ರಾ. 7.30 : ಶ್ರೀದೇವಿ ಸಂಗೀತ ಅನಿಕೇತನ, ಹೈದರಾಬಾದ್, ಅಚ್ಯುತಾಂಬ ಮತ್ತು ತಂಡದಿಂದ ಮೋಹಿನಿಅಟ್ಟಂ

ರಾ. 8.30 : ವರ್ಷಿಣಿ ಅಕ್ಸರ್ ಮತ್ತು ತಂಡದಿಂದ ಭರತನಾಟ್ಯ

ಕರ್ನಾಟಕ ಕಲಾಮಂದಿರ ವೇದಿಕೆ

ಸಂ. 5.00 : ಮೈಸೂರು ರಂಗಸ್ವಾಮಿ ಮತ್ತು ತಂಡದಿಂದ ಜಾನಪದ ಗಾಯನ

ಸಂ. 5.30 : ಮೈಸೂರು ಜಿಲ್ಲಾ ಸೋಬಾನೆ ಪದ ಕಲಾವಿದರಿಂದ ಸೋಬಾನೆ ಪದ

ಸಂ. 6.30 : ವಿಪಂಚಿ ಬಳಗ, ಮಣಿಪಾಲ ಪವನ್ ಬಿ. ಆಚಾರ್ ಅವರಿಂದ ಪಂಚವೀಣಾವಾದನ

ರಾ. 8.30 : ತ್ಯಾಗರಾಜ್ ಮತ್ತು ತಂಡದಿಂದ ಸುಗಮ ಸಂಗೀತ

ಬಿ.ಎಂ. ಶ್ರೀ ಸಭಾಂಗಣ

ಬೆ. 9.30 : ಪ್ರಜ್ವಲ ಕವಿಗೋಷ್ಠಿ, ಕು. ಅಮೂಲ್ಯ ಮತ್ತು ತಂಡದಿಂದ ಹಾಸ್ಯಯಾನ

ಬೆ. 10.30 : ಉದ್ಘಾಟನೆ : ಗೀತ ರಚನೆಕಾರ ಪ್ರಮೋದ್ ಮರವಂತೆ ಅಧ್ಯಕ್ಷತೆ : ಕವಯಿತ್ರಿ ಡಾ. ರತ್ನ ಕಾಳೇಗೌಡ ವಿ.ಜಿ. ಮುಖ್ಯ ಅತಿಥಿಗಳು : ಕವಿ ಪ್ರೊ. ಕಾ.ವೆಂ. ಶ್ರೀನಿವಾಸಮೂರ್ತಿ

ಅಲ್ಯೂಮ್ನಿ ಅಸೋಸಿಯೇಷನ್ ಸಭಾ ಭವನ, ಜೆ.ಕೆ. ಮೈದಾನ

ಬೆ. 10.00 : ಯೋಗ ವಿಜ್ಞಾನ ವಿಚಾರ ಸಂಕಿರಣ, ಉದ್ಘಾಟನೆ : ಶಾಸಕ ಕೆ. ಹರೀಶ್‌ಗೌಡ

ಪುರಭವನ

ಬೆ. 7.00 : ಪಾರಂಪರಿಕ ಸೈಕಲ್ ಸವಾರಿ, ಉದ್ಘಾಟನೆ : ಸೈಕಲಿಸ್ಟ್ ನವೀನ್ ಡಿ.ಎಸ್. ಸೋಲಂಕಿ

ಉತ್ತನಹಳ್ಳಿ ಬಳಿ ಯುವ ದಸರಾ



ಸಂ. 6.00 : ಉತ್ತನಹಳ್ಳಿ ರಿಂಗ್ ರಸ್ತೆಯ ಜ್ವಾಲಾಮುಖಿ ತ್ರಿಪುರ ಸುಂದರಿ ದೇವಸ್ಥಾನದ ಬಳಿ ಯುವ ದಸರಾ : ಗಾಯಕ ಜುಬಿನ್ ನೌಟಿಯಾಲ್ ಅವರಿಂದ ಸಂಗೀತ ಸಂಜೆ

ಲಲಿತಕಲೆ ಮತ್ತು ಕರಕುಶಲ ಕಲೆ ಉಪ ಸಮಿತಿ

ತೊಗಲು ಗೊಂಬೆ ಭಿತ್ತಿ ಚಿತ್ರಕಲಾ ಶಿಬಿರ ಮತ್ತು ಮೈಸೂರು ಶೈಲಿಯ ಸಾಂಪ್ರದಾಯಿಕ ಚಿತ್ರಕಲೆ ಪ್ರದರ್ಶನ, ಸಂಜೆ 4.30 ರಿಂದ ದಕ್ಷಿಣ ವಲಯ ಸಾಂಸ್ಕೃತಿಕ ಕೇಂದ್ರ ತಂಜಾವೂರು ಅವರಿಂದ ಜಾನಪದ ನೃತ್ಯ, ಶ್ರೀಮತಿ ತೇಜಸ್ವಿನಿ ಮತ್ತು ತಂಡದಿಂದ ಸ್ಯಾಕ್ಸೋಫೋನ್ ವಾದನ ಸ್ಥಳ: ಚಾಮರಾಜೇಂದ್ರ ಸರ್ಕಾರಿ ದೃಶ್ಯ ಕಲಾ ಕಾಲೇಜು (ಕಾವಾ), ಸಿದ್ಧಾರ್ಥನಗರ.

ಕರ್ನಾಟಕ ಕಲಾಮಂದಿರ

ಸಾಂಸ್ಕೃತಿಕ ಕಾರ್ಯಕ್ರಮ, ಬೆಳಗ್ಗೆ 9.30ಕ್ಕೆ.

ರಂಗಾಯಣ

ರಂಗ ಭೀಷ್ಮ ಬಿ.ವಿ. ಕಾರಂತ ಕಾಲೇಜು ನವರಾತ್ರಿ ರಂಗೋತ್ಸವ, ಲಾ ಸಲೆಟ್ ಪದವಿಪೂರ್ವ ಕಾಲೇಜು, ಮರದೂರು, ಹುಣಸೂರು ವಿದ್ಯಾರ್ಥಿಗಳಿಂದ ನಾಟಕ : ಚಿತ್ರಪಟ ರಾಮಾಯಣ, ರಚನೆ : ಡಾ. ಎಚ್.ಎಸ್. ವೆಂಕಟೇಶ್‌ಮೂರ್ತಿ, ನಿರ್ದೇಶನ : ಎ.ಎಸ್.ಸುಭಾಷ್

ದೈನಂದಿನ ಆಕರ್ಷಣೆಗಳು

ಬೆ. 9 ರಿಂದ ರಾ. 9 : ದಸರಾ ಫಲಪುಷ್ಪ ಪ್ರದರ್ಶನ, ಕುಪ್ಪಣ್ಣ ಪಾರ್ಕ್, ಜಯಚಾಮರಾಜ ಒಡೆಯರ್ ಸರ್ಕಲ್ (ಹಾರ್ಡಿಂಜ್ ವೃತ್ತ)

ಬೆ. 6.30 ರಿಂದ ಸಂ 5.30 : ದಸರಾ ಫಲಪುಷ್ಪ ಪ್ರದರ್ಶನ, ಕುಕ್ಕರಹಳ್ಳಿ ಕೆರೆ

ಬೆ. 9 ರಿಂದ ರಾ. 9 : ದಸರಾ ಫಲಪುಷ್ಪ ಪ್ರದರ್ಶನ, ಲಿಂಗಾಂಬುದಿ ಬಟಾನಿಕಲ್ ಗಾರ್ಡನ್

ಮ. 1, 4 ಮತ್ತು ಸಂಜೆ 7 : ಜೆಮಿನಿ ಸರ್ಕಸ್, ಹಾರ್ಸ್ ಪಾರ್ಕ್ ಮೈದಾನ, ಕಾರಂಜಿಕೆರೆ ಸಮೀಪ (3 ಪ್ರದರ್ಶನ)

ಸಂಜೆ 6,7,8 ಮತ್ತು ರಾ.9 : ಅಂಬಾರಿ ಡಬ್ಬಲ್ ಡೆಕ್ಕರ್ ಬಸ್ ರೈಡ್ (1 ಗಂಟೆ– ದಿನ 4 ಟ್ರಿಪ್),

ಬೆ. 10 ರಿಂದ 5 : ಕಲಾ ವಸ್ತುಪ್ರದರ್ಶನ, ಕಾವಾ, ಸಿದ್ಧಾರ್ಥನಗರ

ಬೆ. 10 ರಿಂದ ರಾತ್ರಿ 8 : ರೈಲ್ ಮ್ಯೂಸಿಯಂ (ಸಂಜೆ ದೀಪಾಲಂಕಾರ)

ಬಾಂಗ್ಲಾ ವಿರುದ್ಧ ಗೆಲುವು: ಏಷ್ಯಾಕಪ್ ಫೈನಲ್‌ಗೆ ಭಾರತ



ದುಬೈ, ಸೆ.24– ಅಭಿಷೇಕ್ ಶರ್ಮಾ ಅವರ ಅರ್ಧಶತಕ ಹಾಗೂ ಕುಲ್ದೀಪ್ ಯಾದವ್ ಅವರ ಮಾರಕ ಬೌಲಿಂಗ್ ದಾಳಿ ನೆರವಿನಿಂದ ಭಾರತ ಬಾಂಗ್ಲಾದೇಶದ ವಿರುದ್ಧ 41 ರನ್‌ಗಳ ಭರ್ಜರಿ ಜಯ ಸಾಧಿಸಿದೆ.

ಆ ಮೂಲಕ ಭಾರತ ಏಷ್ಯಾಕಪ್ ಫೈನಲ್ ಪ್ರವೇಶಿಸಿದರೇ, ಮತ್ತೊಂದೆಡೆ ಬಾಂಗ್ಲಾದೇಶ ಫೈನಲ್ ಪ್ರವೇಶಿಸಲು ನಾಳೆ ನಡೆಯುವ ಪಾಕಿಸ್ತಾನದ ವಿರುದ್ಧದ ತನ್ನ ಕೊನೆಯ ಸೂಪರ್ 4 ಹಂತದ ಪಂದ್ಯದಲ್ಲಿ ಜಯಗಳಿಸಲೇಬೇಕಾದ ಅನಿವಾರ್ಯತೆಯಲ್ಲಿದೆ.

ಇಲ್ಲಿನ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಭಾರತ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 168 ರನ್ ಗಳಿಸಿತು. ಬಳಿಕ ಗುರಿ ಬೆನ್ನತ್ತಿದ ಬಾಂಗ್ಲಾ 19.3 ಓವರ್‌ಗಳಲ್ಲಿ 127 ರನ್‌ಗೆ ಆಲೌಟಾಗುವ ಮೂಲಕ ಸೋಲು ಅನುಭವಿಸಿತು.

ಭಾರತದ ಪರ ಇನ್ನಿಂಗ್ಸ್ ಆರಂಭಿಸಿದ ಅಭಿಷೇಕ್ ಶರ್ಮಾ ಮತ್ತು ಶುಭಮನ್ ಗಿಲ್ ಮೊದಲ ವಿಕೆಟ್‌ಗೆ 77 ರನ್ ಜೊತೆಯಾಟವಾಡುವ ಮೂಲಕ ಉತ್ತಮ ಆರಂಭ ಒದಗಿಸಿದರು. ಈ ವೇಳೆ 29 ರನ್ ಗಳಿಸಿದ್ದ ಗಿಲ್ ವಿಕೆಟ್ ಒಪ್ಪಿಸಿದರು. ನಂತರ ಬಂದ ಶಿವಂ ದುಬೆ 2 ರನ್ ಗಳಿಸಿ ನಿರ್ಗಮಿಸಿದರು. ಮತ್ತೊಂದೆಡೆ ಅಬ್ಬರಿಸಿದ ಅಭಿಷೇಕ್ ಶರ್ಮಾ 37 ಎಸೆತದಲ್ಲಿ 6 ಬೌಂಡರಿ, 5 ಸಿಕ್ಸರ್ ಒಳಗೊಂಡ 75 ರನ್ ಗಳಿಸಿ ರನೌಟಾದರು. ಇವರ ಹಿಂದೆಯೇ ನಾಯಕ ಸೂರ್ಯ ಕುಮಾರ್ ಯಾದವ್ 5 ರನ್ ಗಳಿಸಿ ಔಟಾದರು. ಈ ವೇಳೆ ಬಾಂಗ್ಲಾ ಬೌಲರ್‌ಗಳ ಬಿಗಿ ದಾಳಿಯಿಂದಾಗಿ ಭಾರತ ಬೃಹತ್ ಮೊತ್ತ ದಾಖಲಿಸಲು ಸಾಧ್ಯವಾಗಲಿಲ್ಲ. ಉಳಿದಂತೆ ಹಾರ್ದಿಕ್ ಪಾಂಡ್ಯ 38, ತಿಲಕ್ ವರ್ಮಾ 5 ಮತ್ತು ಅಕ್ಷರ್ ಪಟೇಲ್ 10 ರನ್ ಗಳಿಸಿದರು. ಬಾಂಗ್ಲಾ ಪರ ರಿಷದ್ ಹೋಸೆನ್ 2, ತಂಜಿಮ್ ಹಸನ್ ಸಕಿಬ್, ಮುಸ್ತಫಿಜುರ್, ಸೈಫುದ್ದೀನ್ ತಲಾ ಒಂದೊಂದು ವಿಕೆಟ್ ಪಡೆದರು.

169 ರನ್‌ಗಳ ಗುರಿ ಬೆನ್ನತ್ತಿದ ಬಾಂಗ್ಲಾದೇಶದ ಪರ ಸೈಫ್ ಹಾಸನ್ 51 ಎಸೆತಗಳಲ್ಲಿ 5 ಸಿಕ್ಸರ್, 3 ಬೌಂಡರಿ ಒಳಗೊಂಡ 69 ರನ್ ಗಳಿಸಿದರೇ, ಪರ್ವೇಜ್ ಹೊಸೇನ್ ಎಮನ್ 21 ರನ್ ಗಳಿಸಿದರು. ಉಳಿದವರು ಎರಡಂಕಿ ಮೊತ್ತ ದಾಖಲಿಸಲು ಸಾಧ್ಯವಾಗದೇ ಪೆವಿಲಿಯನ್ ಪರೇಡ್ ನಡೆಸಿದರು. ಭಾರತದ ಪರ ಕುಲದೀಪ್ ಯಾದವ್ 3, ವರುಣ್ ಚಕ್ರವರ್ತಿ, ಬೂಮ್ರಾ ತಲಾ 2, ಅಕ್ಷರ್ ಪಟೇಲ್, ತಿಲಕ್ ವರ್ಮಾ ತಲಾ ಒಂದೊಂದು ವಿಕೆಟ್ ಉರುಳಿಸಿದರು. ಅಭಿಷೇಕ್ ಶರ್ಮಾ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಭೈರಪ್ಪರ ಸಾಹಿತ್ಯದಲ್ಲಿ ಬೇರೆ ಸಾಹಿತಿಗಳಂತೆ ಕಾಲ್ಪನಿಕತೆ ಇರಲಿಲ್ಲ, ವಸ್ತುನಿಷ್ಠತೆ ಇತ್ತು

ಬೆಂಗಳೂರು, ಸೆ.24– ಎಸ್.ಎಲ್.ಭೈರಪ್ಪ ಅವರ ಸಾಹಿತ್ಯದಲ್ಲಿ ಬೇರೆ ಸಾಹಿತಿಗಳಂತೆ ಕಾಲ್ಪನಿಕತೆ ಇರಲಿಲ್ಲ. ವಸ್ತುನಿಷ್ಠತೆ ಇರುತ್ತಿತ್ತು ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ಹೇಳಿದ್ದಾರೆ.



ಎಸ್.ಎಲ್.ಭೈರಪ್ಪ ಅವರ ನಿಧನಕ್ಕೆ ಸಂತಾಪ ಸೂಚಿಸುತ್ತಾ ಮಾತನಾಡಿದ ಅವರು, ಭೈರಪ್ಪರ ದೇಹ ದೂರಾಗಿದೆ. ಆದರೆ, ಅವರ ಕೃತಿಗಳು 100 ವರ್ಷಗಳ ನಂತರವೂ ಇರುತ್ತವೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಭೈರಪ್ಪರ ಕೃತಿ, ಕಾದಂಬರಿಗಳು ಅದರೊಳಗಿನ ವಿಚಾರನಿಷ್ಠತೆ ಮತ್ತು ವಸ್ತುನಿಷ್ಠತೆ ಗಟ್ಟಿತನದಿಂದಾಗಿ, ಮಾಹಿತಿ ಕಣಜವಾಗಿ, ಇತಿಹಾಸದ ಪುಸ್ತಕವಾಗಿ ನಮಗೆ ಶಾಶ್ವತವಾಗಿ ಬೆಳಕನ್ನು ಕೊಡುತ್ತವೆ. ಅವರು ನಮ್ಮಿಂದ ದೂರಾಗಿರಬಹುದು. ಆದರೆ, ಅವರ ಸಾಹಿತ್ಯಕ್ಕೆ ಮಾತ್ರ ಇನ್ನೂ ನೂರಾರು ವರ್ಷ ಬದುಕುವಷ್ಟು ಗಟ್ಟಿತನ ಎಂದು ತಿಳಿಸಿದ್ದಾರೆ.

ಬೇರೆ ಸಾಹಿತಿಗಳು ಯಾವುದೇ ಒಂದು ಸನ್ನಿವೇಶವನ್ನು ತೆಗೆದುಕೊಂಡಾಗ ಅದರ ಸುತ್ತ ಕಲ್ಪನಾ ಲೋಕವನ್ನು ಸೃಷ್ಟಿ ಮಾಡುತ್ತಾರೆ. ಅವರ ಸಾಹಿತ್ಯದಲ್ಲಿ ಉತ್ಪ್ರೇಕ್ಷೆ, ವೈಭವೀಕರಣ ಇರುತ್ತದೆ. ಆದರೆ, ಭೈರಪ್ಪ ಅವರ ಸಾಹಿತ್ಯದಲ್ಲಿ ಇದ್ಯಾವುದೂ ಇರಲ್ಲ. ಇವರ ಪ್ರತಿ ಕಾದಂಬರಿಯಲ್ಲಿ ವಸ್ತುನಿಷ್ಠತೆ, ಇತಿಹಾಸದ ಸತ್ಯಸಂಗತಿ ಇದೆ. ಅದರ ಸುತ್ತ ನಿಜಸನ್ನಿವೇಶವನ್ನೇ ಅವರು ಹೆಣೆದಿದ್ದಾರೆ. ಇತಿಹಾಸ ಮತ್ತು ಸತ್ಯಸಂಗತಿಗೆ ಅಪಚಾರ ಎಸಗುವಂತಹದ್ದನ್ನು ಭೈರಪ್ಪರು ಬರೆದಿಲ್ಲ ಎಂದು ಹೇಳಿದ್ದಾರೆ.

ಮನೆಗಳಲ್ಲಿ ಬೊಂಬೆಗಳ ಉತ್ಸವ ಉತ್ಸಾಹ



ವಿದ್ಯಾರಣ್ಯಪುರಂನ ಪಲ್ಲವಿ ಅವರ ಮನೆಯಲ್ಲಿ ಬೊಂಬೆ ಪ್ರದರ್ಶನ.



ಮೈಸೂರಿನ ಕುವೆಂಪುನಗರದ ಕೈಗಾರಿಕೋದ್ಯಮಿ ಆರ್.ಕೃಷ್ಣ ರಂಗರಾವ್ ಹಾಗೂ ಶ್ರೀಮತಿ ಸುಮಾ ಕೃಷ್ಣ ನಿವಾಸದಲ್ಲಿ ಫಲಪುಷ್ಪ ದಸರಾ ಗೊಂಬೆ ಪ್ರದರ್ಶನ ಏರ್ಪಡಿಸಲಾಗಿತ್ತು. ಈ ವೇಳೆ ಹಿರಿಯ ವಕೀಲರಾದ ನಟರಾಜ್, ಶ್ರೀಮತಿ ಜಾನವಿ ಮೂರ್ತಿ, ಮುಖಂಡರಾದ ವಿಕ್ರಾಂತ್ ಪಿ.ದೇವೇಗೌಡ ಇದ್ದರು.

ಮೈಸೂರು, ಸೆ.24 (ಎಂಕೆ)– ಸುಂದರ... ಸುಕೋಮಲ... ಮುಗ್ಧತೆಯ ಮುಖವುಳ್ಳ ಬೊಂಬೆಗಳ ನವನವೀನ ನೋಟ ಕಣ್ಮನ ಸೆಳೆಯುತ್ತಿದೆ...!

ಅಂದಹಾಗೆ...ವಿಶ್ವವಿಖ್ಯಾತ ನಾಡಹಬ್ಬ ಮೈಸೂರು ದಸರಾ ಬಂತೆಂದರೆ 10 ದಿನಗಳ ನವರಾತ್ರಿ ವೈಭವ ಆವರಿಸಲಿದ್ದು, ನಾಡಿನೆಲ್ಲೆಡೆ ಮನೆ ಮನೆಗಳಲ್ಲಿ ಅತ್ಯಾಕರ್ಷಕ ಬೊಂಬೆಗಳನ್ನು ಜೋಡಿಸಿ, ಪ್ರದರ್ಶನಕ್ಕಿಡುವ ಸಂಪ್ರದಾಯ ಬೆಳೆದು ಬಂದಿದೆ.

ಅದರಂತೆ ಮೈಸೂರಿನ ಖಿಲ್ಲೆ ಮೊಹಲ್ಲಾದಲ್ಲಿರುವ ಶ್ರೀ ಯೋಗಾನರಸಿಂಹ ಸ್ವಾಮಿ ದೇವಾಲಯದ ಆಡಳಿತಾಧಿಕಾರಿ ಎನ್.ಶ್ರೀನಿವಾಸ್ ನಿವಾಸದಲ್ಲಿ ಅವರ ಸೊಸೆ ಆರ್.ಸತ್ಯಲಕ್ಷ್ಮಿ ಅವರು, 500ಕ್ಕೂ ಅಧಿಕ ಬೊಂಬೆಗಳನ್ನು ಅಲಂಕರಿಸಿದರೆ, ವಿದ್ಯಾರಣ್ಯಪುರಂ 3ನೇ ಮುಖ್ಯರಸ್ತೆ ನಿವಾಸಿ ಪಲ್ಲವಿ ತಮ್ಮ ಕುಟುಂಬಸ್ಥರೊಂದಿಗೆ ಜೋಡಿಸಿರುವ ನೂರಾರು ಬೊಂಬೆಗಳು ನೋಡುಗರ ಹೃನ್ಮನ ಸೆಳೆಯುತ್ತಿವೆ.

40 ವರ್ಷದ ಹಳೆಯ ಬೊಂಬೆಗಳು. ವಿಶ್ವರೂಪ ದರ್ಶನ, ಕೃಷ್ಣ ಗೋಪಿಕೆಯರ ಸಮಾಗಮ, ಭೂ ವರಾಹಸ್ವಾಮಿಯ ಮುಗ್ಧ ದರ್ಶನ, ಸುಬ್ರಮಣ್ಯ ಸ್ವಾಮಿ ಜನನ, ಶ್ರೀಕೃಷ್ಣ, ವಿಷ್ಣುವಿನ ದಶಾವತಾರ, ಮಧುರೈ ಮೀನಾಕ್ಷಿ, ದಕ್ಷಿಣಾಮೂರ್ತಿ, ಧನ್ವಂತರಿ, ಕಾಮಧೇನು, ಅನ್ನಪೂರ್ಣೇಶ್ವರಿ, ಲಕ್ಷ್ಮೀ ಹಯಗ್ರೀವ ಸೇರಿದಂತೆ ನವರಾತ್ರಿ ಗತವೈಭವ ಅನಾವರಣಗೊಳಿಸಲಾಗಿದೆ. ಜೊತೆಗೆ ಕೈಯಿಂದ ಮಾಡಿದ ಅಷ್ಟಲಕ್ಷ್ಮಿ, ನವದುರ್ಗೆಯರ ಸೆಟ್‌ಗಳು ಮತ್ತು ಮೈಸೂರು ದಸರಾ ಜಂಬೂ ಸವಾರಿ ಮೆರವಣಿಗೆಯ ವಿನ್ಯಾಸ ಗಮನ ಸೆಳೆಯುತ್ತಿವೆ. ಅದೇ ರೀತಿ ಪಲ್ಲವಿ ಅವರ ಮನೆಯಲ್ಲೂ ಮೈಸೂರು ಅರಮನೆ, ದಸರಾ ಉತ್ಸವ ಸೇರಿದಂತೆ ಹತ್ತು–ಹಲವು ವಿವಿಧ ಮಾದರಿಯ ನೂರಾರು ದೇವರ ಬೊಂಬೆಗಳು ಮನಸೆಳೆಯುವಂತಿವೆ.

ಸಂಪ್ರದಾಯದ ಭಾಗ: ಮೈಸೂರು ದಸರಾ ನಮ್ಮ ನಾಡಹಬ್ಬ. ಈ ಹಬ್ಬದ ಸಂದರ್ಭ ಮನೆ–ಮನೆಗಳಲ್ಲೂ ಬೊಂಬೆಗಳನ್ನು ಕೂರಿಸಿ ನವರಾತ್ರಿಯ ವಿಶೇಷ ಪೂಜೆ ಸಲ್ಲಿಸುವುದು ಹಿಂದಿನಿಂದಲೂ ನಡೆದು ಬಂದ ವಾಡಿಕೆಯಾಗಿದೆ. ಮನೆಗಳಲ್ಲಿ ವಾಸದ ಕೋಣೆಗಳನ್ನು ಗೊಂಬೆಗಳು ಮತ್ತು ಪ್ರತಿಮೆಗಳ ಚಿಕಣಿ ವಸ್ತು ಸಂಗ್ರಹಾಲಯಗಳಾಗಿ ಪರಿವರ್ತಿಸಲಾಗುತ್ತಿದೆ. ಇವೆಲ್ಲವೂ ಮನೆಯ ಗೃಹಿಣಿಯ ಸೃಜನಶೀಲತೆ ಮತ್ತು ಸಮುದಾಯದಲ್ಲಿ ಬೇರೂರಿರುವ ಸಂಪ್ರದಾಯದ ಭಾಗವಾಗಿದೆ ಎಂದು ಎನ್.ಶ್ರೀನಿವಾಸ್ 'ಮೈಸೂರು ಮಿತ್ರ'ನಲ್ಲಿ ಸಂತಸ ಹಂಚಿಕೊಂಡರು.

ನನಗೆ ಚಿಕ್ಕ ವಯಸ್ಸಿನಿಂದಲೂ ಬೊಂಬೆಗಳ ಮೇಲೆ ಪ್ರೀತಿ, ಆಸಕ್ತಿ ಹೆಚ್ಚು. ನಮ್ಮ ಅಜ್ಜ–ಅಜ್ಜಿ, ತಂದೆ–ತಾಯಿಯ ಜೊತೆಗೂಡಿ ಬೊಂಬೆಗಳನ್ನು ಸಿದ್ಧಪಡಿಸುತ್ತಿದ್ದ ನೆನಪು ಇಂದಿಗೂ ಎನ್ನುವ ವಿದ್ಯಾರಣ್ಯಪುರಂನ ಪಲ್ಲವಿ ಅವರು, ಪ್ರತಿವರ್ಷವೂ ನವರಾತ್ರಿಯ ಅಷ್ಟೂ ದಿನಗಳು ಬೊಂಬೆ ಕೂರಿಸಿ ಪೂಜೆ ಮಾಡುತ್ತೇವೆ ಎಂದರು.

ಮೈಸೂರಲ್ಲಿ ವೃದ್ಧರ ಸುಲಿಗೆ ಪುರಾಣ; ದೂರು ನೀಡಲು ಅಂಜುತ್ತಿರುವ ಹಿರಿಯ ಜೀವಗಳು!

ಮೈಸೂರು, ಸೆ.24(ಆರ್‌ಕೆ, ಬಿಸಿಟಿ)– ಕಾರಿನಲ್ಲಿ ಒಂಟಿಯಾಗಿ ಸಂಚರಿಸುವ ಹಿರಿಯ ನಾಗರಿಕರನ್ನು ಗುರಿಯಾಗಿಸಿಕೊಂಡು ನಕಲಿ ಅಪಘಾತದ ನೆಪದಲ್ಲಿ ಅವರಿಂದ ಹಣ ಸುಲಿಗೆ ಮಾಡುವ ದಂಧೆ ಮೈಸೂರಲ್ಲಿ ದಿನೇ ದಿನೆ ಸಾಕಷ್ಟು ಬೆಳಕಿಗೆ ಬರುತ್ತಿವೆ. ಕಳೆದ ನಾಲ್ಕೈದು ತಿಂಗಳಿಂದೀಚೆಗೆ ಇಂತಹ ಘಟನೆಗಳು ಹೆಚ್ಚಾಗುತ್ತಿದ್ದರೂ, ಅದನ್ನು ಪೊಲೀಸರು ಗಂಭೀರವಾಗಿ ಪರಿಗಣಿಸಿಲ್ಲ ಎಂಬ ಆರೋಪಗಳು ವ್ಯಾಪಕವಾಗಿ ಕೇಳಿಬರುತ್ತಿವೆ.

ಸುಲಿಗೆಗೆ ಒಳಗಾದ ಕೆಲವರು ಪೊಲೀಸರಿಗೆ ದೂರು ಸಲ್ಲಿಸಿದರೆ, ಮತ್ತೆ ಕೆಲವರು ಪೊಲೀಸರ ಕ್ರಮದ ಬಗ್ಗೆ ವಿಶ್ವಾಸವಿಲ್ಲದೆಯೋ ಏನೋ ದೂರು ನೀಡುವ ಗೋಜಿಗೇ ಹೋಗಿಲ್ಲ. ಇನ್ನು ಕೆಲ ಹಿರಿಯ ನಾಗರಿಕರು ಚಾಣಾಕ್ಷತನದಿಂದ ಸುಲಿಗೆಕೋರರಿಂದ ಬಚಾವಾಗಿದ್ದಾರೆ.

ವೈದ್ಯರ ರಕ್ಷಿಸಿದ ಸ್ನೇಹಿತ: ಮೈಸೂರಿನ ಧನ್ವಂತರಿ ರಸ್ತೆಯ ಇಂದ್ರ ಭವನ್ ಕಟ್ಟಡದಲ್ಲಿನ ನೇತ್ರ ಚಿಕಿತ್ಸಾಲಯದ ಡಾ. ಶ್ರೀನಿವಾಸನ್ ಅವರನ್ನು ಸ್ನೇಹಿತ ಕಾಳಿದಾಸ ರಸ್ತೆಯ ಲೂಬ್ರಿಕೆಂಟ್ ಅಂಗಡಿ ಮಾಲೀಕ ಕೆ.ಯೋಗಾನಂದ್ ದುಷ್ಕರ್ಮಿಗಳಿಂದ 'ಪಾರು' ಮಾಡಿದ್ದಾರೆ.

ಡಾ. ಶ್ರೀನಿವಾಸನ್ ಪ್ರತೀ ಭಾನುವಾರ ಯೋಗಾನಂದ ಅವರ ಅಂಗಡಿಗೆ ಭೇಟಿ ನೀಡುತ್ತಿದ್ದರು. ಹಾಗೆಯೇ ಒಂದು ದಿನ ಮಧ್ಯಾಹ್ನ 1.30ರ ಸುಮಾರಿನಲ್ಲಿ ತಮ್ಮ ಹೋಂಡಾಸಿಟಿ (ಕೆಎ 09 ಪಿ 4240) ಕಾರಿನಲ್ಲಿ ಸ್ನೇಹಿತನ ಅಂಗಡಿಗೆ ತೆರಳುತ್ತಿದ್ದರು. ಮಾತೃಮಂಡಳಿ ಸರ್ಕಲ್ ಸಮೀಪಿಸುತ್ತಿದ್ದಂತೆಯೇ ಯಾರೋ ಕೈಯ್ಯಿಂದ ಕಾರನ್ನು ಗುದ್ದಿದಂತೆ ಭಾಸವಾಗಿದೆ. ಇದೇ ವೇಳೆ ಯುವಕನೋರ್ವ ಸ್ಕೂಟರ್‌ನಲ್ಲಿ ಅವರ ಕಾರಿನ ಪಕ್ಕ ಚಲಿಸುತ್ತಾ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾನೆ. ಅವರ ಕಾರು ಕಾಳಿದಾಸ ರಸ್ತೆಯಲ್ಲಿ ಬೃಂದಾವನ ಆಸ್ಪತ್ರೆ ಜಂಕ್ಷನ್ ಸಮೀಪಿಸುತ್ತಿದ್ದಂತೆಯೇ ಯುವಕ ಇವರ ಕಾರನ್ನು ಅಡ್ಡಗಟ್ಟಿ, ನೀವು ಯುವಕನೊಬ್ಬನ ಪಾದದ ಮೇಲೆ ಕಾರು ಹರಿಸಿ ಬಂದಿದ್ದೀರಿ. ಅವರಿಗೆ ರಕ್ತಸ್ರಾವವಾಗುತ್ತಿದೆ. ಆಸ್ಪತ್ರೆಗೆ ಸೇರಿಸಲು 1 ಲಕ್ಷ ರೂ. ಕೊಡಿ ಎಂದು ದಬಾಯಿಸಿದ್ದಾನೆ ಎಂದು ವೈದ್ಯರ ಸ್ನೇಹಿತ ಯೋಗಾನಂದ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಯುವಕನ ಆರ್ಭಟದಿಂದ ಆಘಾತಕ್ಕೊಳಗಾದ ವೈದ್ಯರು ಆತನಿಗೆ ಹಣ ಡ್ರಾ ಮಾಡಿಕೊಡಲು ಎಟಿಎಂಗೆ ಕರೆದಾಗ ಆತ ತನ್ನ ಸ್ಕೂಟರ್‌ನಲ್ಲೇ ಅವರನ್ನು ಪಂಚವಟಿ ಸರ್ಕಲ್‌ನಲ್ಲಿರುವ ಎಟಿಎಂಗೆ ಕರೆದೊಯ್ದಿದ್ದಾನೆ. ಆದರೆ ಒತ್ತಡಕ್ಕೆ ಒಳಗಾಗಿದ್ದ ವೈದ್ಯರು 2 ಬಾರಿ ತಪ್ಪಾಗಿ ಪಿನ್ ನಮೂದಿಸಿದ್ದರಿಂದ ಹಣ ಡ್ರಾ ಆಗಿಲ್ಲ. ಕೊನೆಗೆ ತನ್ನ ಸ್ನೇಹಿತನಿಗೆ 50 ಸಾವಿರ ವ್ಯವಸ್ಥೆ ಮಾಡಲು ಹೇಳಿದ್ದೇನೆ. ಪಿನ್ ಸಮಸ್ಯೆ ಬಗೆಹರಿದ ನಂತರ ನನ್ನ ಕಾರ್ಡ್‌ನಿಂದ ಮತ್ತೆ 40 ಸಾವಿರ ಡ್ರಾ ಮಾಡಿಕೊಡುತ್ತೇನೆ ಎಂದು ಮನವರಿಕೆ ಮಾಡಿದ್ದಾರೆ.

ಯುವಕ ಅವರನ್ನು ತನ್ನ ಸ್ಕೂಟರ್‌ನಲ್ಲೇ ಯೋಗಾನಂದ ಅವರ ಅಂಗಡಿ ಕಡೆಗೆ ಕರೆದೊಯ್ದಿದ್ದಾನೆ. ಈ ಮಧ್ಯೆ ವೈದ್ಯರು ಅಪಘಾತದ ವಿಚಾರವನ್ನು ಸ್ನೇಹಿತ ಯೋಗಾನಂದ ಅವರಿಗೆ ಮೊಬೈಲ್ ಮೂಲಕ ವಿವರಿಸಿದ್ದಾರೆ. ಯೋಗಾನಂದ್ ಅಂಗಡಿಯಿಂದ ಸುಮಾರು 200 ಮೀ. ಅಂತರದಲ್ಲಿ ವೈದ್ಯರನ್ನು ಸ್ನೇಹಿತ ಭೇಟಿ ಮಾಡಿದಾಗ ಭಯಪಡುವ ಅಗತ್ಯವಿಲ್ಲ. ಅಪಘಾತವಾಗಿದ್ದರೆ ಪೊಲೀಸರಿಗೆ ದೂರು ನೀಡಿ, ವಿಮೆ ಮೂಲಕ ಕಾನೂನುಬದ್ಧವಾಗಿ ಸಮಸ್ಯೆ ಬಗೆಹರಿಸಿಕೊಳ್ಳಬಹುದು ಎಂದು ಯೋಗಾನಂದ್ ವೈದ್ಯರಿಗೆ ಧೈರ್ಯ ತುಂಬಿ, ಯುವಕನ ಬಳಿ ಬಂದರೆ, ಆತನ ಸ್ಕೂಟರ್‌ಗೆ ನಂಬರ್ ಪ್ಲೇಟೇ ಇಲ್ಲ. ಅದರ ಬಗ್ಗೆ ವಿಚಾರಿಸಿದಾಗ ಯುವಕ ಕಾಳಿದಾಸ ರಸ್ತೆಯ ಏಕಮುಖ ಸಂಚಾರ ಮಾರ್ಗದಲ್ಲಿ ವೇಗವಾಗಿ ಪರಾರಿಯಾಗಿದ್ದಾನೆ. ಯೋಗಾನಂದ್ ಅವರ ಸಮಯಪ್ರಜ್ಞೆ ಹಾಗೂ ಬುದ್ಧಿವಂತಿಕೆಯಿಂದ ವೈದ್ಯರು ವಂಚನೆಗೊಳಗಾಗುವುದು ತಪ್ಪಿದಂತಾಗಿದೆ.



55 ಸಾವಿರ ಸುಲಿಗೆ: ಮತ್ತೊಂದು ಪ್ರಕರಣದಲ್ಲಿ ಮೈಸೂರಿನ ಗೋಕುಲಂ 1ನೇ ಹಂತದ ನಿವಾಸಿ, 60 ವರ್ಷದ ಹಿರಿಯ ನಾಗರಿಕರೊಬ್ಬರು ಬೆಳಿಗ್ಗೆ 10.30ರ ವೇಳೆಗೆ ಮನೆಯಿಂದ ಹೊರಟು ಹುಣಸೂರು ರಸ್ತೆಯ ಪಡುವಾರಹಳ್ಳಿ ಜಂಕ್ಷನ್ ಮೂಲಕ ಮಾನಸ ಗಂಗೋತ್ರಿಯ ಬಯಲು ರಂಗಮಂದಿರ ಮಾರ್ಗವಾಗಿ ಬೋಗಾದಿ ರಸ್ತೆ ತಲುಪಿದಾಗ ಕುಕ್ಕರಹಳ್ಳಿ ಕೆರೆ ಪ್ರವೇಶ ದ್ವಾರದ ಬಳಿ ಹಿಂದಿನಿಂದ ಬಂದ ದ್ವಿಚಕ್ರ ವಾಹನ ಸವಾರ ಕಾರನ್ನು ಅಡ್ಡಗಟ್ಟಿ ನಿಲ್ಲಿಸಿದ್ದಾನೆ.

ಕಾರು ನಿಲ್ಲಿಸುತ್ತಿದ್ದಂತೆಯೇ ಎಡ ಬದಿ ಸೀಟಿನಲ್ಲಿ ಕುಳಿತ ಆತ ನನ್ನ ಹೆಸರು ರವಿ, ಪಡುವಾರಹಳ್ಳಿ ಜಂಕ್ಷನ್ ಬಳಿ ನನ್ನ ವಾಹನಕ್ಕೆ ಡಿಕ್ಕಿ ಹೊಡೆದು ಬಂದಿದ್ದೀರೆಂದು ಅಬ್ಬರಿಸಿದ್ದಾನೆ. ಅಚ್ಚರಿಗೊಂಡ ವೃದ್ಧರು, ನಾನು ಯಾವುದೇ ವಾಹನಕ್ಕೂ ಡಿಕ್ಕಿ ಹೊಡೆದಿಲ್ಲ ಎನ್ನುತ್ತಿದ್ದಂತೆಯೇ ಅವಾಚ್ಯ ಶಬ್ಧಗಳಿಂದ ಬೈಯ್ದು ಎಗರಾಡತೊಡಗಿದ್ದಾನೆ. ನಂತರ 2 ಲಕ್ಷ ರೂ ಕೊಡುವಂತೆ ಬೇಡಿಕೆ ಇಟ್ಟಿದ್ದಾನೆ.

ಆಕ್ಸಿಡೆಂಟ್ ನಡೆದ ಸ್ಥಳದಲ್ಲಿ ನೂರಾರು ಮಂದಿ ಸೇರಿದ್ದಾರೆ. ನೀವು ಅಲ್ಲಿಗೆ ಬಂದರೆ ನಿಮ್ಮ ಮೇಲೆ ಹಲ್ಲೆ ಮಾಡುತ್ತಾರೆ. ಹೀಗೆ ಹೇಳಿ 25 ಸಾವಿರ ಹಾಗೂ ಮತ್ತೊಮ್ಮೆ 30 ಸಾವಿರ ರೂ ಸೇರಿ ಒಟ್ಟು 55 ಸಾವಿರ ರೂ ವರ್ಗಾವಣೆ ಮಾಡಿಸಿಕೊಂಡಿದ್ದಾನೆ. ನಂತರ ನಾನು ಬ್ಯಾಂಕ್‌ನಲ್ಲಿ ಪರಿಶೀಲಿಸಿದಾಗ ನೀರು ಟ್ರೇಡರ್ಸ್ ಮತ್ತು ಸೋಲಂಕಿ ಟೇಡರ್ಸ್‌ಗೆ ಹಣ ವರ್ಗಾವಣೆಯಾಗಿರುವುದು ತಿಳಿದು ಬಂತು ಎಂದು 'ಮೈಸೂರು ಮಿತ್ರ'ನಲ್ಲಿ ಅಳಲು ತೋಡಿಕೊಂಡ ಆ ವೃದ್ಧರು, ಈ ಬಗ್ಗೆ ನಾನು ಪೊಲೀಸ್ ಠಾಣೆಗೆ ದೂರು ನೀಡಲಿಲ್ಲ ಎಂದರು.

ಫಲ ನೀಡದ ಬ್ಲ್ಯಾಕ್‌ಮೇಲ್: ಇನ್ನೊಂದು ಪ್ರಕರಣದಲ್ಲಿ ಸುಮಾರು 64 ವರ್ಷ ವಯಸ್ಸಿನ ಹಿರಿಯ ನಾಗರಿಕರು ತಮ್ಮ ಕಾರಿನಲ್ಲಿ ವಿ.ವಿ. ಮೊಹಲ್ಲಾದ ಆದಿಪಂಪ ರಸ್ತೆಯಲ್ಲಿ ಹೋಗುತ್ತಿದ್ದಾಗ ಬೆಳಿಗ್ಗೆ 10.15ರ ಸಮಯದಲ್ಲಿ ಕಾರಿನ ಹಿಂಬದಿ ಶಬ್ಧ ಬಂದಂತಾಗಿದೆ. ಇಂದಿನ 'ಮೈಸೂರು ಮಿತ್ರ'ದಲ್ಲಿ ನಕಲಿ ಅಪಘಾತ ಸುದ್ದಿ ಓದಿದ್ದ ಅವರು ಧೃತಿಗೆಡದೆ ಮುಂದೆ ಸಾಗಿದ್ದಾರೆ. ತುಸು ದೂರ ಹೋಗುತ್ತಿದ್ದಂತೆಯೇ ಸುಮಾರು 28–30 ವರ್ಷದ ವ್ಯಕ್ತಿ ಕಾರನ್ನು ತಡೆದು ಆದಿಪಂಪ ರಸ್ತೆಯ ಜಂಕ್ಷನ್ ಬಳಿ ಅಪಘಾತ ಮಾಡಿ ಬಂದಿದ್ದೀರಿ ಎಂದು ಗಲಾಟೆ ಮಾಡಿದ. ಗಾಯಗೊಂಡಿರುವ ವ್ಯಕ್ತಿಯನ್ನು ಇಲ್ಲಿಗೆ ಕರೆಸಿ ಎಂದರೆ, ಅದಕ್ಕೆ ಒಪ್ಪದೇ ಗಾಯಗೊಂಡಿರುವ ವ್ಯಕ್ತಿ ತೀವ್ರ ರಕ್ತಸ್ರಾವದಿಂದ ಒದ್ದಾಡುತ್ತಿದ್ದಾರೆ, ಒಂದು ವೇಳೆ ಜನರು ಸೇರಿಕೊಂಡರೆ ತೊಂದರೆಯಾಗುತ್ತದೆ ಎಂದು ಹೆದರಿಸಿದ್ದಾನೆ.

ಪೊಲೀಸರಿಗೆ ಮಾಹಿತಿ ನೀಡಿ ಸ್ಥಳಕ್ಕೆ ಕರೆಸುತ್ತೇನೆ ಕಾನೂನು ಪ್ರಕಾರ ಕ್ರಮವಾಗಲಿ ಎಂದು ಹಿರಿಯ ನಾಗರಿಕರು ಹೇಳುತ್ತಿದ್ದಂತೆಯೇ ಆ ವ್ಯಕ್ತಿ ಏಕವಚನದಲ್ಲಿ ನಿಂದಿಸಲಾರಂಭಿಸಿ, ಮುಂದೆ ಎಚ್ಚರದಿಂದ ಕಾರು ಚಾಲನೆ ಮಾಡಿ ಎಂದು ಗೊಣಗುತ್ತಾ ತನ್ನ ಮೋಟಾರ್ ಸೈಕಲ್‌ನಲ್ಲಿ ಹೊರಟು ಹೋದ. ಆದರೆ, ನಾನು ಪೊಲೀಸ್ ಠಾಣೆಗೆ ದೂರು ನೀಡಲಿಲ್ಲ ಎಂದು ಆ ವೃದ್ಧರು 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ವಿರಾಜಪೇಟೆ ಆಸ್ಪತ್ರೆಗೆ ಆರೋಗ್ಯ ಸಚಿವರ ಭೇಟಿ



ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ವಿರಾಜಪೇಟೆ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲಿಸಿ, ವೈದ್ಯರು ಮತ್ತು ಸಿಬ್ಬಂದಿಗಳೊಂದಿಗೆ ಚರ್ಚಿಸಿದರು.

ವಿರಾಜಪೇಟೆ, ಸೆ.24– ವಿರಾಜಪೇಟೆ ಸರ್ಕಾರಿ ಆಸ್ಪತ್ರೆಗೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಮಂಗಳವಾರ ಭೇಟಿ ನೀಡಿ ಪರಿಶೀಲಿಸಿದರು. ಈ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ವಿರಾಜಪೇಟೆ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಲು ರಾಜ್ಯ ಸರಕಾರದಿಂದ ನೀಡಲಾಗಿರುವ ಅನುದಾನ ಬಿಡುಗಡೆಯ ಕಾರ್ಯ ಪ್ರಗತಿಯಲ್ಲಿರುವುದಾಗಿ ತಿಳಿಸಿದರಲ್ಲದೆ, ಜೊತೆಯಲ್ಲಿ ಉಪಸ್ಥಿತರಿದ್ದ ವಿರಾಜಪೇಟೆ ಶಾಸಕರು ಮತ್ತು ಆಸ್ಪತ್ರೆಯ ಆರೋಗ್ಯ ರಕ್ಷಾ ಸಮಿತಿ ಅಧ್ಯಕ್ಷರಾದ ಅಜ್ಜಿಕುಟ್ಟೀರ ಎಸ್. ಪೊನ್ನಣ್ಣ ಅವರೊಂದಿಗೆ ಆಸ್ಪತ್ರೆಯ ಅಭಿವೃದ್ಧಿ ಕಾರ್ಯಗಳ ಬಗ್ಗೆ ಚರ್ಚೆ ನಡೆಸಿದರು.

ಬಳಿಕ ಸಚಿವರು ಮತ್ತು ಶಾಸಕರು ಆಸ್ಪತ್ರೆಯನ್ನು ಪರಿಶೀಲನೆ ನಡೆಸಿದರು. ಒಳರೋಗಿಗಳ ಯೋಗಕ್ಷೇಮ ವಿಚಾರಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ವೈದ್ಯಾಧಿಕಾರಿ ಡಾ.ಸತೀಶ್, ತಾಲೂಕು ಅಧಿಕಾರಿ ಯತಿರಾಜ್, ಆಸ್ಪತ್ರೆಯ ಮುಖ್ಯ ವೈದ್ಯಾಧಿಕಾರಿ ಡಾ.ವಿಶ್ವನಾಥ್ ಸಿಂಪಿ, ಪುರಸಭೆ ಅಧ್ಯಕ್ಷ ದೇಚಮ್ಮ ಕಾಳಪ್ಪ, ಸ್ಥಾಯಿ ಸಮಿತಿಯ ಜಲೀಲ್, ಸದಸ್ಯರಾದ ಸಿ.ಕೆ.ಪೃಥ್ವಿನಾಥ್, ಎಸ್.ಹೆಚ್.ಮತೀನ್, ರಂಜಿನಿತ್ ಹಮೀದ್, ಆರೋಗ್ಯ ರಕ್ಷಾ ಸಮಿತಿಯ ಸದಸ್ಯರಾದ ಕೆ.ಮಂಜು ದೇವಯ್ಯ, ಕಕೀಲ್, ಶೀಭಾ ಪೃಥ್ವಿನಾಥ್, ಅನಿತಾ, ಮಂಡೇಟಿರ ಅನಿಲ್, ಹಾಗೂ ಪಕ್ಷದ ಪ್ರಮುಖರಾದ ಅಬ್ದುಲ್ ಸಲಾಂ, ಪಿ.ರಕ್ಷಿತ್ ಚಂಗಪ್ಪ, ಜೋಕಿಂ ರಾಡ್ರಿಗಾಸ್, ಭವಿನ್, ಎ.ವಿ. ಮಂಜುನಾಥ್, ಮತ್ತು ಆಸ್ಪತ್ರೆಯ ವೈದ್ಯರು ಹಾಗೂ ಸಿಬ್ಬಂದಿಗಳು ಹಾಜರಿದ್ದರು.

ಹುಲಿ ದಾಳಿ : ಹಸು ಸಾವು

ಗೋಣಿಕೊಪ್ಪ: ಪೊನ್ನಂಪೇಟೆ ತಾಲೂಕಿನ ಹುದಿಕೇರಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬೆಳ್ಳೂರು ಗ್ರಾಮದಲ್ಲಿ ಹುಲಿ ದಾಳಿ ನಡೆಸಿ ಹಸುವನ್ನು ಕೊಂದುಹಾಕಿರುವ ಘಟನೆ ನಡೆದಿದೆ. ಬಾಚೀರ ಮೆಮ್ಮಯ್ಯ ಅವರ ಗಬ್ಬದ ಹಸುವನ್ನು ಇಂದು ಮಧ್ಯಾಹ್ನ 3.30 ಸಮಯದಲ್ಲಿ ಹುಲಿ ದಾಳಿ ನಡೆಸಿದೆ. ಸ್ಥಳಕ್ಕೆ ಪೊನ್ನಂಪೇಟೆ ಅರಣ್ಯ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಮಡಿಕೇರಿಯಲ್ಲಿ 'ಕಾಫಿ ದಸರಾ'ಗೆ ಚಾಲನೆ

ಕಾಫಿ ಉತ್ಪಾದನೆ ಹೆಚ್ಚಿಸಿ, ವಿದೇಶಿ ವಿನಿಮಯಗಳಿಸಲು ಯೋಜನೆ

ಭಾರತೀಯ ಕಾಫಿ ಮಂಡಳಿಯ ಅಧ್ಯಕ್ಷ ದಿನೇಶ್ ದೇವವೃಂದ ಘೋಷಣೆ



ಕಾಫಿ ದಸರಾವನ್ನು ಭಾರತೀಯ ಕಾಫಿ ಮಂಡಳಿಯ ಅಧ್ಯಕ್ಷ ದಿನೇಶ್ ದೇವವೃಂದ ಮತ್ತಿತರರು ಉದ್ಘಾಟಿಸಿದರು.

ಮಡಿಕೇರಿ,ಸೆ.24– 2047ರೊಳಗಾಗಿ ಭಾರತದ ಕಾಫಿ ಉತ್ಪಾದನೆಯನ್ನು 7 ಲಕ್ಷ ಮೆಟ್ರಿಕ್ ಟನ್‌ಗಳಿಗೆ ಹೆಚ್ಚಿಸುವ ಮೂಲಕ 50 ಸಾವಿರ ಕೋಟಿ ವಿದೇಶಿ ವಿನಿಮಯಗಳಿಸುವ ನಿಟ್ಟಿನಲ್ಲಿ ಕಾಫಿ ಮಂಡಳಿ ವಿಸ್ತೃತ ಕಾರ್ಯ ಯೋಜನೆಗಳನ್ನು ಹಮ್ಮಿಕೊಂಡಿರುವುದಾಗಿ ಭಾರತೀಯ ಕಾಫಿ ಮಂಡಳಿಯ ಅಧ್ಯಕ್ಷ ದಿನೇಶ್ ದೇವವೃಂದ ತಿಳಿಸಿದರು.

ಮಡಿಕೇರಿ ನಗರ ದಸರಾ ಸಮಿತಿ, ದಸರಾ ಸಾಂಸ್ಕೃತಿಕ ಸಮಿತಿಗಳ ವತಿಯಿಂದ ಕೂರ್ಗ್ ಪ್ಲಾಂಟರ್ಸ್ ಅಸೋಸಿಯೇಷನ್ ಸಹಯೋಗದೊಂದಿಗೆ ನಗರದ ಗಾಂಧಿ ಮೈದಾನದಲ್ಲಿ ಆಯೋಜಿಸಿದ್ದ ದ್ವಿತೀಯ ವರ್ಷದ 'ಕಾಫಿ ದಸರಾ'ವನ್ನು ಪ್ರಥಮ ಮಹಿಳಾ ಕಾಫಿ ಉದ್ಯಮಿ ದಿ.ಸಾಕಮ್ಮ ಸ್ಮರಣಾರ್ಥ ಕಲಾ ಸಂಭ್ರಮ ವೇದಿಕೆಯಲ್ಲಿ ಬೃಹತ್ ಕಾಫಿ ಕಪ್‌ಗೆ ಕಾಫಿ ಸುರಿಯುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ಕಾಫಿ ಉತ್ಪಾದನೆಯನ್ನು ಹೆಚ್ಚಿಸ, ಗುಣಮಟ್ಟದ ಸುಧಾರಣೆಗಳ ನಿಟ್ಟಿನಲ್ಲಿ ಹಲವಾರು ಕಾರ್ಯ ಯೋಜನೆಗಳನ್ನು ಹಮ್ಮಿಕೊಳ್ಳಲಾಗುತ್ತಿದ್ದು, ಚಾಳೆಹೊನ್ನೂರಿನ ಕಾಫಿ ಸಂಶೋಧನಾ ಕೇಂದ್ರ ತನ್ನ 100ನೇ ವರ್ಷಾಚರಣೆ ಹಿನ್ನೆಲೆಯಲ್ಲಿ ಹೊಸ ಕಾಫಿ ತಳಿಗಳನ್ನು ಬಿಡುಗಡೆ ಮಾಡುತ್ತಿದೆ. ಇದರೊಂದಿಗೆ ಈ ಸಂಶೋಧನಾ ಕೇಂದ್ರದಲ್ಲಿ ಟಿಶ್ಯು ಕಲ್ಚರ್ ಸೆಂಟರ್ ತೆರೆಯಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಹೊರ ರಾಜ್ಯಗಳ ಆಸಕ್ತಿ: ಕಾಫಿ ಕೃಷಿಯತ್ತ ಹೊರ ರಾಜ್ಯಗಳು ಇತ್ತೀಚಿನ ದಿನಗಳಲ್ಲಿ ಆಸಕ್ತರಾಗಿವೆ. ಒಡಿಶ್ಶಾ ರಾಜ್ಯದ ಮುಖ್ಯ ಮಂತ್ರಿಗಳು ತಮ್ಮ ರಾಜ್ಯದಲ್ಲಿ ಕಾಫಿ ಕೃಷಿಗೆ 2.50 ಲಕ್ಷ ಹೆಕ್ಟೇರ್ ಪ್ರದೇಶವನ್ನು ಮೀಸಲಾಗಿಟ್ಟಿದ್ದು ಇದರಲ್ಲಿ ಕಾಫಿ ಕೃಷಿ ನಡೆಸುವುದಕ್ಕೆ ತಾಂತ್ರಿಕ ಸಲಹೆ ಸೂಚನೆ ಮಾರ್ಗದರ್ಶನಗಳನ್ನು ಕಾಫಿ ಮಂಡಳಿಯಲ್ಲಿ ಕೋರಿದ್ದರೆ ನಾಗಾಲ್ಯಾಂಡ್ ಸರ್ಕಾರ ಕಾಫಿ ಕೃಷಿಗೆ 1 ಲಕ್ಷ ಹೆಕ್ಟೇರ್ ಮೀಸಲಿಟ್ಟು ಅಗತ್ಯ ಸಲಹೆಗಳನ್ನು ಕೋರಿದೆ ಎಂದು ತಿಳಿಸಿದರು. ನೆರೆಯ ಆಂಧ್ರಪ್ರದೇಶದಲ್ಲಿ ಕಾಫಿ ಕೃಷಿಯತ್ತ ಒಲವು ತೋರಲಾಗುತ್ತಿದೆ ಎಂದು ಹೇಳಿದರು.

ಉತ್ತರ ಕಂಡು ಕೊಳ್ಳಬೇಕಿದೆ: ಬದಲಾಗುತ್ತಿರುವ ಮಾರುಕಟ್ಟೆ ಧಾರಣೆಯೊಂದಿಗೆ, ಕಾಫಿ ಕುರಿತ ಚಿಂತನೆಗಳಲ್ಲಿಯೂ ಮಾರ್ಪಾಡುಗಳಾಗುತ್ತಿವೆ. ಈ ಹಂತದ ಬೆಳೆಗಾರರ ಸಮಸ್ಯೆಗಳಿಗೆ, ಸವಾಲುಗಳಿಗೆ ಉತ್ತರಗಳನ್ನು ಕಂಡು ಕೊಳ್ಳಬೇಕಿದೆ. ಪ್ರಸ್ತುತ ಕಾಫಿ ಯುರೋಪಿಯನ್ ಯೂನಿಯನ್ ಮತ್ತು ಅಮೇರಿಕಾ ಮಾರುಕಟ್ಟೆಗಳನ್ನು ಹೊಂದಿದೆ. ಯುರೋಪಿಯನ್ ಯೂನಿಯನ್ ಪರಿಸರ ಕಾಳಜಿಗಳ ಹಿನ್ನೆಲೆಯಲ್ಲಿ ತಾನು ಖರೀದಿಸುವ ಕಾಫಿಯು ಉತ್ಪಾದನೆಯಾಗುವ ಪ್ರದೇಶಗಳಲ್ಲಿ ಮರಗಳ ಸಂಖ್ಯೆ ಇಳಿಮುಖವಾಗಬಾರದು ಎನ್ನುವ ಪ್ರಮುಖ ಕಾಳಜಿಯೊಂದಿಗೆ ಅದರ ಬಗ್ಗೆ ಮಾಹಿತಿಯನ್ನು ಕೋರಿದೆ. ಅದರಂತೆ ದೊಡ್ಡ ಕಾಫಿ ಬೆಳೆಗಾರರು ತಮ್ಮ ತೋಟಗಳ ಗಡಿಗಳನ್ನು ಕಂಡು ಕೊಳ್ಳುವ ಪಾಲಿಗಾನ್ ಮ್ಯಾಪಿಂಗ್ ಅನ್ನು ಇದೇ ಸಾಲಿನ ಡಿಸೆಂಬರ್ ಒಳಗಾಗಿ ಮಾಡಿಕೊಳ್ಳಬೇಕಾಗುತ್ತದೆ. ಇದಕ್ಕಾಗಿ ಕಾಫಿ ಮಂಡಳಿ ಪ್ರತ್ಯೇಕ ಆ್ಯಪ್ ಸಿದ್ಧಪಡಿಸಿದ್ದು, ಇದಕ್ಕಾಗಿ ಇಸ್ರೋ ನೆರವನ್ನು ಪಡೆದುಕೊಂಡಿದೆ. ಇದರಲ್ಲಿ ದಾಖಲಾಗುವ ಬೆಳೆಗಾರರ ತೋಟಗಳಲ್ಲಿ 2020ರಲ್ಲಿ ಇದ್ದ ಮರಗಳ ಸಂಖ್ಯೆ ಕಡಿಮೆಯಾಗುವಂತಿಲ್ಲ ಎಂದು ತಿಳಿಸಿದರು.

ಸಮಸ್ಯೆ ಬಗೆಹರಿಕೆ ಅಗತ್ಯ: ಮಡಿಕೇರಿ ಕ್ಷೇತ್ರದ ಶಾಸಕ ಡಾ.ಮಂತರ್ ಗೌಡ ಮಾತನಾಡಿ ಜಿಲ್ಲೆಯ ಕಾಫಿ ಬೆಳೆಗಾರರು ಪ್ರಮುಖವಾಗಿ ಅರಣ್ಯ ಮತ್ತು ಕಂದಾಯ ಇಲಾಖೆಯ ಸಾಕಷ್ಟು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಈ ಯಾವುದೇ ಸಮಸ್ಯೆಗಳನ್ನು ಚರ್ಚೆಗಳ ಮೂಲಕ ಬಗೆಹರಿಸುವ ಪ್ರಯತ್ನಗಳು ಅವಶ್ಯ ಇಲ್ಲವಾದಲ್ಲಿ ಸಮಸ್ಯೆಗಳು ಮತ್ತಷ್ಟು ಹೆಚ್ಚುತ್ತದೆ ಎಂದು ಅಭಿಪ್ರಾಯಿಸಿದರು.

ಬೆಳೆಗಾರರಿಗೆ ಮುಕ್ತ: ಜಿಲ್ಲಾಧಿಕಾರಿ ವೆಂಕಟ್ ರಾಜಾ ಮಾತನಾಡಿ ಕಾಫಿ ಬೆಳೆಗಾರರ ಯಾವುದೇ ಸಮಸ್ಯೆಗಳ ಬಗೆಹರಿಕೆಗೆ ತಮ್ಮ ಕಚೇರಿ ಯಾವತ್ತೂ ಮುಕ್ತವಾಗಿರುತ್ತದೆ. ಬೆಳೆಗಾರರಿಗೆ ಅಗತ್ಯ ಸೌಲಭ್ಯ, ಮಾರ್ಗದರ್ಶನಗಳನ್ನು ಒದಗಿಸುವ ನಿಟ್ಟಿನಲ್ಲಿ ಕಾಫಿ ಮಂಡಳಿಯೊಂದಿಗೆ ನಿರಂತರವಾದ ಸಂಪರ್ಕ ಜಿಲ್ಲಾಡಳಿತಕ್ಕೆ ಅಗತ್ಯ. ಈ ಹಿನ್ನೆಲೆ ಮುಂದಿನ ದಿನಗಳಲ್ಲಿ ವರ್ಚುವಲ್ ಸಭೆಗಳನ್ನು ಮಂಡಳಿಯೊಂದಿಗೆ ನಡೆಸಲು ಸಿದ್ಧರಿರುವುದಾಗಿ ತಿಳಿಸಿದರು.

ಸಾಧಕ ಕೃಷಿಕರಿಗೆ ಸನ್ಮಾನ: ಸಮಾರಂಭದಲ್ಲಿ ಸಾಧಕ ಕೃಷಿಕರಾದ ಉಪಾಸಿಯ ಮಾಜಿ ಅಧ್ಯಕ್ಷ ವಿನೋದ್ ಶಿವಪ್ಪ, ಕಿರಗಂದೂರಿನ ಪ್ರಗತಿಪರ ಕೃಷಿಕ ಎಸ್.ಎಂ.ಚಂಗಪ್ಪ, ಎಡದಂಟೆ ಗ್ರಾಮದ ಲವ ಎಡದಂಟೆ, ಪೊನ್ನಪೇಟೆಯ ಡಿ.ಪಿ.ರವಿಶಂಕರ್, ಕೊಡ್ಲಿಪೇಟೆಯ ಡಿ.ವೈ. ಅಬ್ದುಲ್ ರಜಾಕ್, ಮಸಗೋಡಿನ ವಿಕ್ರಂ, ಚೆಟ್ಟಳ್ಳಿಯ ಪೊನ್ನತ್ ಮೊಟ್ಟೆಯ ರಾಬರ್ಟ್ ಮತ್ತು ಮಡಿಕೇರಿಯ ಹಿರಿಯ ಕಾಫಿ ಉದ್ಯಮಿ ನಿಜಾಮುದ್ದೀನ್ ಸಿದ್ದಿಕಿ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಕಾಫಿ ದಸರಾದಲ್ಲಿ ಕಾಫಿ ಉದ್ಯಮಕ್ಕೆ ಸಂಬಂಧಿಸಿದ 45ಕ್ಕೂ ಹೆಚ್ಚಿನ ಮಳಿಗೆಗಳು ಪ್ರಮುಖ ಆಕರ್ಷಣೆಯಾಗಿತ್ತು. ಇದೇ ಸಂದರ್ಭ ಕಾಫಿಯಿಂದ ತಯಾರಿಸಿದ ಖಾದ್ಯ ಪದಾರ್ಥಗಳ ಸ್ಪರ್ಧಾ ಕಾರ್ಯಕ್ರಮ ನಡೆಯಿತು. ಕಾಫಿ ದಸರಾ ಸಂಚಾಲಕ ಅನಿಲ್ ಹೆಚ್.ಟಿ. ಅವರ ಉಸ್ತುವಾರಿಯಲ್ಲಿ ನಡೆದ ಸಮಾರಂಭದಲ್ಲಿ ಬೂಕರ್ ಪ್ರಶಸ್ತಿ ವಿಜೇತೆ ದೀಪಾ ಭಾಸ್ತಿ, ಸಿಪಿಎ ಅಧ್ಯಕ್ಷ ನಂದಾ ಬೆಳ್ಯಪ್ಪ, ಮಡಿಕೇರಿ ನಗರಸಭಾ ಅಧ್ಯಕ್ಷರು ಹಾಗೂ ಮಡಿಕೇರಿ ದಸರಾ ಸಮಿತಿ ಅಧ್ಯಕ್ಷೆ ಕಲಾವತಿ, ದಸರಾ ಸಮಿತಿ ಕಾರ್ಯಾಧ್ಯಕ್ಷ ಬಿ.ಕೆ. ಅರುಣ್ ಕುಮಾರ್, ಪ್ರಧಾನ ಕಾರ್ಯದರ್ಶಿ ಅರುಣ್ ಶೆಟ್ಟಿ, ಮುಡಾ ಅಧ್ಯಕ್ಷ ಬಿ.ವೈ ರಾಜೇಶ್, ಕೊಡಗು ಮಹಿಳಾ ಕಾಫಿ ಜಾಗೃತಿ ಸಂಘದ ಅಧ್ಯಕ್ಷರಾದ ಜ್ಯೋತಿಕಾ ಉಪಸ್ಥಿತರಿದ್ದರು.

ನಾಳೆ ವಿದ್ಯುತ್ ವ್ಯತ್ಯಯ

ಮಡಿಕೇರಿ: ಶನಿವಾರಸಂತೆ ಶಾಖಾ ವ್ಯಾಪ್ತಿಯ ಗುಡುಗಳಲೆ ಮತ್ತು ಮಧ್ಯಪೇಟೆಯಲ್ಲಿ ಕೊಡಗು ವಿದ್ಯುತ್ ಜಾಲದ ಬಲವರ್ಧನೆ ಕಾಮಗಾರಿ ಕೈಗೆತ್ತಿಕೊಳ್ಳುತ್ತಿರುವುದರಿಂದ ಸೆ.26 ರಂದು ಬೆಳಗ್ಗೆ 10 ರಿಂದ ಸಂಜೆ 4 ಗಂಟೆಯವರೆಗೆ ಗುಡುಗಳಲೆ ಹಾಗೂ ಮಧ್ಯಪೇಟೆಯಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಅಂಬಾರಿ ಗಜಪಡೆಗೆ ಸಾಂಪ್ರದಾಯಿಕ ಸ್ವಾಗತ



ದಸರಾ ಆನೆಗಳನ್ನು ಶ್ರೀರಂಗನಾಥ ದೇವಾಲಯದ ಆವರಣದಲ್ಲಿ ಪೂಜೆ ಸಲ್ಲಿಸಿ ಸ್ವಾಗತಿಸಲಾಯಿತು.

ಶ್ರೀರಂಗಪಟ್ಟಣ, ಸೆ.24–ದಸರಾ ಅಂಬಾರಿ ಮೆರವಣಿಗೆಗೆ ಮೈಸೂರು ಅರಮನೆಯಿಂದ ಆಗಮಿಸಿದ ಗಜಪಡೆಗಳಿಗೆ ಶಾಸಕ ರಮೇಶಬಾಬು ಬಂಡಿಸಿದ್ದೇಗೌಡ ಪೂಜೆ ಸಲ್ಲಿಸಿ ಸಾಂಪ್ರದಾಯಿಕವಾಗಿ ಬರಮಾಡಿಕೊಂಡರು.

ಸಂಜೆ 6 ಗಂಟೆ ಸಮಯದಲ್ಲಿ ಮೂರು ಲಾರಿಗಳಲ್ಲಿ ಪಟ್ಟಣಕ್ಕೆ ಬಂದ ಮಹೇಂದ್ರ, ಲಕ್ಷ್ಮಿ ಹಾಗೂ ಕಾವೇರಿ ಆನೆಗಳನ್ನು ಶ್ರೀರಂಗ ವೇದಿಕೆ ಬಳಿ ಶಾಸಕ ರಮೇಶಬಾಬು ಬಂಡಿಸಿದ್ದೇಗೌಡ, ಜಿಲ್ಲಾಧಿಕಾರಿ ಡಾ.ಕುಮಾರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಸ್ವಾಗತಿಸಿದರು. ದೇವಾಲಯದ ಸಂಪ್ರದಾಯದಂತೆ ಪ್ರಧಾನ ಅರ್ಚಕ ವಿಜಯ ಸಾರಥಿ ಆನೆಗಳಿಗೆ ಪೂಜೆ ಸಲ್ಲಿಸಿದರು. ನಂತರ ದೇವಾಲಯದ ಪ್ರಾಂಗಣದ ಸುತ್ತಲೂ ಪ್ರದಕ್ಷಿಣೆ ನಡೆಸಿ ದೇವಾಲಯದ ಬಲ ಭಾಗದಲ್ಲಿರುವ ಕಲ್ಯಾಣಿಯಲ್ಲಿ ನೀರು ಕುಡಿದ ಆನೆಗಳು ದಣಿವು ಆರಿಸಿಕೊಂಡವು.

ಅಪರ ಜಿಲ್ಲಾಧಿಕಾರಿ ಶಿವಾನಂದ ಮೂರ್ತಿ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ತಿಮ್ಮಯ್ಯ, ಉಪವಿಭಾಗಾಧಿಕಾರಿ ಶ್ರೀನಿವಾಸ್, ತಹಶೀಲ್ದಾರ್ ಚೇತನಾ ಯಾದವ್, ಡಿವೈಎಸ್ಪಿ ಶಾಂತಮಲ್ಲಪ್ಪ, ತಾ.ಪಂ ಇಒ ವೇಣು, ಶ್ರೀರಂಗನಾಥ ಸ್ವಾಮಿ ದೇವಾಲಯದ ಇಒ ಉಮಾ, ದೇವಾಲಯ ಸಮಿತಿ ಅಧ್ಯಕ್ಷ ಸೋಮ ಶೇಖರ್, ನಿಮಿಷಾಂಬ ಸಮಿತಿ ಅಧ್ಯಕ್ಷ ದಯಾನಂದ, ಪುರಸಭೆ ಪ್ರಭಾರ ಅಧ್ಯಕ್ಷ ಎಂ.ಎಲ್ ದಿನೇಶ್, ಪುರಸಭೆ ಮುಖ್ಯಾಧಿಕಾರಿ ಸತೀಶ ಮೊದಲಾದವರು ಪಾಲ್ಗೊಂಡಿದ್ದರು.

ಜಾನಪದ ಕಲೆಗಳ ಅನಾವರಣಕ್ಕೆ ಚುಂಚನಗಿರಿ ಹೆಸರಾಗಿದೆ

ಗೃಹ ಸಚಿವ ಪರಮೇಶ್ವರ್



ಶ್ರೀಕ್ಷೇತ್ರ ಆದಿಚುಂಚನಗಿರಿಯಲ್ಲಿ ಚುಂಚಶ್ರೀ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಉದ್ಘಾಟಿಸಿದರು.

ಆದಿಚುಂಚನಗಿರಿ, ಸೆ.24–ಕನ್ನಡ ನಾಡಿನ ಜಾನಪದ ಕಲೆಗಳ ಬೃಹತ್ ಅನಾವರಣಕ್ಕೆ ಶ್ರೀ ಕ್ಷೇತ್ರ ಆದಿಚುಂಚನಗಿರಿ ಹೆಸರಾಗಿದೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಶ್ಲಾಘಿಸಿದರು.

ನಾಗಮಂಗಲ ತಾಲೂಕಿನ ಶ್ರೀಕ್ಷೇತ್ರ ಆದಿಚುಂಚನಗಿರಿಯಲ್ಲಿ 46ನೇ ರಾಜ್ಯ ಮಟ್ಟದ ಜಾನಪದ ಕಲಾಮೇಳ ಹಾಗೂ ಚುಂಚಶ್ರೀ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸರ್ಕಾರವು ಮಾಡಲಾಗದಂತ ಇಂತಹ ಸಮಾಜೋದ್ಧಾರದ ಕೆಲಸವನ್ನು ಮಾಡಲು ಶ್ರೀಮಠಕ್ಕೆ ಮಾತ್ರ ಸಾಧ್ಯ. ಮಹಾರಾಜರು ಆಚರಿಸುತ್ತಿದ್ದ ದಸರಾ ಸಂಭ್ರಮವನ್ನು ನೆರವೇರಿಸುತ್ತಿರುವುದು ಶ್ರೀಮಠದ ಹೆಗ್ಗಳಿಕೆ ಎಂದು ಶ್ಲಾಘಿಸಿದರು.

ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಮಾತನಾಡಿ, ಶ್ರೀ ಮಠವು ಆಧ್ಯಾತ್ಮವಲ್ಲದೆ ಕಲೆ ವಿಜ್ಞಾನ ತಂತ್ರಜ್ಞಾನ ಸೇರಿದಂತೆ ಸಕಲಕ್ಷೇತ್ರಗಳಲ್ಲೂ ಏಳಿಗೆಯನ್ನು ಸಾಧಿಸುತ್ತ ಮುಂಚೂಣಿಯಲ್ಲಿದೆ. ಪ್ರತಿ ವರ್ಷ 5 ಮಂದಿ ಹಿರಿಯ ಸಾಧಕರಿಗೆ ಚುಂಚಶ್ರೀ ಪ್ರಶಸ್ತಿ ಪ್ರದಾನ ಮಾಡುತ್ತಿರುವುದು ಇದಕ್ಕೆ ಸಾಕ್ಷಿ ಎಂದರು. ನಾಡಿನ ಅನೇಕ ಹೊಸ ಮಠಗಳು ಹಾಗೂ ಸಾಧುಗಳ ಬೆಳವಣಿಗೆ ಹಿಂದೆ ಬಾಲಗಂಗಾಧರನಾಥ ಸ್ವಾಮೀಜಿಯವರ ಸಂಕಲ್ಪ ಶಕ್ತಿ ಹಾಗೂ ಮಾರ್ಗದರ್ಶನ ವಿದ್ದು, ದೇಶದ ಜನತಾ ಸೇವೆಗೆ ವಿಶೇಷ ಆಯಾಮ ಹಾಗೂ ಪರಿಕಲ್ಪನೆಗಳ ಮೂಲಕ ಮಹತ್ವವಾದುದನ್ನು ನೀಡಿದ್ದಾರೆ ಎಂದು ಸ್ಮರಿಸಿ\ದರು.

ಶ್ರೀ ಕ್ಷೇತ್ರದ ಮಠಾಧೀಶ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಮಾತನಾಡಿ, ಶ್ರೀ ಬಾಲಗಂಗಾಧರನಾಥ ಮಹಾ ಸ್ವಾಮೀಜಿಯವರ ಪಟ್ಟಾಭಿಷೇಕೋತ್ಸವದ ಪ್ರಯುಕ್ತ ರಾಜ್ಯಮಟ್ಟದ ಜಾನಪದ ಕಲಾ ಮೇಳವು ಆಯೋಜಿಸಿದ್ದು, ಶ್ರೀ ಕ್ಷೇತ್ರ ಹಾಗೂ ಗುರುಗಳ ಅಪಾರ ಪ್ರೀತಿ ಭಕ್ತಿಯಿಂದ ಅಸಂಖ್ಯಾತ ಕಲಾವಿದರು ಇಲ್ಲಿ ಮೇಳೈಸಿದ್ದೀರಿ. ಯುವಕರಿಗೆ ಈ ಘನ ಕಲೆಗಳ ಮಹತ್ವದ ಅರಿವಾಗಬೇಕು, ಹಳೆ ಬೇರು ಹೊಸ ಚಿಗುರು ಕೂಡಿರಲು ಮರ ಸೊಬಗು ಎಂಬ ಡಿವಿಜಿಯವರ ಮಂಕುತಿಮ್ಮನ ಕಗ್ಗವನ್ನು ಸಮೀಚನಗೊಳಿಸಿ ಮಾತನಾಡಿದರು.

ವೈದ್ಯಕೀಯ ಸೇವಾ ನಿರತ ಶಾಲೆಗಾಗಿ ದಾನ ಮಾಡಿದ ಡಾ.ಹೆಚ್. ಎಂ.ವೆಂಕಟಪ್ಪ, ಸಮಾಜ ಸೇವೆಗಾಗಿ ಹಿರಿಯ ಸಮಾಜ ಸೇವಕ ಜಿ.ನಾರಾಯಣ, ಕೃಷಿ ಮತ್ತು ಪರಿಸರ ಸೇವೆಗಾಗಿ ಡಾ.ಎಲ್.ಹನುಮಂತಯ್ಯ, ಕ್ರೀಡಾ ಸಾಧನೆಗಾಗಿ ಡಾ.ಸಿ. ಹೊನ್ನೇಗೌಡ, ಜಾನಪದ ಕ್ಷೇತ್ರದ ಸಾರ್ಥಕ ಸೇವೆಗಾಗಿ ಜಿ.ಡಿ.ತಿಮ್ಮಯ್ಯ ಈ ಪಂಚ ದಿಗ್ಗಜರಿಗೆ ಚುಂಚಶ್ರೀ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು. ಇದೇ ಸಂದರ್ಭದಲ್ಲಿ ಗೊರವರ ಕುಣಿತ ಕಲಾವಿದ ಮಲ್ಲಯ್ಯ ಮತ್ತು ಪೂಜಾ ಕುಣಿತದ ಸಿದ್ದೇಗೌಡರನ್ನು ಹೆಚ್.ಎಲ್.ನಾಗೇಗೌಡ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ, ಮಠದ ಪ್ರಸನ್ನನಾಥ ಸ್ವಾಮೀಜಿ, ಪುರುಷೋತ್ತಮಾನಂದ ನಾಥ ಸ್ವಾಮೀಜಿ, ಶಾಖಾ ಮಠಗಳ ಸ್ವಾಮೀಜಿಗಳು, ಆದಿಚುಂಚನಗಿರಿ ವಿಶ್ವವಿದ್ಯಾಲಯದ ಉಪಕುಲಪತಿ ಡಾ.ಎಸ್.ಎನ್.ಶ್ರೀಧರ, ಜಾನಪದ ಪರಿಷತ್ತಿನ ಹಿ.ಚಿ.ಬೋರಲಿಂಗಯ್ಯ, ಶಿಕ್ಷಣ ಟ್ರಸ್ಟ್‌ನ ಆಡಳಿತಾಧಿಕಾರಿ ಡಾ.ಎ.ಟಿ. ಶಿವರಾಮು ಹಾಗೂ ಇತರರಿದ್ದರು.

ಕಾವೇರಿ ಆರತಿ ಸ್ಥಳ ಪರಿಶೀಲಿಸಿದ ಡಿಸಿಎಂ ಡಿ.ಕೆ.ಶಿವಕುಮಾರ್

ಮಂಡ್ಯ, ಸೆ.24–ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಬುಧವಾರ ಕೆಆರ್‌ಎಸ್‌ಗೆ ಭೇಟಿ ನೀಡಿ ಸಾಂಕೇತಿಕ ಕಾವೇರಿ ಆರತಿ ಬಗ್ಗೆ ಸ್ಥಳ ಪರಿಶೀಲನೆ ನಡೆಸಿದರು.

ವೇದಿಕೆ, ಕಾವೇರಿ ಆರತಿ ನಡೆಯುವ ಸ್ಥಳ ಮತ್ತು ವೀಕ್ಷಕರಿಗೆ ಆಸನ ವ್ಯವಸ್ಥೆ ಕುರಿತಂತೆ ಪರಿಶೀಲನೆ ನಡೆಸಿ ಕಾರ್ಯಕ್ರಮ ಯಾವುದೇ ಲೋಪವಿಲ್ಲದೆ ನಡೆಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಬೆಂಗಳೂರು ಒಳಚರಂಡಿ ಮಂಡಳಿ ಆಯುಕ್ತ ರಾಮ್ ಪ್ರಸಾದ್ ಮನೋಹರ್ ಅವರು ಕಾವೇರಿ ಆರತಿಯ ರೂಪುರೇಷೆ ವಿವರಿಸಿ, ಕಾವೇರಿ ಆರತಿ ಪೂರ್ವ ತಾಲೀಮು ಪ್ರದರ್ಶಿಸಿದರು. ಈ ವೇಳೆ ಶಾಸಕರಾದ ರಮೇಶ ಬಂಡಿಸಿದ್ದೇಗೌಡ, ದಿನೇಶ್ ಗೂಳಿಗೌಡ, ಪಿ.ರವಿಕುಮಾರ್, ಡಿಸಿ ಡಾ. ಕುಮಾರ, ಜಿಪಂ ಸಿಇಓ ಕೆ.ಆರ್ ನಂದಿನಿ ಮತ್ತು ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಇನ್ನಿತರೆ ಅಧಿಕಾರಿಗಳು ಉಪಸ್ಥಿತರಿದ್ದರು



ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಬುಧವಾರ ಸಾಂಕೇತಿಕ ಕಾವೇರಿ ಆರತಿ ಸ್ಥಳ ಪರಿಶೀಲನೆ ನಡೆಸಿದರು.

ಪಟ್ಟಲದಮ್ಮ ದೇವಾಲಯಗಳಲ್ಲಿ ನಗದು ಚಿನ್ನಾಭರಣ ಕಳವು

ಭಾರತೀನಗರ, ಸೆ.24– ಸಮೀಪದ ತೊರೆಬೊಮ್ಮನಹಳ್ಳಿ ಗ್ರಾಮದ ಮುಡೀನಹಳ್ಳಿ ಎಲ್ಲೆಯಲ್ಲಿರುವ ಪಟ್ಟಲದಮ್ಮನವರ ದೇವಾಲಯಗಳಲ್ಲಿ ಕಳವು ನಡೆದಿದೆ.

ಮುಡೀನಹಳ್ಳಿ ಎಲ್ಲೆಯಲ್ಲಿರುವ ಕಡೆಕೊಡಿ ಪಟ್ಟಲದಮ್ಮ ಹಾಗೂ ಬಯಲು ಪಟ್ಟಲದಮ್ಮ ದೇವಾಲಯಗಳಲ್ಲಿ ಕಳವು ನಡೆದಿದ್ದು, ಕಡೇಕೋಡಿ ಪಟ್ಟಲದಮ್ಮ ದೇವಸ್ಥಾನದ ಹುಂಡಿಯಲ್ಲಿದ್ದ 20 ಸಾವಿರ ರೂ. ನಗದು, ಚಿನ್ನದ ತಾಳಿ, ಬಯಲು ಪಟ್ಟಲದಮ್ಮ ದೇವಿಗೆ ಹಾಕಲಾಗಿದ್ದ ಮಾಂಗಲ್ಯ, ಬೆಳ್ಳಿ, 5 ಸಾವಿರ ರೂ.ನಗದು ಹಾಗೂ ಘಂಟೆಯನ್ನು ಕಳವು ಮಾಡಿ ಪರಾರಿಯಾಗಿದ್ದಾರೆ. ಭಾರತೀನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ದುಷ್ಕರ್ಮಿಗಳ ಪತ್ತೆಗೆ ಪೊಲೀಸರು ಬಲೆ ಬೀಸಿದ್ದಾರೆ.



ಕಳ್ಳತನವಾಗಿರುವ ತೊರೆಬೊಮ್ಮನಹಳ್ಳಿ ಪಟ್ಟಲದಮ್ಮನವರ ದೇವಾಲಯ

ಚಾ.ನಗರದಲ್ಲಿ 'ಬಸವ ಸಂಸ್ಕೃತಿ ಅಭಿಯಾನ'; ಲಿಂಗಾಯಿತರ ಶಕ್ತಿ ಪ್ರದರ್ಶನ

● ಜಾತಿ ಕಾಲಂನಲ್ಲಿ 'ಲಿಂಗಾಯಿತ', ಧರ್ಮದ ಕಾಲಂನಲ್ಲಿ 'ಲಿಂಗಾಯಿತ ಧರ್ಮ' ಬರೆಸಲು ಕರೆ ● ಬೃಹತ್ ಜಾಗೃತಿ ಜಾಥಾ; 20 ಸಾವಿರಕ್ಕೂ ಹೆಚ್ಚು ಜನರು ಭಾಗಿ

ಚಾಮರಾಜನಗರ, ಸೆ.24– ಜಿಲ್ಲಾ ಕೇಂದ್ರವಾದ ಚಾಮರಾಜನಗರದಲ್ಲಿ ಬುಧವಾರ ನಾಡಿನ ಲಿಂಗಾಯಿತ ಮಠಾಧಿಪತಿಗಳ ಒಕ್ಕೂಟ ಆಯೋಜಿಸಿದ್ದ ಬಸವ ಸಂಸ್ಕೃತಿ ಅಭಿಯಾನ ಅದ್ದೂರಿಯಾಗಿ ನಡೆಯಿತು.

ಅಭಿಯಾನದಲ್ಲಿ ಸುಮಾರು 20 ಸಾವಿರಕ್ಕೂ ಹೆಚ್ಚು ಲಿಂಗಾಯಿತರು ಪಾಲ್ಗೊಳ್ಳುವ ಮೂಲಕ ತಮ್ಮ ಶಕ್ತಿ ಪ್ರದರ್ಶನ ಮಾಡಿದರು.

ನಂತರ ನಗರದ ಜೆಎಸ್‌ಎಸ್ ಮಹಿಳಾ ಕಾಲೇಜು ಮೈದಾನದಲ್ಲಿ ನಡೆದ ಬೃಹತ್ ಬಹಿರಂಗ ಸಮಾವೇಶದಲ್ಲಿ ವಿವಿಧ ಮಠಾಧಿಪತಿಗಳು ಮಾತನಾಡಿ, ರಾಜ್ಯದಲ್ಲಿ ಜಾತಿ ಗಣತಿ ನಡೆಯುತ್ತಿದ್ದು, ನಿಮ್ಮ ಮನೆ ಬಾಗಿಲಿಗೆ ಸಮೀಕ್ಷೆ ನಡೆಸಲು ಬಂದಾಗ ಸಮುದಾಯದ ಜನರು ಜಾತಿ ಕಾಲಂನಲ್ಲಿ 'ಲಿಂಗಾಯಿತ', ಧರ್ಮದ ಕಾಲಂನಲ್ಲಿ 'ಲಿಂಗಾಯಿತ ಧರ್ಮ' ಎಂದು ಬರೆಸಬೇಕು ಎಂದು ಕರೆ ನೀಡಿದರು. ನಂತರ ಮುಂಡರಗಿ ತೋಂಟದಾರ್ಯ ಮಠದ ನಿಜಗುಣಾನಂದ ಸ್ವಾಮೀಜಿ ಮಾತನಾಡಿ, ಬಸವಣ್ಣನವರು ರಾಷ್ಟ್ರೀಯ ಧರ್ಮವಾದ ಲಿಂಗಾಯತ ಧರ್ಮವನ್ನು ಸ್ಥಾಪಿಸಿದ್ದು, ಇದನ್ನು ಉಳಿಸಿಕೊಳ್ಳುವ ಹೊಣೆ ಎಲ್ಲಾ ಲಿಂಗಾಯತರ ಮೇಲಿದೆ ಎಂದು ಹೇಳಿದರು.

ಅಸ್ತಿತ್ವವೇ ಇಲ್ಲದಿದ್ದ ಶೂದ್ರರಿಗಾಗಿ ಬಸವಣ್ಣ ಲಿಂಗಾಯತ ಧರ್ಮ ಸ್ಥಾಪನೆ ಮಾಡಿದರು. ನಮ್ಮನ್ನು ಮಾತನಾಡಿಸುವವರೇ ಇರಲಿಲ್ಲ. ಲಿಂಗಾಯತ ಧರ್ಮ ದನಿ ಇಲ್ಲದವರಿಗೆ ದನಿ ಕೊಟ್ಟಿತು. ಲಿಂಗಾಯತ ಮಠಾಧಿಪತಿಗಳು ದೇವಾಲಯ ಕಟ್ಟಲಿಲ್ಲ. ಶಾಲೆಗಳನ್ನು ಕಟ್ಟಿದರು. ರಾಜ್ಯದಲ್ಲಿ ಶೈಕ್ಷಣಿಕ ಕ್ರಾಂತಿ ಮಾಡಿದರು. ಒಂದು ಸರ್ಕಾರ ಮಾಡಲಾಗದ ಕೆಲಸವನ್ನು ಲಿಂಗಾಯತರು ಮಾಡಿದರು.

> "ಅಸ್ತಿತ್ವವೇ ಇಲ್ಲದಿದ್ದ ಶೂದ್ರರಿಗಾಗಿ ಬಸವಣ್ಣ ಲಿಂಗಾಯತ ಧರ್ಮ ಸ್ಥಾಪನೆ ಮಾಡಿದರು. ನಮ್ಮನ್ನು ಮಾತನಾಡಿಸುವವರೇ ಇರಲಿಲ್ಲ. ಲಿಂಗಾಯತ ಧರ್ಮ ದನಿ ಇಲ್ಲದವರಿಗೆ ದನಿ ಕೊಟ್ಟಿತು. ಲಿಂಗಾಯತ ಮಠಾಧಿಪತಿಗಳು ದೇವಾಲಯ ಕಟ್ಟಲಿಲ್ಲ. ಶಾಲೆಗಳನ್ನು ಕಟ್ಟಿದರು. ರಾಜ್ಯದಲ್ಲಿ ಶೈಕ್ಷಣಿಕ ಕ್ರಾಂತಿ ಮಾಡಿದರು. ಇಂಥ ಲಿಂಗಾಯತ ಸಮಾಜವನ್ನು ವೈದಿಕ ತಂತ್ರಗಳು ನಾಶ ಮಾಡಲು ಮುಂದಾಗಿವೆ.
> – ನಿಜಗುಣಾನಂದ ಸ್ವಾಮೀಜಿ, ಮುಂಡರಗಿ ತೋಂಟದಾರ್ಯ ಮಠ.

ಇಂಥ ಲಿಂಗಾಯತ ಸಮಾಜವನ್ನು ವೈದಿಕ ತಂತ್ರಗಳು ನಾಶ ಮಾಡಲು ಮುಂದಾಗಿವೆ ಎಂದು ಆತಂಕ ವ್ಯಕ್ತಪಡಿಸಿದರು.

ಸರ್ಕಾರದ ಗಣತಿಯಲ್ಲಿ ಲಿಂಗಾಯತ ಧರ್ಮ ಎಂದು ಬರೆಸಬೇಕು. ಇಲ್ಲದಿದ್ದರೆ ಮುಂದಿನ ಪೀಳಿಗೆಯನ್ನು ಕತ್ತಲಲ್ಲಿ ಇಟ್ಟಂತಾಗುತ್ತದೆ. ಲಿಂಗಾಯತ ಎಂದು ಬರೆಸಿದರೆ ನಿಮ್ಮ ಭವಿಷ್ಯ ಉಳಿಯುತ್ತದೆ. ಇನ್ನೊಂದು ಬರೆಸಬೇಡಿ. ನಮಗೇ ಗೊತ್ತಿಲ್ಲದಂತೆ ನಮ್ಮನ್ನು ನಾಶ ಮಾಡಲು ಹೊರಟಿದ್ದಾರೆ. ನಾವು ಎಚ್ಚರ ವಹಿಸದಿದ್ದರೆ ನಮ್ಮ ನಾಶವಾಗುತ್ತದೆ ಎಂದು ಅವರು ಹೇಳಿದರು.

ಲಿಂಗಾಯತರು ಮೂಢನಂಬಿಕೆ, ಕಂದಾಚಾರ, ಹೋಮ ಹವನಾದಿಗಳಿಂದ ಹೊರಬನ್ನಿ, ಮತೀಯವಾದಿ ರಾಜಕಾರಣಿಗಳ ಮಾತು ಕೇಳಿ ಕೈಕಟ್ಟಿಕೊಳ್ಳಬೇಡಿ. ನಾವು ಲಿಂಗಾಯತ ಎಂದು ಕೂಗಿ ಹೇಳಿ. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಲಿಂಗ, ಕರಡಿಗೆ, ವಿಭೂತಿಯನ್ನು ವಸ್ತುಪ್ರದರ್ಶನದಲ್ಲಿ ನೋಡಬೇಕಾಗುತ್ತದೆ ಎಂದು ನಿಜಗುಣಾನಂದ ಸ್ವಾಮೀಜಿ ಎಚ್ಚರಿಕೆ ನೀಡಿದರು.



ಅದ್ದೂರಿಯಾಗಿ ನಡೆದ ಬಸವ ಸಂಸ್ಕೃತಿ ಅಭಿಯಾನದಲ್ಲಿ ಪಾಲ್ಗೊಂಡಿರುವ ಮಠಾಧಿಪತಿಗಳನ್ನು ಕಾಣಬಹುದು.

ಸಮಾವೇಶದ ಸಮ್ಮುಖ ವಹಿಸಿದ್ದ ಭಾಲ್ಕಿ ಹಿರೇಮಠದ ನಾಡೋಜ ಡಾ. ಬಸವಲಿಂಗ ಪಟ್ಟದ್ದೇವರು ಮಾತನಾಡಿ, ಬಸವನಿಷ್ಠೆ, ವಚನ ನಿಷ್ಠೆ ಇಷ್ಟಲಿಂಗನಿಷ್ಠೆ ಈ ಮೂರನ್ನೂ ಗಟ್ಟಿಯಾಗಿ ಹಿಡಿದರೆ, ಯಾವ ಭಯವೂ ಇರುವುದಿಲ್ಲ. ಪ್ರತಿನಿತ್ಯ ಕನಿಷ್ಠ ಐದು ವಚನಗಳನ್ನಾದರೂ ಓದಿ. ವಚನಗಳನ್ನು ಓದಿದರೆ ಬಸವಣ್ಣನನ್ನೇ ಓದಿದಂತಾಗುತ್ತದೆ ಎಂದು ಕಿವಿಮಾತು ಹೇಳಿದರು.

ಲಿಂಗಾಯತ ಧರ್ಮ ರಾಜ ಮಾರ್ಗ. ಅದು ನ್ಯಾರೋಗೇಜ್ ಅಲ್ಲ, ಬ್ರಾಡ್ ಗೇಜ್ ಆಗಿದೆ. ಅ5 ರಂದು ಬೆಂಗಳೂರಿನಲ್ಲಿ ನಡೆಯುವ ಬಸವ ಸಂಸ್ಕೃತಿ ಅಭಿಯಾನ ಸಮಾರೋಪ ಕಾರ್ಯಕ್ರಮದಲ್ಲಿ ಸಹಸ್ರಾರು ಸಂಖ್ಯೆಯಲ್ಲಿ ಬನ್ನಿ ಎಂದರು. ಗುರು ಮಹಾಂತ ಸ್ವಾಮೀಜಿ ಮಾತನಾಡಿ, ಲಿಂಗಾಯತರಾದವರು ಜ್ಯೋತಿಷ್ಯ ಕೇಳಬಾರದು. ಜ್ಯೋತಿಷ್ಯದಿಂದ ನಮ್ಮ ಇಚ್ಛಾ ಶಕ್ತಿ ಕಳೆದುಕೊಳ್ಳುತ್ತೇವೆ. ಮಲೆ ಮಹದೇಶ್ವರ, ಸಿದ್ಧಲಿಂಗೇಶ್ವರ, ಗುರುಮಲ್ಲೇಶ್ವರರನ್ನು ನಂಬಿ. ಅವರೆಂದೂ ಜ್ಯೋತಿಷ್ಯ ಪಾಲಿಸಲು ಹೇಳಲಿಲ್ಲ. ವಿಧವಾತನವನ್ನು ಆಚರಿಸಬೇಡಿ. ಶರಣ ಸತಿ. ಲಿಂಗಪತಿ ಎಂದು ಬಸವಣ್ಣ ಹೇಳಿದ್ದಾರೆ. ವಿಧವೆಯಾದರೂ ಆಕೆ ತಾಯಿ. ಆಕೆಯನ್ನು ಶುಭ ಕಾರ್ಯಕ್ಕೆ ಆಹ್ವಾನಿಸಿ, ಆರತಿ ಮಾಡಿಸಿ ಎಂದು ಸಲಹೆ ನೀಡಿದರು.

ನಂತರ ಅಭಿಯಾನದ ಗೌರವ ಸಲಹೆಗಾರ ಹಿರಿಯ ವಕೀಲ ಕಾಳನಹುಂಡಿ ವಿರೂಪಾಕ್ಷ ಅವರು 'ಸ್ವತಂತ್ರ ಧರ್ಮ' ಎಂಬ ವಿಷಯವಾಗಿ ಮಾತನಾಡಿ, ಹಿಂದೂ ಧರ್ಮದ ವೇದ, ಉಪನಿಷತ್‌ಗಳನ್ನು ನಿರಾಕರಿಸಿ ಹುಟ್ಟಿದ ಧರ್ಮವೇ ಲಿಂಗಾಯತ ಧರ್ಮ. ಬೇರೊಂದು ಧರ್ಮದ ನಿಯಂತ್ರಣದಲ್ಲಿ ಇಲ್ಲದಿರುವುದೇ ಸ್ವತಂತ್ರ ಧರ್ಮ ಎಂದು ತಿಳಿಸಿದರು. ಹಿಂದೂ ಧರ್ಮದಲ್ಲಿ ಲಿಂಗಾಯತ ಸ್ಥಾನಮಾನವೇನು? ಇವರು ಬ್ರಾಹ್ಮಣ, ಕ್ಷತ್ರಿಯ, ವೈಶ್ಯರಾಗಲು ಸಾಧ್ಯವಿಲ್ಲ. ಶೂದ್ರರಾಗಿಯೇ ಇದ್ದಾರೆ. ಆದ್ದರಿಂದ ಹೋಮ ಹವನ ಮಾಡುವಂತಿಲ್ಲ. ಶೂದ್ರತ್ವದಿಂದ ಹೊರಬೇಕಾದರೆ ಲಿಂಗಾಯತ ಧರ್ಮ ಪ್ರತ್ಯೇಕವಾಗಲೇಬೇಕು ಎಂದು ಒತ್ತಾಯಿಸಿದರು. ರಾಜ್ಯದಲ್ಲಿ ಪ್ರಾರಂಭವಾಗಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಿ ಲಿಂಗಾಯತ ಸಮುದಾಯದವರು ಧರ್ಮ ಮತ್ತು ಜಾತಿ ಕಾಲಂನಲ್ಲಿ ಲಿಂಗಾಯತ ಎಂದು ಬರೆಸಬೇಕು. ಇದರಿಂದ ಪ್ರತ್ಯೇಕ ಧರ್ಮ ರಚನೆಗೆ ಅನುಕೂಲವಾಗಲಿದೆ. ಸರ್ಕಾರಗಳಿಂದ ಆರ್ಥಿಕ ಸೌಲಭ್ಯ ಸಿಗಲಿದೆ ಎಂದು ತಿಳಿಸಿದರು. ಲೇಖಕಿ ಮೀನಾಕ್ಷಿ ಬಾಳಿ, ಗುಂಡ್ಲುಪೇಟೆ ಶಾಸಕ ಎಚ್.ಎಂ.ಗಣೇಶ ಪ್ರಸಾದ್, ಕಾಡಾ ಅಧ್ಯಕ್ಷ ಪಿ.ಮರಿಸ್ವಾಮಿ, ಮಾಜಿ ಶಾಸಕ ಪ್ರೊ.ಕೆ.ಆರ್. ಮಲ್ಲಿಕಾರ್ಜುನಪ್ಪ ಮಾತನಾಡಿದರು.

ಪಡಗೂರು ಅಡವಿ ಮಠಾಧ್ಯಕ್ಷರಾದ ಶಿವಲಿಂಗೇಂದ್ರಸ್ವಾಮೀಜಿ ಅಧ್ಯಕ್ಷತೆ ವಹಿಸಿದ್ದರು. ಮರಿಯಾಲ ಮಠದ ಇಮ್ಮಡಿ ಮುರುಘರಾಜೇಂದ್ರಸ್ವಾಮೀಜಿ, ನಗರ ವಿರಕ್ತ ಮಠದ ಶ್ರೀಚೆನ್ನಬಸವ ಸ್ವಾಮೀಜಿ, ಮೂಡಗೂರು ವಿರಕ್ತ ಮಠದ ಇಮ್ಮಡಿ ಉದ್ದಾನ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಅಭಿಯಾನದ ಸಂಚಾಲಕರಾದ ಕೋಡಿಮೋಳೆ ರಾಜಶೇಖರ್, ಎನ್‌ರಿಚ್ ಮಹದೇವಸ್ವಾಮಿ, ಕಾಳನಹುಂಡಿ ಗುರುಸ್ವಾಮಿ, ಕೊಡಸೋಗೆ ಶಿವಬಸಪ್ಪ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಅದ್ದೂರಿ ಜಾಗೃತಿ ಜಾಥಾ

ಬಸವ ಸಂಸ್ಕೃತಿ ಅಭಿಯಾನದ ಅಂಗವಾಗಿ ನಗರದಲ್ಲಿ ಬೃಹತ್ ಜಾಗೃತಿ ಜಾಥಾ ನಡೆಯಿತು. ನಗರದ ಶ್ರೀಚಾಮರಾಜೇಶ್ವರಸ್ವಾಮಿ ದೇವಸ್ಥಾನದಿಂದ ಜೆಎಸ್‌ಎಸ್ ಕಾಲೇಜಿನ ಆವರಣದವರೆಗೂ ನಡೆದ ಜಾಥಾದಲ್ಲಿ ಸಾವಿರಾರು ಮಂದಿ ಭಾಗವಹಿಸಿದ್ದರು. ಜಾಥಾದಲ್ಲಿ ಬಸವ ಧ್ವಜ ರಾರಾಜಿಸಿತು.

ಪಾದಯಾತ್ರೆಯಲ್ಲಿ ಮಂಗಳವಾದ್ಯ, ವೀರಗಾಸೆ, ನಂದಿ ಧ್ವಜ, ಗೊರವರ ಕುಣಿತ, ಡೊಳ್ಳು ಕುಣಿತ, ತಮಟೆ, ಮಹಿಳೆಯರ ಚಂಡೆ, ಬ್ಯಾಂಡ್ ಸೆಟ್, ಗಾರುಡಿಗ ಗೊಂಬೆ ಸೇರಿದಂತೆ ನಾನಾ ಕಲಾತಂಡಗಳು ಭಾಗಿಯಾಗಿದ್ದವು. ಮೆರವಣಿಗೆ ಯುದ್ದಕ್ಕೂ ಯುವಕರು ತಮಟೆ, ಬ್ಯಾಂಡ್ ಸೆಟ್ ಸದ್ದಿಗೆ ಕುಣಿದು ಕುಪ್ಪಳಿಸಿದರು.

ಗಮನ ಸೆಳೆದ ಬಸವೇಶ್ವರ, ಅಲ್ಲಮಪ್ರಭು ಪುತ್ಥಳಿ: ಮೆರವಣಿಗೆಯಲ್ಲಿ ಬಸವೇಶ್ವರರ ಹಾಗೂ ಅಲ್ಲಮ ಪ್ರಭು ಅವರ ಪುತ್ಥಳಿ ಸೇರಿದಂತೆ ಹಲವು ಗ್ರಾಮಗಳಿಂದ ಆಟೋ, ಟಾಟಾ ಏಸ್, ಟ್ರ್ಯಾಕ್ಟರ್‌ಗಳಿಗೆ ಬಸವೇಶ್ವರರ ಭಾವಚಿತ್ರವನ್ನು ನಾನಾ ಹೂಗಳಿಂದ ಅಲಂಕರಿಸಿ ತಂದಿದದ್ದರು. ಇದೇ ವೇಳೆ ಬಸವ ಹಾಗೂ ಅಲ್ಲಮ ಪ್ರಭು ಅವರ ಟಾಬೋವನ್ನು ಪ್ರದರ್ಶನ ಮಾಡಲಾಯಿತು.

ಬೈಕ್‌ಗೆ ಕಾರು ಡಿಕ್ಕಿ : ಸವಾರ ಸಾವು

ಚಾಮರಾಜನಗರ, ಸೆ.24– ಬೈಕ್‌ಗೆ ಕಾರು ಡಿಕ್ಕಿ ಹೊಡೆದು ಪರಿಣಾಮ ಬೈಕ್ ಸವಾರ ಸಾವನ್ನಪ್ಪಿರುವ ಘಟನೆ ತಾಲೂಕಿನ ಅಮಚವಾಡಿ ಬಳಿ ನಡೆದಿದೆ.

ತಾಲೂಕಿನ ನಾಗವಳ್ಳಿ ಗ್ರಾಮದ ನಟರಾಜು(42) ಮೃತ ದುರ್ದೈವಿ.



ನಟರಾಜು

ಖಾಸಗಿ ಫೈನಾನ್ಸ್‌ನಲ್ಲಿ ನೌಕರರಾಗಿರುವ ನಟರಾಜು, ಕೆಲಸದ ನಿಮಿತ್ತ ಬೈಕ್‌ನಲ್ಲಿ ಅಮಚವಾಡಿಯಿಂದ ತೆರಳಿದ್ದಾಗ ಎದುರುಗಡೆಯಿಂದ ಬಂದ ಕಾರು ಡಿಕ್ಕಿ ಹೊಡೆದ ಪರಿಣಾಮ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಕಾರಿನ ಚಾಲಕ ಹಾಗೂ ಪ್ರಯಾಣಿಕರಿಗೂ ಸಣ್ಣಪುಟ್ಟ ಗಾಯಗಳಾಗಿದ್ದು ಸಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಸ್ಥಳಕ್ಕೆ ಗ್ರಾಮಾಂತರ ಠಾಣೆಯ ಪೊಲೀಸರು ಭೇಟಿ ನೀಡಿ ಪರಿಶೀಲನೆ ವಾಹನಗಳನ್ನು ವಶಕ್ಕೆ ಪಡೆದು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಮೃತದೇಹವನ್ನು ಸಿಮ್ಸ್ ಆಸ್ಪತ್ರೆಯ ಶವಗಾರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ವಾರಸುದಾರರಿಗೆ ಒಪ್ಪಿಸಲಾಯಿತು.

ಜಾತಿಗಣತಿ: ಪಿಐಎಲ್ ವಿಚಾರಣೆ ಹೈಕೋರ್ಟ್‌ನಲ್ಲಿ ಮುಂದುವರಿಕೆ

ಬೆಂಗಳೂರು, ಸೆ.24(ಕೆಎಂಶಿ)– ರಾಜ್ಯ ಸರ್ಕಾರದ ಜಾತಿಗಣತಿ ಪ್ರಶ್ನಿಸಿ ಸಲ್ಲಿಸಲಾದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳ ವಿಚಾರಣೆ ಹೈಕೋರ್ಟ್‌ನಲ್ಲಿ 3ನೇ ದಿನವೂ ನಡೆಯಿತು.

ಸರ್ಕಾರದ ಪರ ವಕೀಲ ಅಭಿಷೇಕ್ ಮನು ಸಿಂಘ್ವಿ ವಾದ ಮಂಡಿಸಿ, ಸಂವಿಧಾನದ 342ಎ (3) ವಿಧಿಯನ್ನು ಅರ್ಜಿದಾರರು ಪ್ರಶ್ನಿಸಿಲ್ಲ, ಹಿಂದುಳಿದ ವರ್ಗಗಳ ಸೆಕ್ಷನ್ 9, 11ಕ್ಕೆ ತಡೆ ನೀಡುವಂತೆ ಅರ್ಜಿದಾರರು ಕೋರಿಲ್ಲ, ಸರ್ವೆಯಲ್ಲಿ ಯಾವ ತಪ್ಪಿದೆ ಎಂದು ಅರ್ಜಿದಾರರು ಹೇಳಿಲ್ಲ, ಆದ್ದರಿಂದ ಸರ್ವೆಗೆ ತಡೆಯಾಜ್ಞೆ ನೀಡಬಾರದು ಎಂದು ಮನವಿ ಮಾಡಿದರು. ಮಧ್ಯಪ್ರವೇಶಿಸಿದ ಹೈಕೋರ್ಟ್ ನ್ಯಾಯಪೀಠ, ಸಮೀಕ್ಷೆ ನಡೆಸಲು ಸರ್ಕಾರಕ್ಕೆ ಅಧಿಕಾರವಿಲ್ಲವೆಂದು ಅರ್ಜಿದಾರರು ಹೇಳಿಲ್ಲ, ಆದರೆ ಸರ್ವೆ ನಡೆಸುತ್ತಿರುವ ರೀತಿಯನ್ನು ಪ್ರಶ್ನಿಸಿದ್ದಾರೆ. ಜಾತಿಗಳ ನಡುವೆ ಧರ್ಮವನ್ನು ಸೇರಿಸಿದ್ದಾರೆಂಬ ಆರೋಪವಿದೆ, ಜಾತಿಗಳ ಪಟ್ಟಿ ಪ್ರಕಟಿಸುವ ಮುನ್ನ ವಿಶ್ಲೇಷಣೆಯಿಲ್ಲ ಎಂಬ ಆರೋಪವಿದೆ ಎಂದಿತು. ಕೇಂದ್ರ ಸರ್ಕಾರದ ಪರ ಎಎಸ್‌ಜಿ ಅರವಿಂದ್ ಕಾಮತ್ ವಾದ ಮಂಡಿಸಿ, ಕೇಂದ್ರ ಸರ್ಕಾರ ಜನಗಣತಿ ಜೊತೆಗೆ ಜಾತಿ ಗಣತಿಯನ್ನೂ ನಡೆಸಲಿದೆ. ಎಲ್ಲ ರಾಜ್ಯಗಳೂ ಪ್ರತ್ಯೇಕ ಸರ್ವೆ ಮಾಡಿದರೆ ಸಮಸ್ಯೆ ಆಗಲಿದೆ. ಕೇಂದ್ರ ಮತ್ತು ರಾಜ್ಯದ ಸರ್ವೆಗಳಲ್ಲಿ ವಿರೋಧಾಭಾಸ ಇರಬಾರದೆಂದರು. ಕೇಂದ್ರ ಸರ್ಕಾರದ ಪರ ವಕೀಲರು, ಬೆಂಗಳೂರಿನ ಶ್ರೀಮಂತರಿರುವ ಮನೆಗೂ ಹೋಗಿ ಸಮೀಕ್ಷೆಯ ಅಗತ್ಯವೇನಿದೆ. ಹಿಂದುಳಿದ ವರ್ಗಗಳ ಆಯೋಗದ ಸಮೀಕ್ಷೆಗೆ ಮಿತಿಯಿದೆ. ಸರ್ವೆ ಹೆಸರಿನಲ್ಲಿ ಸರ್ಕಾರ ಜನಗಣತಿ ಮಾಡುತ್ತಿದೆ ಎಂದರು. ಆಗ ನ್ಯಾಯಪೀಠ, ಸರ್ಕಾರ 1561 ಜಾತಿಗಳನ್ನು ಹೇಗೆ ನಿಗದಿಪಡಿಸಿದೆ, ಜಾತಿ ವರ್ಗೀಕರಣಕ್ಕೆ ಅನುಸರಿಸಿದ ಕ್ರಮಗಳೇನು ಎಂಬುದಾಗಿ ಹಿಂದುಳಿದ ವರ್ಗಗಳ ಆಯೋಗವನ್ನು ಪ್ರಶ್ನಿಸಿದರು. ಆಯೋಗದ ಪರ ವಕೀಲ ಪ್ರೊ.ರವಿವರ್ಮಕುಮಾರ್ ವಾದ ಮಂಡಿಸಿ, ಈ ಹಿಂದಿನ ಸ ಆಯೋಗದ ಸರ್ವೆಯ ಅನುಕೂಲಕ್ಕಾಗಿ 1561 ಜಾತಿ ಗುರುತಿಸಲಾಗಿದೆ. ನಮ್ಮ ಜಾತಿ ಸೇರಿಸಿಲ್ಲವೆಂಬ ಕೆಲವರ ಮನವಿ ಮೇರೆಗೆ ಸೇರಿಸಲಾಗಿದೆ. ಜನರು ಹೇಳುವ ಜಾತಿಗಳನ್ನು ನಮೂದಿಸಿಕೊಳ್ಳುತ್ತೇವೆ. 1918ರಿಂದಲೂ ಸಾಮಾಜಿಕ, ಆರ್ಥಿಕ ಸರ್ವೆಗಳನ್ನು ನಡೆಸಲಾಗಿದೆ. ಬ್ರಿಟಿಷ್ ಕಾಲದಲ್ಲೂ ಮಿಲ್ಲರ್ ಸಮಿತಿ ವರದಿ ನೀಡಿದೆ ಎಂದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

MUDA Site for SALE
ಕ್ರೈಸ್ಟ್ ಪಬ್ಲಿಕ್ ಸ್ಕೂಲ್ ಪಕ್ಕ ನ್ಯಾಯಾಂಗ ಬಡಾವಣೆಯಲ್ಲಿ 30x40 North Face ಸೈಟ್
Mob: 9886048471

GOVT JOB ಇರುವ ಮಕ್ಕಳಿಲ್ಲದಂತ ವಿಚ್ಛೇದಿತೆಗೆ 2ನೇ ಸಂಬಂಧಕ್ಕೆ ವರ ಬೇಕಾಗಿದ್ದಾರೆ
Beautiful Hindu 43/5.5/ B.Sc Govt. Health Dept. Officer Salary 85,000/- ಇರುವಂತಹ ವಿಚ್ಛೇದಿತೆಗೆ ವಿಧುರ/ ವಿಚ್ಛೇದಿತ/ ನೌಕರಸ್ಥ ವ್ಯಾಪಾರಸ್ಥ/ ವಿದ್ಯಾವಂತ/ ವರ ಬೇಕಾಗಿದ್ದಾರೆ. ಯಾವುದೇ ಜಾತಿಯ ಅಭ್ಯಂತರವಿಲ್ಲ. (ಮಕ್ಕಳಿದ್ದರೂ ಪರವಾಗಿಲ್ಲ), ಮೈಸೂರು
9742458242

TV ಕೆಟ್ಟಿದೆಯೇ ?
LED, LCD TV ಗಳನ್ನು ರಿಪೇರಿ ಮಾಡಿಕೊಡಲಾಗುತ್ತದೆ. ನಮ್ಮಲ್ಲಿ Seconds LED TV ಗಳು ದೊರೆಯುತ್ತದೆ.
Teju Electronics, ಅಗ್ರಹಾರ
Mob: 9342114069

Running Veg & Non-veg Restaurant is Available
On Rent or Lease, Near Brindavan Garden Back Water Road, Interested Party Can Contact: Raghu & Santhosh Kumar
6361257567, 9880301985

WANTED
Male & Female Therapists For A New Opening Resorts & Spa At Madikeri. Food & Accommodation & PF, ESI Provided. Kindly Call & Share Resume to Santhosh Kumar
9880301985
E-mail:santhoshkishore2022@gmail.com

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

WANTED
1 or 2 BHK Flat / Apartment required for rent around Dattagalli, Vijayanagara 3rd / 4th stage, Bogadi / SBM layout, RR Nagara areas
Contact: 95910 52208

ಪ್ರವಾಸಗಳು
ಅಯೋಧ್ಯೆ, ಪ್ರಯಾಗ್‌ರಾಜ್, ಗಯಾ, ಕಾಶಿ 24-10-2025, 3-11-2025, 11-11-2025 ರಂದು 6 ದಿನಗಳು. ಸೋಮನಾಥ್, ದ್ವಾರಕ, ನಾಥದ್ವಾರ, ಉಜ್ಜಯಿನಿ, ಓಂಕಾರೇಶ್ವರ್. 10 ದಿನಗಳು. ಉದಯ್‌ಪುರ್, ಮೌಂಟ್‌ಅಬು, ಜೋಧ್‌ಪುರ್, ಜೈಸಲ್‌ಮೇರ್, ಪುಷ್ಕರ್, ಜೈಪುರ್. 10 ದಿನಗಳು ಚಂಡೀಘಡ್, ಕುಲು, ಮನಾಲಿ, ಧರ್ಮಶಾಲ ಶಕ್ತಿ ಪೀಠಗಳು, ಅಮೃತ್‌ಸರ್ 10 ದಿನಗಳು 10-11-2025, 17-11-2025, 3-12-2025ರಿಂದ ವಿವರಗಳಿಗೆ ಸಂಪರ್ಕಿಸಿ: 080- 26508926, 9980993631, ಶ್ರೀ ಚೈತನ್ಯ ಟ್ರಾವಲ್ ಚಾಮರಾಜಪೇಟೆ, ಬೆಂಗಳೂರು–18

ಶ್ರೀ ಸರ್ವೀಸ್ ಸ್ಟೇಷನ್
ಪೆಟ್ರೋಲ್ ಬಂಕ್‌ನಲ್ಲಿ ಪಂಪ್ ಕ್ಯಾಷಿಯರ್ ಹುದ್ದೆಗೆ ಪುರುಷರು / ಮಹಿಳೆಯರು ಬೇಕಾಗಿದ್ದಾರೆ ಅನುಭವಿಗಳಿಗೆ ಮೊದಲ ಆದ್ಯತೆ.
Mob: 7353592364
ಸರಸ್ವತಿಪುರಂ, ಮೈಸೂರು

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ (25 ರಿಂದ 35 ವರ್ಷ). ಹೌಸ್‌ಕೀಪಿಂಗ್ (25 ರಿಂದ 35 ವರ್ಷ) ಬೋಗಾದಿ, ರಾಜರಾಜೇಶ್ವರಿನಗರ, ಹೆಬ್ಬಾಳ್, ಮೇಟಗಳ್ಳಿ, ಕುಂಬಾರಕೊಪ್ಪಲ್, ಸಿಟಿ ಸುತ್ತಮುತ್ತ ಸಂಪರ್ಕಿಸಿ: (10 AM TO 6 PM)
Mob: 9900749104

ತಕ್ಷಣ ಬೇಕಾಗಿದ್ದಾರೆ
ಟಿ.ನರಸೀಪುರ ರಸ್ತೆ ಚಿಕ್ಕಳ್ಳಿ ಹಾಗೂ ಮೈಸೂರು ನಗರದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಸೂಪರ್‌ವೈಸರ್, ಸೆಕ್ಯೂರಿಟಿ ಗಾರ್ಡ್ಸ್ ಹಾಗೂ ಫೀಲ್ಡ್ ಆಫೀಸರ್ ಬೇಕಾಗಿದ್ದಾರೆ. ESI ಮತ್ತು PF ಸೌಲಭ್ಯವಿರುತ್ತದೆ. ಸಂಪರ್ಕಿಸಿ
8660309477

2 SITES FOR SALE
(30X50) "SURYA LAYOUT" KADAKOLA TVS FACTORY ROAD, (NEAR THALUR CIRCLE) DTCP APPROVED READY TO BUILD, 19 LACS
95388-39926

ನಿವೇಶನಗಳು ಮಾರಾಟಕ್ಕಿವೆ
MUDA APPROVED 20 X 40, 30 X 40
ಪ್ರಕೃತಿ ಬಡಾವಣೆ, ಮಂಡಕಳ್ಳಿ, ಮೈಸೂರು ಅರಮನೆಯಿಂದ 12.5 ಕಿ.ಮೀ ಜೆ.ಪಿ.ನಗರ ರಿಂಗ್ ರಸ್ತೆಯಿಂದ 3 ಕಿ.ಮೀ
99456 23596

ಶ್ರೀ ಸಂಜೀವಿನಿ ಗೋಲ್ಡ್ ಕಂಪನಿ
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ನಾವೇ ಬಿಡಿಸಿ ಉಳಿದ ಹಣವನ್ನು ತಕ್ಷಣ ನಿಮ್ಮ ಸ್ಥಳದಲ್ಲೇ ನೀಡಲಾಗುತ್ತದೆ. ಒಂದು ಗ್ರಾಂ 10,300 (24 CT)
Mob: 9108146123

ಉಚಿತ ಬ್ಯೂಟಿಷಿಯನ್ ತರಬೇತಿ
ಸಮೃದ್ಧಿ ಸೇವಾ ಸಮಿತಿ ಟ್ರಸ್ಟ್ ವತಿಯಿಂದ ಉಚಿತ ಬ್ಯೂಟೀಷಿಯನ್ ತರಬೇತಿ ಹಾಗೂ 23 ತರಹದ ತರಬೇತಿಯನ್ನು ನೀಡಲಾಗುತ್ತದೆ. 50 ದಿನದ ತರಬೇತಿಯಾಗಿರುತ್ತದೆ. ತರಬೇತಿ ಪಡೆದವರಿಗೆ ಸರ್ಟಿಫಿಕೇಟ್ ನೀಡಲಾಗುತ್ತದೆ.
ಶಾರದಾದೇವಿನಗರ
9964874954

ನಾಡಿನ ಜನತೆಗೆ ದಸರಾ ಹಬ್ಬದ ಶುಭಾಶಯಗಳು
ಮಾರುತಿ ಟ್ಯೂಬ್ ವೆಲ್ಸ್ (ರಿ)
ಕರ್ನಾಟಕ ಅಂತರ್ಜಲ ಪ್ರಾಧಿಕಾರದಲ್ಲಿ ನೋಂದಾಯಿಸಲಾಗಿದೆ ನೇರವಾಗಿ ಮಾಲೀಕರಿಂದ
ಬೋರ್‌ವೆಲ್ ಡ್ರಿಲ್ಲಿಂಗ್ @₹85/- Per Ft
ಬ್ರೋಕರ್ ಇಲ್ಲ ಕಮಿಷನ್ ಇಲ್ಲ
8184000444

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 6360485921

ಮನೆ ಭೋಗ್ಯಕ್ಕೆ ದೊರೆಯುತ್ತದೆ
3 BHK 1st Floor, Corporation ಹಿಂಭಾಗದ ರಸ್ತೆ Mysore
9148264966
9141265852

LAND FOR SALE
7 acre Land with farm house is for sale in Sunkathonnur, near Pandavpura to Mandya 30 km from Mysore Channel water is available 2 Bore Water, Price : 1.25 Lakhs per gunta
9632434689, 8496000727

ಶ್ರೀ ಗಜಾನನ ಸರ್ವೀಸ್
ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7483296927

ಸಂಪು ಮತ್ತು ಟ್ಯಾಂಕ್ ಸೋಲಾರ್ ಸರ್ವೀಸ್
Mob: 8197383645

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:
6361056646, 7676844160

ಸಂಪು ಮತ್ತು ಟ್ಯಾಂಕ್ ಸೋಲಾರ್ ಸರ್ವೀಸ್
Mob: 8660486818

Solar Water Heaters
Built for Modern Living
Jupiter Solar
Solar Water Heater SALES & SERVICE
20 ವರ್ಷಗಳ ವ್ಯಾರಂಟಿ
SUNZONE SOLAR SYSTEM
VM Double Road, Kuvempunagar, Mysuru
9845175443

ಜೀವನ ಸಂಗಾತಿ
ಒಕ್ಕಲಿಗ, ಕುರುಬ, ಲಿಂಗಾಯಿತ, ನಾಯಕ, SC ಎಲ್ಲಾ ಜಾತಿಯ ವಧು–ವರರು, ವಿಧುರ–ವಿಧವೆಯರು, ವಿಚ್ಛೇದಿತರು ಸಂಪರ್ಕಿಸಿ
7411191575

ಮೈಸೂರಿನಲ್ಲಿ ಉದ್ಯೋಗ
(Consultancy ಅಲ್ಲ) ಮೈಸೂರಿನಲ್ಲಿರುವ FMGS ಕಂಪನಿಗೆ 249 ಅಭ್ಯರ್ಥಿಗಳು ಬೇಕಾಗಿದ್ದಾರೆ. (Freshers + Experience) ವಿದ್ಯಾರ್ಹತೆ : (SSLC(Pass, PUC, ITI, Dip, Any Degree ವಯೋಮಿತಿ : 18-31 Years ತಿಂಗಳಿಗೆ : 21,500 - 28500 (ಉಚಿತ ಊಟ, + ವಸತಿ + Promotions) ಮೊದಲು ಬಂದವರಿಗೆ ಹೆಚ್ಚಿನ ಆದ್ಯತೆ. ತ್ರಿಷಾ
7349699460, 7406821955

ಬೇಕಾಗಿದ್ದಾರೆ
ಮೈಸೂರಿನಿಂದ ವಿಜಯನಗರದಲ್ಲಿರುವ ಫರ್ನಿಚರ್ ಶೋರೂಂನಲ್ಲಿ ಕೆಲಸ ಮಾಡಲು ಸೇಲ್ಸ್‌ಮ್ಯಾನ್ ಮತ್ತು ಡ್ರೈವರ್ ಬೇಕಾಗಿದ್ದಾರೆ.
ಸಂಪರ್ಕಿಸಿ
9980556642

ಬೇಕಾಗಿದ್ದಾರೆ
ಮೈಸೂರಿನಿಂದ J.P. ನಗರ ಹತ್ತಿರವಿರುವ ಶಾಲೆಗೆ ಬೆಳಿಗ್ಗೆ 7ರಿಂದ ಸಂಜೆ 7ರವರೆಗೆ ಹಗಲು ಕೆಲಸ ಮಾಡುವ 60 ವರ್ಷ ವಯಸ್ಸು ಒಳಗಿನ ಓದುಬರಹ ತಿಳಿದಿರುವ ಹೆಡ್‌ಗಾರ್ಡ್. ವೇತನ 15000/- ಹಾಗೂ ಸೆಕ್ಯೂರಿಟಿಗಾರ್ಡ್ ಪುರುಷ, ವೇತನ 13000/– ಬೇಕಾಗಿದ್ದಾರೆ. ಸಂಪರ್ಕಿಸಿ
9731976148

ಬೇಕಾಗಿದ್ದಾರೆ
ಉದ್ಯಮಿಗಳು ಮತ್ತು ರಾಜಕೀಯ ಕ್ಷೇತ್ರದಲ್ಲಿ ಇರುವವರ ಹತ್ತಿರ ಕೆಲಸ ಮಾಡಲು ಅನುಭವಿ ಚಾಲಕರು ಬೇಕಾಗಿದ್ದಾರೆ. ಮೈಸೂರು ನಗರದಲ್ಲಿ ಇರುವವರಿಗೆ ಮಾತ್ರ ಆದ್ಯತೆ. 10 ವರ್ಷಕ್ಕೂ ಹೆಚ್ಚು ಅನುಭವ ಇರುವವರಿಗೆ ಮಾತ್ರ ಆದ್ಯತೆ.
ಸಂಪರ್ಕಿಸಿ
9513556615

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನ ಕಡಕೊಳ ಏರಿಯಾದಲ್ಲಿನ TVS ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ ವಿದ್ಯಾರ್ಹತೆ : SSLC ಮೇಲ್ಪಟ್ಟು, ವಯೋಮಿತಿ : 50 ವರ್ಷದೊಳಗೆ ಸಂಬಳ : 18000+ 8 hrs, 26 Days ಊಟ, ತಿಂಡಿ, ವಸತಿ ಸೌಲಭ್ಯವಿರುತ್ತದೆ.
9620777819, 9620667819

ಇಂದೇ ಸಂಪರ್ಕಿಸಿ
ಮೈಸೂರಿನಿಂದ ಪ್ರಸಿದ್ಧ ಆಫೀಸ್, ಕಂಪನಿ ಮತ್ತು ಶೋರೂಂಗಳಿಗೆ 7th, 10th, PUC, ITI, Diploma any degree Pass/Fail ಆದ ಯುವಕ–ಯುವತಿಯರಿಗೆ Telecaller, Packing, Data Entry, Cashier, Billing, Production, Quality Maintenance ಇತ್ಯಾದಿ ಕೆಲಸಕ್ಕೆ ಬೇಕಾಗಿದ್ದಾರೆ. ಸಂಬಳ – 18000/- 49000/- (ESI + PF + OT) ಯೊಂದಿಗೆ ಸಂಪರ್ಕಿಸಿ
7411054779

S.K. CONSTRUCTION
ನಿಮ್ಮ ಕನಸಿನ ಮನೆ ಕಟ್ಟಬೇಕೆ ಚಿಂತೆ ಬೇಡ ಅತಿ ಉತ್ತಮ ಗುಣಮಟ್ಟದಲ್ಲಿ ನಿಮ್ಮ ಕೈಗೆಟುಕುವ ಬೆಲೆಯಲ್ಲಿ – Plan-3.D. Elevation ಮತ್ತು Loan ಸಹಿತ ಮಾಡಿ ಮನೆ ಕಟ್ಟಿಕೊಡುತ್ತೇವೆ
Ph: 9620528490

SITE FOR SALE
20X30 MUDA ALLOTMENT LALBAHADDHURU SHASTRI NAGAR MYSORE
9845837123, 6363185131

ಸೋಲಾರ್ ಸರ್ವೀಸ್
ಅನ್ನು ಕಂಪನಿ ಕಡೆಯಿಂದ 700 ರೂ.ಗೆ 15–9–2025ರಿಂದ 30–09–2025 ರವರೆಗೆ ಮಾಡಿಕೊಡಲಾಗುತ್ತದೆ.
Mob : 9008711654

ಜಮೀನು ಬೇಕಾಗಿದೆ
ಮೈಸೂರಿನಿಂದ 45 ಕಿ.ಮೀ ಒಳಗೆ ವ್ಯವಸಾಯಕ್ಕೆ ಕೆಂಪು ಮಣ್ಣಿನಭೂಮಿ ಊರಿಗೆ ಹತ್ತಿರ ದಾರಿ ಇರುವ ಜನರಲ್ ಜಮೀನು ಬೇಕಾಗಿದೆ. ಭೂ ಮಾಲೀಕರು ಮಾತ್ರ, ಸಂಪರ್ಕಿಸಿ
9448208299, 9731552982

ನಿವೇಶನ ಮಾರಾಟಕ್ಕಿದೆ
ಶ್ರೀನಿಧಿ ಚಂದ್ರಾನಂದನಗರ, ಹಳೆಕೆಸರೆಯಲ್ಲಿ 30x40 ಅಳತೆಯ ಒಂದು ನಿವೇಶನ ಲಭ್ಯವಿರುತ್ತದೆ. ಚದರಕ್ಕೆ 3600/– ಮಾತ್ರ ಆಸಕ್ತರು ಮಾತ್ರ ಸಂಪರ್ಕಿಸಿ
94830 13656

SITE FOR SALE
Muda Approved 30x46 West Face, Tripurnamba Railway Layout Nagarthahalli, Mysore Rs 2975/- Per Sq feet
Ph: 98807 46963

3 BHK FLAT FOR RENT
3 BHK WITH 3 BATH ROOMS (1800 Sq. ft) in PRIME LOCALITY IN VONTIKOPPAL
Call: 9480442781
BROKERS EXCUSE

SITES WANTED
@ KADAKOLA, MANDAKALLI, DADADAHALLI, BRAMIN'S L.O & MYS- SURROUNDINGS QUICK REGN
93421-25252

ಬೇಕಾಗಿದ್ದಾರೆ
CSC Computer ಅಂಗಡಿಯಲ್ಲಿ ಕೆಲಸ ಮಾಡಲು Computer Knowledge ಇರುವವರು ಬೇಕಾಗಿದ್ದಾರೆ. ಮತ್ತು 3 Wheeler Goods Auto Driver ಬೇಕಾಗಿದ್ದಾರೆ.
Contact
9686891690

ಬ್ರಾಹ್ಮಣ ವರ ಬೇಕಾಗಿದೆ
ಶೀಘ್ರ ವಿವಾಹಕ್ಕಾಗಿ ಎಲ್ಲಾ ಜಾತಿಯ ವಧು–ವರರಿಗಾಗಿ ಸಂಪರ್ಕಿಸಿ (ಬ್ರಾಹ್ಮಣ) ವಧುವಿನ ವಯಸ್ಸು, 27. SSLC ಕಲಿತಿರುವ/ ವಯಸ್ಸು, 29. PUC/ ವಯಸ್ಸು, 34, SSLC ವಯಸ್ಸು 38, PUC ಕಲಿತಿರುವ ವಧುವಿಗೆ ಸದ್ಗುಣವಂತ, ಆದಾಯವಿರುವ ವರ ಬೇಕಾಗಿದೆ.
8904834199

ಅನುಬಂಧ ಮ್ಯಾರೇಜಸ್
ಎಲ್ಲಾ ಜಾತಿಯ ವಧು ವರರು ವಿಧುರರು, ವಿಧವೆಯರು, ವಿಚ್ಛೇದಿತರು, ನೇರ ಸಂಪರ್ಕಿಸಿ
6361740552
9449408551

ತಕ್ಷಣ ಬೇಕಾಗಿದ್ದಾರೆ
ಹುಣಸೂರಿನ ಕಟ್ಟೆಮಳಲವಾಡಿ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC ಮತ್ತು ಮೇಲ್ಪಟ್ಟು, ಸಂಬಳ : 18000/- ESI ಮತ್ತು PF ಸೌಲಭ್ಯವಿರುತ್ತದೆ.
9620667819, 9880727819

Tailoring ತರಬೇತಿ
Special offer for girls and boys. Basic tailoring, Blouse Master Class, Chudidar Master Class and Embroidery works.
ತಕ್ಷಣ ಸಂಪರ್ಕಿಸಿ: ಗಾನವಿ ಇಂಟರ್‌ನ್ಯಾಷನಲ್, ಮೈಸೂರು
9620636665, 9620436665
9620476665, 6360737581

ತಕ್ಷಣ ಬೇಕಾಗಿದ್ದಾರೆ
ಹೆಬ್ಬಾಳಿನ ಸುತ್ತಮುತ್ತ ಕೆಲಸ ನಿರ್ವಹಿಸಲು ಗಾರ್ಡನರ್, ಡಿಶ್‌ವಾಷರ್, ಹೌಸ್‌ಕೀಪರ್ಸ್ ಹಾಗೂ ಟೆಲಿಕಾಲರ್ಸ್ (ಪಾರ್ಟ್ ಟೈಮ್) ಬೇಕಾಗಿದ್ದಾರೆ.
Mob: 9035567819

ಬೇಕಾಗಿದ್ದಾರೆ
ಹೌಸ್ ಕೀಪಿಂಗ್ ಕೆಲಸಕ್ಕೆ ವಿದ್ಯಾರಣ್ಯಪುರಂ ಸುತ್ತಮುತ್ತ ಇರುವವರಿಗೆ ಆದ್ಯತೆ. (ಗಂಡಸರು) ಸಂಬಳ 14,000/– ESI, PF ಸೌಲಭ್ಯವಿರುತ್ತದೆ
8495932025, 9620602039

ತಕ್ಷಣ ಬೇಕಾಗಿದ್ದಾರೆ
ರಾಜರಾಜೇಶ್ವರಿ ನಗರದಲ್ಲಿರುವ ಕಂಪನಿಯೊಂದಕ್ಕೆ ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ. ಆಕರ್ಷಕ ಸಂಬಳ ಮತ್ತು ESI+PF ಸೌಲಭ್ಯ ಇರುತ್ತದೆ.
9986501873

ಸೈಟು ಮಾರಾಟಕ್ಕಿದೆ
30x50 ಪೂರ್ವ ಉತ್ತರ ಕಾರ್ನರ್ ಕ್ರಿಸ್ಟಲ್ ಸಿಟಿ ಶ್ರೀರಾಂಪುರ ರಿಂಗ್ ರೋಡ್ ಹತ್ತಿರ ಮೈಸೂರು. ಕರೆ ಮಾಡಿ
9739703467, 9686895205

ಸೈಟು ಮಾರಾಟಕ್ಕಿದೆ
20x30 ಪೂರ್ವ ದಿಕ್ಕಿನ ಖಾಲಿ ನಿವೇಶನ ಪ್ರೊಫೆಸರ್ ರಂಗಪ್ಪ ಬಡಾವಣೆ ಶ್ರೀರಾಂಪುರ ರಿಂಗ್ ರೋಡ್ ಹತ್ತಿರ ಮೈಸೂರು. ಕರೆ ಮಾಡಿ
9739703467, 9686895205

SITE FOR SALE
775 sq.ft. in Sarkari Uttanahalli, Near Jwalamukhi Temple 150 mtrs from Ring Road, 6 km from K.R. Circle, Mysore@ 2500 / sq.ft. Negotiable.
Call: 9945373209

SITE FOR SALE
1) 40x60 East facing plot, Treasury Layout, near by Christ Pubilc School, Dattagalli. 2) 25x55 East facing plot, Vinayaka Layout, Vijayanagar 4th Stage, attached Mysore. 3) 30x40 East facing plot, Parushuram Layout, Bannur Road, nearby Delhi Public School.
Contact: Dinesh Kumar
Mob: 7022910042

ಮನೆ ಭೋಗ್ಯಕ್ಕೆ ಇದೆ
2 BHK, (30x40, (Ground Floor), ರಾಜೀವ್‌ನಗರ, ರಿಂಗ್ ರಸ್ತೆ, ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಹತ್ತಿರ, ಮೈಸೂರು.
8762101799, 8431946515

WANTED
Require Girl Candidate For Mini Supermarket Billing Counter And Maintenance in Vijayanagar 2nd Stage, Mysore, Contact
9980410535

ಬೇಕಾಗಿದ್ದಾರೆ
ಸೀರೆ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವಿರುವ ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ.
7829668666

SITE FOR SALE
East facing corner site, Jnanabharathi Layout, 30x40, Dadada Halli Highway Road, Behind Airport, MUDA khata and E-khatha done. Clear records, Direct owner.
Mob: 9342123373

ಬೇಕಾಗಿದ್ದಾರೆ
ಕಂಪ್ಯೂಟರ್ ಟೈಪಿಂಗ್ ಗೊತ್ತಿರುವ ಅಭ್ಯರ್ಥಿಗಳು ಕೆಲಸಕ್ಕೆ ಬೇಕಾಗಿದ್ದಾರೆ. ಸಂಪರ್ಕಿಸಿ: ಶೇಖರ್ 9945911118 ಅನಿಲ್ 7026996123
ARTHOR SERVICES PVT. LTD. No. 119, 2nd Floor, Panchamantra Road, Kuvempunagar, Opp. Park, above Khadim Shop

Plots for Sale
* Fully developed
* Surrounded by houses
* MUDA / Loans*
* Just 3 kms from St. Joseph School, Huyilalu Rd, Yelwala.
* Inside Paramanandasagar.
Mob: 7349113666
(BROKERS EXCUSE)

ಶಿವಣ್ಣ ಬಸಂತ್ ಕನ್ವೆನ್ಷನ್ ಹಾಲ್
ಜೆ.ಪಿ. ನಗರ, ಮೈಸೂರು
ನಿಮ್ಮ ಮದುವೆ ಮತ್ತು ವಿಶೇಷ ಸಮಾರಂಭಗಳಿಗೆ ನಮ್ಮ ಹಾಲ್ ನವೆಂಬರ್ 07, 09, 10, 13, 14 ಮತ್ತು ಡಿಸೆಂಬರ್ 03, 05, 08 ರಂದು ಲಭ್ಯವಿದೆ.
ವಿಚಾರಣೆಗಾಗಿ ಸಂಪರ್ಕಿಸಿ:
9449173893, 9481530427

Commercial Space for Rent, Preferably Office
First floor - Approx. 2000 Sq.ft Second Floor - Approx. 2000 Sq. ft. Address: Police Bhooth Circle, Second Stage, Opp. SBI, J.P. Nagar, Mysuru - 570031
9845468679, 9353954939

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8618373596

ನಮ್ಮಲ್ಲಿ ಬಾದಾಮಿ, ಗೋಡಂಬಿ, ಪಿಸ್ತಾ, ಅಂಜೂರ, ಖರ್ಜೂರ, ದ್ರಾಕ್ಷಿ, ಡ್ರೈಫ್ರೂಟ್ಸ್ ಗಿಫ್ಟ್ ಬಾಕ್ಸ್ ದೊರೆಯುತ್ತದೆ.
(5 ಕಿ.ಮೀ ವರೆಗೂ ಉಚಿತ ಡೆಲಿವರಿ)
ಸಂಪರ್ಕಿಸಿ: ರಾಜ್‌ಗುರು ಡ್ರೈಫ್ರೂಟ್ಸ್ ನಾರಾಯಣಶಾಸ್ತ್ರಿ ರಸ್ತೆ, ಮೈಸೂರು
9845460211, 7022293342

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

PRAKRUTHI PROPERTIES
FOR SALE
1. 40x60 Site @ Sharada layout, JP Nagar
2. 25x35 G+1 House @ Srirampura
3. 30x50 Site Near Tvs factory near
Residential & Commercial Plots in & around Mysore
20x30 New 2BHK House, As Per your Plan With Interiors @ Just 42 Lakh in Bogadi
Apartments @ Ramakrishna Nagar 30x40@ 22 lakhs Near RT Nagar BSNL Lyt Sites Also Avl.
95386 90359, 90359 90359

ತಕ್ಷಣ ಬೇಕಾಗಿದ್ದಾರೆ
1) ಸೆಕ್ಯೂರಿಟಿ ಗಾರ್ಡ್– (ವಿಜಯನಗರ, ಸಿಟಿ, ಎಲೆತೋಟ, ಚಾಮುಂಡಿಪುರಂ, ಬೆಳಗೊಳ, ಹೆಬ್ಬಾಳ್, ಕೂರ್ಗಳ್ಳಿ, ಹಿನಕಲ್)
2) ಹೌಸ್‌ಕೀಪಿಂಗ್ – ಹುಡುಗರು/ಮಹಿಳೆಯರು (ವಿಜಯನಗರ, ಹಿನಕಲ್, ಜಯಲಕ್ಷ್ಮಿಪುರಂ, ಸಿಟಿ, ಹೆಬ್ಬಾಳ್)
9739166772, 9731663856

ಬೇಕಾಗಿದ್ದಾರೆ
ಹೋಟೆಲ್‌ಗೆ ಸಪ್ಲೈಯರ್ & ಕ್ಲೀನಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ. ಸ್ಥಳ : ಹೆಬ್ಬಾಳ್
9611472721
9901814929

ಕಮರ್ಷಿಯಲ್ ಮಳಿಗೆ ಮತ್ತು ಸೈಟ್ ಮಾರಾಟಕ್ಕಿದೆ
ಕಬಿಲ್ ಗ್ರೀನ್ ಹುಡ್ ಕಮರ್ಷಿಯಲ್ ಕಾರ್ನರ್ ಮಳಿಗೆ ಮಾರಾಟಕ್ಕಿದೆ ಮತ್ತು ಉತ್ತರ ಪೂರ್ವ ಕಾರ್ನರ್ ಕಮರ್ಷಿಯಲ್ ಸೈಟ್ ಮಾರಾಟಕ್ಕಿದೆ. ಸಪ್ತಮಾತೃಕ ಹಂತ–1 ಮಹಾವೀರ ನಗರ, ಮೈಸೂರು, ಸಂಪರ್ಕಿಸಿ
9448601655

ಬೇಕಾಗಿದ್ದಾರೆ
ನೋಟರಿ ಆಫೀಸ್ ಟೆಂಟ್ ಸರ್ಕಲ್ ಕ್ಯಾತಮಾರನಹಳ್ಳಿ, ಮೈಸೂರು, ಕನ್ನಡ ಮತ್ತು ಇಂಗ್ಲಿಷ್ ಆನ್‌ಲೈನ್ ಕೆಲಸ ಮಾಡುವವರು ಬೇಕಾಗಿದ್ದಾರೆ.
8971817375

ಸೈಟುಗಳು ಮಾರಾಟಕ್ಕಿದೆ
20x30 ಶಾರದಾ ದೇವಿ ನಗರ 46 ಲಕ್ಷ, 30x40 ಬೋಗಾದಿ ರೋಡ್ 38 ಲಕ್ಷ, 30x50-40x60, ಶ್ರೀರಾಂಪುರ ರಿಂಗ್ ರಸ್ತೆ ಹತ್ತಿರ, 30x40-60x40 ಜೆಪಿ ನಗರ ರಿಂಗ್ ರಸ್ತೆ ಹತ್ತಿರ
9341624462

ಬೇಕಾಗಿದ್ದಾರೆ
ಹಾಸ್ಪಿಟಲ್ ಕ್ಯಾಂಟೀನ್‌ಗೆ ಸೌತ್ ಇಂಡಿಯನ್ ಅಸಿಸ್ಟೆಂಟ್ ಕುಕ್– 2 ಜನ ಪೇಷಂಟ್ ಸರ್ವಿಸ್ – 2 ಜನ
ಸಂಪರ್ಕಿಸಿ
9113937447
ರಾಮಕೃಷ್ಣನಗರ, ಮೈಸೂರು

ಬೇಕಾಗಿದ್ದಾರೆ
ಮದ್ದೂರು–ಗಜ್ಜಲಗೆರೆ ಇಂಡಸ್ಟ್ರಿಯಲ್‌ನ ಹೆಸರಾಂತ ಕಂಪನಿಗೆ S/Sup, S/Guard L/Guard ಬೇಕಾಗಿದ್ದಾರೆ. PF, ESI ಸೌಲಭ್ಯವಿದ್ದು, ತಿಂಗಳಿಗೆ 26 ದಿನಕ್ಕೆ 8 ಗಂಟೆ ಪಾಳಿಗೆ 18,000/– ಹಾಗೂ ವಸತಿ ಸೌಲಭ್ಯವಿರುತ್ತದೆ. ವಿದ್ಯಾರ್ಹತೆ : SSLC, PUC ವಯಸ್ಸು : 25 ರಿಂದ 40
PH: 9731414467

ಮೈಸೂರು ಮಿತ್ರ
46
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವು ಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ ರೂ. 630 ಮಾತ್ರ

ರಂಗಸಮುದ್ರ ಪಿಎಸಿಎಸ್ ಸ್ಥಾಪನೆಯಾಗಿ ಮುಂದಿನ ವರ್ಷಕ್ಕೆ 50 ವರ್ಷ ಹಿನ್ನೆಲೆ

ಜನತಾ ಬಜಾರ್ ಅನುದಾನಕ್ಕಾಗಿ ಸಿಎಂಗೆ ಮನವಿ ಸಲ್ಲಿಸಲು ತೀರ್ಮಾನ

ತಿ.ನರಸೀಪುರ, ಸೆ.24– ತಾಲೂಕಿನ ರಂಗಸಮುದ್ರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಸ್ಥಾಪನೆಯಾಗಿ 50 ವರ್ಷ ತುಂಬುತ್ತಿರುವ ಹಿನ್ನೆಲೆಯಲ್ಲಿ ಸಿಎಂ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಜನತಾ ಬಜಾರ್ ನಿರ್ಮಾಣಕ್ಕೆ ಅನುದಾನ ನೀಡುವಂತೆ ಮನವಿ ಸಲ್ಲಿಸಲು ಸರ್ವ ಸದಸ್ಯರ ಸಭೆಯಲ್ಲಿ ತೀರ್ಮಾನಿಸಲಾಯಿತು.

ರಂಗಸಮುದ್ರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆವರಣದಲ್ಲಿ ಬುಧವಾರ ನಡೆದ 2024–25ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಮಾತನಾಡಿದ ಸಂಘದ ನಿರ್ದೇಶಕ ಟಿ.ವಾಸುದೇವ್, ಮುಂದಿನ ವರ್ಷಕ್ಕೆ ಸಂಘ 50ನೇ ವಸಂತಕ್ಕೆ ಕಾಲಿಡಲಿದ್ದು, ಸುವರ್ಣ ಮಹೋತ್ಸವ ಆಚರಿಸಿಕೊಳ್ಳಲಿದೆ. ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಕ್ಷೇತ್ರದ ಶಾಸಕರಾಗಿರುವುದರಿಂದ ಸಹಕಾರ ಸಂಘದ ಆವರಣದಲ್ಲಿ ಜನತಾ ಬಜಾರ್ ನಿರ್ಮಿಸಲು 1 ಕೋಟಿ ರೂ. ಅನುದಾನ ನೀಡುವಂತೆ ಸಿಎಂಗೆ ಮನವಿ ಸಲ್ಲಿಸಲು ನಿಯೋಗ ಹೋಗುವ ನಿರ್ಧಾರಕ್ಕೆ ಸಭೆ ಸಮ್ಮತಿ ಕೇಳಿದ ವೇಳೆ ಸರ್ವ ಸದಸ್ಯರು ಒಪ್ಪಿಗೆ ಸೂಚಿಸಿದರು.

ಸಹಕಾರ ಸಂಘ ಸ್ಥಾಪನೆಯಾಗಿ 50 ವರ್ಷದ ಸವಿ ನೆನಪಿಗಾಗಿ ಸಹಕಾರ ಸಂಘದ ಆವರಣದಲ್ಲಿ ಜನತಾ ಬಜಾರ್ ನಿರ್ಮಿಸೋಣ. ಇದಕ್ಕೆ ಮುಖ್ಯ ಮಂತ್ರಿ, ಕೋ–ಆಪರೇಟಿವ್ ಸೊಸೈಟಿ ಸಚಿವರು, ಮಾರ್ಕೆಟಿಂಗ್ ಫೆಡರೇಷನ್, ಎಂಸಿಡಿಸಿಸಿ ಬ್ಯಾಂಕ್ ಹಾಗೂ ಅಪೆಕ್ಸ್ ಬ್ಯಾಂಕ್ ಮುಖ್ಯಸ್ಥರನ್ನು ಭೇಟಿ ಮಾಡಿ ಅನುದಾನಕ್ಕೆ ಮನವಿ ಸಲ್ಲಿಸಿದರೆ ಅನುದಾನ ನೀಡಲು ಅವಕಾಶಗಳಿವೆ. ಜೊತೆಗೆ ದಾನಿಗಳ ಮೂಲಕವೂ ದೇಣಿಗೆ ಸಂಗ್ರಹಿಸಿ ಸಹಕಾರ ಸಂಘದಲ್ಲಿರುವ ಹಣ ಬಳಸಿಕೊಂಡು ಜನತಾ ಬಜಾರ್ ನಿರ್ಮಿಸೋಣ. ಆ ಮೂಲಕ ತಾಲೂಕಿನಲ್ಲೇ ಮಾದರಿ ಸಹಕಾರ ಸಂಘ ಮಾಡಲು ವಾಸುದೇವ್ ಅವರು ಸರ್ವ ಸದಸ್ಯರು, ಆಡಳಿತ ಮಂಡಳಿ ನಿರ್ದೇಶಕರ ಸಹಕಾರ ಕೋರಿದರು.

ಸಾಲ ಮನ್ನಾಕ್ಕೆ ಕಾಯಬೇಡಿ: ಸಾಲ ಪಡೆದ ರೈತರು ಸರ್ಕಾರ ಸಾಲ ಮನ್ನಾ ಮಾಡುತ್ತದೆ ಎಂಬ ಆಶಯದೊಂದಿಗೆ ಸುಸ್ತಿದಾರರಾಗದೇ, ಸಕಾಲಕ್ಕೆ ಮರು ಪಾವತಿಸುವಂತೆ ಮನವಿ ಮಾಡಿದ ವಾಸುದೇವ್ ಸಂಘದಲ್ಲಿ ಲಕ್ಷಾಂತರ ರೂ. ಅವ್ಯವಹಾರ ನಡೆಸಿರುವ ಮೇಲ್ವಿಚಾರಕರಿಂದ ಹಣ ವಸೂಲಿಗೆ ಕ್ರಮ ಕೈಗೊಳ್ಳಲಾಗುತ್ತದೆ ಎಂದರು.

ಸಂಘದ ಅಧ್ಯಕ್ಷ ಆರ್.ಕಿರಣ್ ಮಾತನಾಡಿ, ಸದಸ್ಯರ ಬೇಡಿಕೆ ಹಿನ್ನೆಲೆಯಲ್ಲಿ ರಸಗೊಬ್ಬರ ಹಾಗೂ ಬಿತ್ತನೆ ಬೀಜ ವಿತರಣೆಗೆ ಕ್ರಮ ಕೈಗೊಳ್ಳಲಾಗುತ್ತದೆ. ರಾಧಾಕೃಷ್ಣ ಎಂಬುವರು ಸಹಕಾರ ಸಂಘದಲ್ಲಿ 12 ಲಕ್ಷ ರೂ. ದುರುಪಯೋಗಪಡಿಸಿಕೊಂಡ ಹಿನ್ನೆಲೆಯಲ್ಲಿ ಕೋರ್ಟ್ ಆದೇಶದಂತೆ ಅವರ ಆಸ್ತಿಯನ್ನು ಅಟ್ಯಾಚ್‌ಮೆಂಟ್ ಮಾಡಿಸಲಾಗುತ್ತದೆ. ಈ ಬಗ್ಗೆ ಯಾವುದೇ ಸಂದೇಹ ಬೇಡ ಎಂದರು.

ಸಂಘದ ಸಿಇಓ ಬಿ.ಪುಟ್ಟಸ್ವಾಮಿ ವಾರ್ಷಿಕ ವರದಿ ಮಂಡಿಸಿದರು. ಉಪಾಧ್ಯಕ್ಷೆ ರೇಖಾ, ನಿರ್ದೇಶಕರಾದ ಸಿದ್ದರಾಜು, ಮಂಜು, ಗೋಪಾಲ್, ಜಿ.ರೇವಣ್ಣ, ಜವರಯ್ಯ, ಕಲ್ಯಾಣಮ್ಮ, ಗುಮಾಸ್ತೆ ಬಿ.ದೇವಿಕ, ಶರತ್ ಸೇರಿದಂತೆ ಷೇರುದಾರರು, ಸದಸ್ಯರು ಹಾಜರಿದ್ದರು.


ವಾರ್ಷಿಕ ಸಭೆಯಲ್ಲಿ ಸಂಘದ ನಿರ್ದೇಶಕ ಟಿ.ವಾಸುದೇವ್ ಮಾತನಾಡಿದರು.

ಸಾಲಬಾಧೆ: ರೈತ ಆತ್ಮಹತ್ಯೆ



ಹೆಚ್.ಡಿ.ಕೋಟೆ, ಸೆ.24– ಸಾಲಬಾಧೆ ತಾಳಲಾರದೇ ರೈತರೊಬ್ಬರು ಕಬಿನಿ ಹಿನ್ನೀರಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲೂಕಿನ ಬೀರಂಬಳ್ಳಿ ಗ್ರಾಮದ ಬಳಿ ಮಂಗಳವಾರ ನಡೆದಿದೆ.

ತಾಲೂಕಿನ ಮಲಾರ ಕಾಲೋನಿ ನಿವಾಸಿ, ರೈತ ಚಿಕ್ಕಯ್ಯ(65) ಆತ್ಮಹತ್ಯೆ ಮಾಡಿಕೊಂಡವರು. ಈತ ತನ್ನ 3 ಎಕರೆ ಜಮೀನಿನಲ್ಲಿ ಬಾಳೆ, ಶುಂಠಿ, ರೇಷ್ಮೆ ಬೆಳೆಯಲು 5 ಲಕ್ಷಕ್ಕೂ ಹೆಚ್ಚು ಕೈ ಸಾಲ ಮಾಡಿದ್ದರು. ಆದರೆ ಬೆಳೆ ಸರಿಯಾಗಿ ಬಾರದ ಹಿನ್ನಲೆಯಲ್ಲಿ ಸಾಕಷ್ಟು ನಷ್ಟ ಅನುಭವಿಸಿದ್ದರು. ಮಾಡಿದ ಸಾಲ ತೀರಿಸಲು ಸಾಧ್ಯವಾಗದ ಕಾರಣ ಮನನೊಂದಿದ್ದ ಚಿಕ್ಕಯ್ಯ ಮಂಗಳವಾರ ಬೀರಂಬಳ್ಳಿ ಗ್ರಾಮದ ಬಳಿ ಕಬಿನಿ ಹಿನ್ನೀರಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಬುಧವಾರ ಹಿನ್ನೀರಿನಲ್ಲಿ ಚಿಕ್ಕಯ್ಯ ಅವರ ಶವ ತೇಲುತ್ತಿರುವುದನ್ನು ಕಂಡ ಗ್ರಾಮಸ್ಥರು ದಡದ ಬಳಿ ಹೋಗಿ ನೋಡಿದಾಗ ಮೊಬೈಲ್, ಆಧಾರ್ ಕಾರ್ಡ್ ಇದ್ದಿದ್ದನ್ನು ಗಮನಿಸಿ ಮಲಾರ ಕಾಲೋನಿ ಗ್ರಾಮಸ್ಥರಿಗೆ ಕರೆ ಮಾಡಿ ವಿಷಯ ಮುಟ್ಟಿಸಿದ್ದಾರೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅಂತರಸಂತೆ ಠಾಣೆ ಪೊಲೀಸರು ಪರಿಶೀಲನೆ ನಡೆಸಿ, ಶವವನ್ನು ಹೆಚ್.ಡಿ.ಕೋಟೆ ಸಾರ್ವಜನಿಕ ಆಸ್ಪತ್ರೆ ಶವಾಗಾರಕ್ಕೆ ರವಾನಿಸಿ, ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ಹಸ್ತಾಂತರಿಸಿದರು. ಈ ಸಂಬಂಧ ಅಂತರಸಂತೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೈಕ್‌ಗೆ ಲಾರಿ ಡಿಕ್ಕಿ: ಸವಾರ ಸಾವು



ತಿ.ನರಸೀಪುರ, ಸೆ.24– ಬೈಕ್‌ಗೆ ಲಾರಿ ಡಿಕ್ಕಿ ಹೊಡೆದ ಪರಿಣಾಮ ಸವಾರ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಪಟ್ಟಣದ ತಲಕಾಡು ಮುಖ್ಯ ರಸ್ತೆಯ ಅಗ್ನಿಶಾಮಕ ಠಾಣೆ ಬಳಿ ಬುಧವಾರ ಸಂಜೆ ನಡೆದಿದೆ.

ತಾಲೂಕಿನ ಎಂ.ಕೆಬ್ಬೇಹುಂಡಿ ಗ್ರಾಮದ ನಿವಾಸಿ ಶಿವಪ್ಪ ಅವರ ಪುತ್ರ ಮಹದೇವಪ್ರಸಾದ್(50) ಸಾವನ್ನಪ್ಪಿದವರು. ಈತ ತಾಲೂಕಿನ ಹೊಸ ಮಾಲಂಗಿಯ ಪಶುಪಾಲನಾ ಇಲಾಖೆ ಕಚೇರಿಯಲ್ಲಿ ಡಿ.ಗ್ರೂಪ್ ನೌಕರನಾಗಿ ಕೆಲಸ ಮಾಡುತ್ತಿದ್ದು, ಬುಧವಾರ ಎಂದಿನಂತೆ ಕರ್ತವ್ಯ ನಿರ್ವಹಿಸಿ ಸಂಜೆ ಬೈಕ್‌ನಲ್ಲಿ ತಿ.ನರಸೀಪುರ ಕಡೆಗೆ ಬರುತ್ತಿದ್ದ ವೇಳೆ ಅಗ್ನಿಶಾಮಕ ಠಾಣೆ ಬಳಿ ವೇಗವಾಗಿ ಬಂದ ಲಾರಿ ಡಿಕ್ಕಿ ಹೊಡೆದಿದೆ. ಪರಿಣಾಮ ತೀವ್ರ ಗಾಯಗೊಂಡ ಮಹದೇವಪ್ರಸಾದ್ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ತಿ.ನರಸೀಪುರ ಠಾಣೆ ಪೊಲೀಸರು ಪರಿಶೀಲನೆ ನಡೆಸಿ ಶವವನ್ನು ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ರವಾನಿಸಿದರು. ಈ ಸಂಬಂಧ ತಿ.ನರಸೀಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗೊಂದಲ ನಿವಾರಿಸಿ ಸಾಗುವಳಿ ವಿತರಣೆ

ಸರಗೂರು, ಸೆ.24– ಗೊಂದಲ ನಿವಾರಿಸಿ ಸಾಗುವಳಿ ವಿತರಿಸಲಾಗುವುದು ಎಂದು ಶಾಸಕ ಅನಿಲ್ ತಿಳಿಸಿದರು.

ತಾಲೂಕಿನ ನಂಜನಾಥಪುರದಲ್ಲಿ ಎನ್.ಬೇಗೂರು–ಬಿದರಹಳ್ಳಿ ರಸ್ತೆ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು, ತಾಲೂಕಿನಲ್ಲಿ ಸಾಗುವಳಿ ವಿತರಣೆಯಲ್ಲಿನ ಗೊಂದಲ ನಿವಾರಿಸಿ ಸಾಗುವಳಿ ವಿತರಿಸಲಾಗುವುದು. ಅಲ್ಲದೇ 192 ನಿವೇಶನಗಳಿಗೆ ಶೀಘ್ರ ಹಕ್ಕು ಪತ್ರ ಕೊಡಿಸಲಾಗುವುದು. ಗುತ್ತಿಗೆದಾರರು ಕಾಮಗಾರಿಯಲ್ಲಿ ಗುಣಮಟ್ಟ ಕಾಯ್ದುಕೊಳ್ಳಬೇಕು. ಅಲ್ಲದೆ ಗ್ರಾಮಕ್ಕೆ ಮೂಲ ಸೌಕರ್ಯ ಕಲ್ಪಿಸಲಾಗುವುದು ಎಂದರು.

ಬಿದರಹಳ್ಳಿ ಗ್ರಾಪಂ ಮಾಜಿ ಅಧ್ಯಕ್ಷ ಕೆ.ಮಣಿ ಮಾತನಾಡಿದರು. ಮೈಮುಲ್ ನಿರ್ದೇಶಕ ಕೆ.ಈರೇಗೌಡ, ಕುರುಬ ಸಮಾಜದ ಜಿಲ್ಲಾಧ್ಯಕ್ಷ ಶಿವಪ್ಪ, ಗಣೇಶಾಚಾರ್, ಗ್ರಾಪಂ ಸದಸ್ಯ ವೆಂಕಟಸ್ವಾಮಿ, ಮಾಜಿ ಅಧ್ಯಕ್ಷ ಬಿ.ಶಿವಣ್ಣ, ಯೂತ್ ಕಾಂಗ್ರೆಸ್ ಅಧ್ಯಕ್ಷರಾದ ಶಿವರಾಜು, ನವೀನ್, ಪ್ರಧಾನ ಕಾರ್ಯದರ್ಶಿ ಬಸವರಾಜು, ತಾಪಂ ಮಾಜಿ ಸದಸ್ಯ ರಾಜು, ಗ್ರಾಪಂ ಮಾಜಿ ಸದಸ್ಯ ನಾಗರಾಜು, ಮುಖಂಡರಾದ ಮಣಿ, ಶೇಖರ್, ರಾಜಣ್ಣ, ರವಿ, ಅಂಕ ನಾಯಕ, ಬಸವರಾಜು, ಪಪಂ ಸದಸ್ಯ ಶ್ರೀನಿವಾಸ್, ಚೆಲುವಕೃಷ್ಣ, ಗ್ರಾಪಂ ಸದಸ್ಯ ಸೂರ್ಯ, ಕಾಳಸ್ವಾಮಿ, ಹೇಮಂತ್ ಕುಮಾರ್, ಅಬ್ದುಲ್ ವಾಜೀದ್, ಲೋಕೋಪಯೋಗಿ ಸಹಾಯಕ ಕಾರ್ಯಪಾಲಕ ರಮೇಶ್, ಮಲ್ಲೇಶ್, ಪಿಡಿಓ ನರಸಿಂಹ ಮೂರ್ತಿ, ನಿಂಗನಾಯಕ, ಪುಟ್ಟನಾಯಕ, ಗುರುಸ್ವಾಮಿ, ಶಶಿಪಾಟೀಲ್, ಮಹಮ್ಮದ್ ಹಿಮ್ರಾನ್, ವಿನಯ್ ಕುಮಾರ್ ಇತರರಿದ್ದರು.


ಕಾರ್ಯಕ್ರಮದಲ್ಲಿ ಶಾಸಕ ಅನಿಲ್ ಮಾತನಾಡಿದರು.

ನಗರ ಸ್ವಚ್ಛಗೊಳಿಸುವ ಪೌರಕಾರ್ಮಿಕರು ನಿಜವಾದ ಹೀರೋಗಳು

ಪೌರ ಕಾರ್ಮಿಕರ ದಿನಾಚರಣೆಯಲ್ಲಿ ಶಾಸಕ ದರ್ಶನ್


ಕಾರ್ಯಕ್ರಮದಲ್ಲಿ ಪೌರ ಕಾರ್ಮಿಕರನ್ನು ಸನ್ಮಾನಿಸಲಾಯಿತು.

ನಂಜನಗೂಡು, ಸೆ.24– ನಿತ್ಯ ನಗರವನ್ನು ಸ್ವಚ್ಛಗೊಳಿಸುವ ಮೂಲಕ ಉತ್ತಮ ಪರಿಸರ ನಿರ್ಮಾಣ ಮಾಡುವ ಪೌರ ಕಾರ್ಮಿಕರು ಸಮಾಜದ ನಿಜವಾದ ಹೀರೋಗಳು. ಅವರ ಕಾಯಕ ವನ್ನು ಪ್ರತಿಯೊಬ್ಬರೂ ಸ್ಮರಿಸಬೇಕು ಎಂದು ಶಾಸಕ ದರ್ಶನ್ ತಿಳಿಸಿದರು.

ನಗರದ ನಂದಿ ಕನ್ವೆನ್ಷನ್ ಕಲ್ಯಾಣ ಮಂಟಪದಲ್ಲಿ ನಗರಸಭೆ ವತಿಯಿಂದ ಆಯೋಜಿಸಿದ್ದ ಪೌರ ಕಾರ್ಮಿಕರ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ಸ್ವಚ್ಛ ಪರಿಸರ ಆರೋಗ್ಯಕರ ಪರಿಸರ ವಾಗಿದೆ. ಮಳೆ, ಚಳಿ, ಬಿಸಿಲನ್ನು ಲೆಕ್ಕಿಸದೆ ಪೌರಕಾರ್ಮಿಕರು ನಿತ್ಯ ನಗರದ ಸ್ವಚ್ಛತೆ ಕೈಗೊಳ್ಳುವ ಮೂಲಕ ಆರೋಗ್ಯಕರ ಪರಿಸರ ನಿರ್ಮಾಣಕ್ಕೆ ನಿರಂತರವಾಗಿ ಪ್ರಯತ್ನ ಮಾಡುತ್ತಿದ್ದಾರೆ ಎಂದರು.

ಉತ್ತಮ ಪರಿಸರ ನಿರ್ಮಾಣ ಪ್ರತಿಯೊಬ್ಬ ನಾಗರಿಕನ ದೊಡ್ಡ ಜವಾಬ್ದಾರಿಯಾಗಿದ್ದು, ಮನೆಯಿಂದಲೇ ತ್ಯಾಜ್ಯಗಳನ್ನು ವಿಂಗಡಿಸಿ ಸ್ವಚ್ಛತೆಗೆ ಸಹಕಾರ ನೀಡಬೇಕು. ಹಸಿ ಮತ್ತು ಒಣ ಕಸಗಳನ್ನು ವಿಂಗಡಿಸಿ ವಿಲೇವಾರಿ ಮಾಡುವ ಮೂಲಕ ಪ್ರತಿಯೊಬ್ಬರೂ ತಮ್ಮ ಕರ್ತವ್ಯ ನಿರ್ವಹಿಸಬೇಕು. ಆದರೆ ಪ್ರತಿಯೊಬ್ಬರೂ ಈ ಕರ್ತವ್ಯ ಮರೆಯುತ್ತಿರುವ ಭಾವನೆ ನಮ್ಮೆಲ್ಲರನ್ನು ಕಾಡುತ್ತಿದೆ. ಬೆಂಗಳೂರಿ ನಂತಹ ನಗರದಲ್ಲಿ ಹಸಿ ಮತ್ತು ಒಣ ಕಸ ಬೇರ್ಪಡಿಸದೆ ಕೊಟ್ಟಲ್ಲಿ ದಂಡ ವಿಧಿಸಲಾಗುತ್ತಿದೆ. ಜೊತೆಗೆ ದೊಡ್ಡ ನಗರಗಳಲ್ಲಿ ಕಸ ವಿಲೇವಾರಿ ಒಂದು ದೊಡ್ಡ ಸಮಸ್ಯೆಯಾಗಿದೆ. ಆದ್ದರಿಂದ ನಮ್ಮ ನಂಜನಗೂಡು ನಗರವನ್ನು ಸ್ವಚ್ಛವಾಗಿಡಲು ಪ್ರತಿಯೊಬ್ಬರು ಕೈಜೋಡಿಸಬೇಕು ಎಂದು ಕರೆ ನೀಡಿದರು.

ನಗರಸಭಾ ಆಯುಕ್ತ ವಿಜಯ್ ಮಾತನಾಡಿ, ಸೇವಾ ಭದ್ರತೆ ಇಲ್ಲದೆ ಕಾರ್ಯ ನಿರ್ವಹಿಸುತ್ತಿದ್ದ ಪೌರ ಕಾರ್ಮಿಕರ ಹೋರಾಟಕ್ಕೆ ಮಣಿದ ಸರ್ಕಾರಗಳು 2017ರ ಆದೇಶದ ನಂತರ ಹಂತ ಹಂತವಾಗಿ ಸೌಲಭ್ಯಗಳನ್ನು ದೊರಕಿಸಿಕೊಟ್ಟು ಪೌರಕಾರ್ಮಿಕರಿಗೆ ಸೇವಾ ಭದ್ರತೆ ಒದಗಿಸುತ್ತಿವೆ. ನಮ್ಮ ನಗರಸಭೆಯ ಎಸ್‌ಎಫ್ ಅನುದಾನದಡಿ 14.37 ಲಕ್ಷ ರೂ.ಗಳ ಕ್ರಿಯಾಯೋಜನೆ ಸಿದ್ಧಪಡಿಸಿ ಎಲ್ಲಾ ಪೌರ ಕಾರ್ಮಿಕರಿಗೂ 15 ಲಕ್ಷದವರೆಗೆ ಜೀವ ವಿಮೆ ಮಾಡಿಸಲು ನಿರ್ಧರಿಸಲಾಗಿದೆ. ಇದರ ವ್ಯಾಪ್ತಿಗೆ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ನೀರು ಗಂಟಿಗಳು ಮತ್ತು ಚಾಲಕರು, ಸ್ವಚ್ಛತಾ ಸಿಬ್ಬಂದಿ ಬರಲಿದ್ದಾರೆ ಎಂದರು.

ಇದೇ ವೇಳೆ ಉತ್ತಮವಾಗಿ ಕಾರ್ಯ ನಿರ್ವಹಿಸಿ ಜನಮನ್ನಣೆ ಗಳಿಸಿದ 12 ಪೌರ ಕಾರ್ಮಿಕರನ್ನು ಸನ್ಮಾನಿಸಲಾಯಿತು. ಸಮಾರಂಭದಲ್ಲಿ ಮಾಜಿ ಶಾಸಕ ಕೇಶವ ಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಎಂ.ಶಂಕರ್, ನಗರಸಭಾ ಅಧ್ಯಕ್ಷ ಶ್ರೀಕಂಠಸ್ವಾಮಿ, ಸದಸ್ಯರಾದ ಗಂಗಾಧರ್, ಎಸ್.ಪಿ.ಮಹೇಶ್, ಎನ್.ಎಸ್.ಯೋಗೀಶ್, ಗಾಯತ್ರಿ, ಸಿದ್ದಿಕ್, ಸಿದ್ದರಾಜು, ಶ್ವೇತಲಕ್ಷ್ಮಿ, ಪಿ.ದೇವ, ಸೌಭಾಗ್ಯ, ರಮೇಶ್, ಕೆ.ಎಂ.ಬಸವರಾಜು, ರವಿ ಸೇರಿದಂತೆ ಇತರರಿದ್ದರು.

ರೈತರು ಸಕಾಲಕ್ಕೆ ಸಾಲ ಮರು ಪಾವತಿಸಿ


ಕಾರ್ಯಕ್ರಮವನ್ನು ಗಣ್ಯರು ಉದ್ಘಾಟಿಸಿದರು.

ಮಲ್ಕುಂಡಿ, ಸೆ.24– ಸಹಕಾರ ಸಂಘದಿಂದ ಸಾಲ ಪಡೆದ ರೈತರು ಸಕಾಲಕ್ಕೆ ಮರು ಪಾವತಿಸಿದರೇ ಮಾತ್ರ ಸಂಘ ಅಭಿವೃದ್ಧಿ ಕಾಣಲು ಸಾಧ್ಯ ಎಂದು ಸಹಕಾರ ಸಂಘದ ಜಿಲ್ಲಾ ಬ್ಯಾಂಕ್ ಪ್ರತಿನಿಧಿ ಜಿ.ಎಸ್.ನಿರಂಜನ್ ತಿಳಿಸಿದರು.

ನಂಜನಗೂಡು ತಾಲೂಕಿನ ಶಿರಮಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ 2024–25ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಮಾತನಾಡಿದ ಅವರು, ಸಹಕಾರ ಸಂಘ ಉತ್ತಮವಾಗಿ ಕಾರ್ಯ ನಿರ್ವಹಿಸಲು ಎಲ್ಲರೂ ಒಗ್ಗಟ್ಟಿನಿಂದ ಕಾರ್ಯ ನಿರ್ವಹಿಸಬೇಕು. ರೈತರೂ ಸಹ ತಾವು ಪಡೆದ ಸಾಲವನ್ನು ಸಕಾಲಕ್ಕೆ ಮರು ಪಾವತಿಸಬೇಕು ಎಂದು ಮನವಿ ಮಾಡಿದರು.

ಈ ವೇಳೆ ಸಂಘದ ಅಧ್ಯಕ್ಷ ಗುರುಸ್ವಾಮಿ, ಉಪಾಧ್ಯಕ್ಷ ಚನ್ನಬಸವಣ್ಣ, ನಿರ್ದೇಶಕರಾದ ಶಿವಶಂಕರಪ್ಪ, ಮಹೇಂದ್ರ, ಶಿವರಾಜಪ್ಪ, ಸಂಗಪ್ಪ, ನಾಗೇಶ್, ಸ್ವಾಮಿನಾಯಕ, ಪುಟ್ಟಸ್ವಾಮಿಗೌಡ, ಹುಚ್ಚಯ್ಯ, ರಮ್ಯ, ಸುಮ, ಸಿಇಓ ಮಲ್ಲಿಕಾರ್ಜುನಸ್ವಾಮಿ, ಅಟೆಂಡರ್ ಪರಶುರಾಮೇಗೌಡ ಸೇರಿದಂತೆ ರೈತರು ಹಾಜರಿದ್ದರು.

ಇಂದು ವಿದ್ಯುತ್ ಗ್ರಾಹಕರ ಕುಂದು ಕೊರತೆ ಸಭೆ

ನಂಜನಗೂಡು, ಸೆ.24– ನಗರದ ಚೆಸ್ಕಾಂ ಕಚೇರಿ ಎದುರು ಸೆ.25 ರಂದು ಬೆಳಗ್ಗೆ 11 ಗಂಟೆಗೆ ವಿದ್ಯುತ್ ಗ್ರಾಹಕರ ಕುಂದು ಕೊರತೆ ಸಭೆ ನಡೆಯಲಿದೆ ಎಂದು ಸಹಾಯಕ ಕಾರ್ಯಪಾಲಕ ಇಂಜಿನಿಯರ್ ದೇವರಾಜಯ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಭಾಷಣದ ಬದಲು ಹೆಚ್ಚು ಬರೆಯಿರಿ

ಎಸ್.ಎಲ್.ಭೈರಪ್ಪನವರು ಕಾರ್ಯಕ್ರಮಗಳಲ್ಲಿ ಹೆಚ್ಚಾಗಿ ಭಾಗಿಯಾಗುತ್ತಿರಲಿಲ್ಲ. ಅಪರೂಪಕ್ಕೆ ಅದೂ ಆಯ್ದ ಕಾರ್ಯಕ್ರಮಗಳಿಗೆ ಹೋದಂತಹ ಸಂದರ್ಭದಲ್ಲಿ ಯುವ ಬರಹಗಾರರಿಗೆ ಭೈರಪ್ಪನವರು ಕಿವಿಮಾತೊಂದು ಹೇಳುತ್ತಿದ್ದರು; ಬರಹಗಾರರು ಹೆಚ್ಚಾಗಿ ಭಾಷಣ ಮಾಡಬಾರದು. ಯಾವುದೇ ಕಾರ್ಯಕ್ರಮಕ್ಕೆ ಹೋದರೂ 15 ನಿಮಿಷದಲ್ಲಿ ಭಾಷಣ ಮುಗಿಸಬೇಕು. ಗಂಟೆಗಟ್ಟಲೆ ಭಾಷಣ ಮಾಡಿದರೆ ಕ್ಲೀಷೆಯಾಗುತ್ತದೆ ಎಂದು ವ್ಯಾಖ್ಯಾನಿಸುತ್ತಿದ್ದರು.

ಬರಹಗಾರ ಹೆಚ್ಚು ಸಮಯವನ್ನು ಓದು ಬರಹಕ್ಕೆ ಸೀಮಿತಗೊಳಿಸಬೇಕೇ ಹೊರತು ಮಾತನಾಡುವುದಕ್ಕಲ್ಲ ಎಂದು ಸಲಹೆ ನೀಡುತ್ತಿದ್ದರು.

ಹುಟ್ಟುಹಬ್ಬದ ಶುಭಹಾರೈಕೆ


ಮೈಸೂರು ನಗರ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಚೇತನ್ ವಿಷಕಂಠೇಗೌಡ ಅವರ ಹುಟ್ಟುಹಬ್ಬದ ಅಂಗವಾಗಿ ಇಂದಿರಾಗಾಂಧಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರವಿ ಮಂಚೇಗೌಡನ ಕೊಪ್ಪಲು ಮತ್ತು ಕಾಂಗ್ರೆಸ್ ಪದಾಧಿಕಾರಿಗಳು ಸನ್ಮಾನಿಸಿದರು. ಈ ವೇಳೆ ಕಾಂಗ್ರೆಸ್ ವಾರ್ಡ್ ಅಧ್ಯಕ್ಷ ಸುರೇಶ್, ಮಹೇಶ್, ಕೇಬಲ್ ನಾಗರಾಜು, ರಾಮಚಂದ್ರ, ಮೂರ್ತಿ, ಸುನಿಲ್ ಇನ್ನಿತರರಿದ್ದರು.

ಹುಟ್ಟುಹಬ್ಬ ಆಚರಣೆ


ಉದ್ಯಮಿಯೂ ಆದ ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಪಿ.ವೃಷಬೇಂದ್ರಪ್ಪ ಅವರ ಹುಟ್ಟು ಹಬ್ಬವನ್ನು ಅವರ ಅಭಿಮಾನಿಗಳು, ಹಿತೈಷಿಗಳು ಅನ್ನಸಂತರ್ಪಣೆ ಮಾಡಿ, ಪಟಾಕಿ ಸಿಡಿಸಿ, ಸಿಹಿ ಹಂಚುವುದರ ಮೂಲಕ ವಿಜೃಂಭಣೆಯಿಂದ ಆಚರಿಸಿದರು.

ಭೈರಪ್ಪನವರಿಗೆ ಯದುವೀರ್ ಸಂತಾಪ



ಮೈಸೂರು, ಸೆ.24(ಎಸ್‌ಪಿಎನ್)– ಪದ್ಮಭೂಷಣ ಪ್ರಶಸ್ತಿ ಪುರಸ್ಕೃತ ಹಿರಿಯ ಸಾಹಿತಿ ಎಸ್.ಎಲ್.ಭೈರಪ್ಪ ಅವರ ನಿಧನಕ್ಕೆ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ಹೊರಡಿಸಿರುವ ಅವರು, ಹಿರಿಯ ಸಾಹಿತಿಗಳ ನಿಧನದಿಂದ ಕನ್ನಡ ಸಾರಸ್ವತ ಲೋಕ ಪ್ರಮುಖ ಕೊಂಡಿಯನ್ನು ಕಳೆದು ಕೊಂಡಂತಾಗಿದೆ. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಸರಸ್ವತಿ ಸಮ್ಮಾನ್, ಪದ್ಮ ಭೂಷಣ, ಪದ್ಮಶ್ರೀ, ನಾಡೋಜ ಸೇರಿದಂತೆ ಹಲವಾರು ಪ್ರಶಸ್ತಿಗಳಿಗೆ ಭಾಜನರಾಗಿದ್ದರು. ಅವರೊಂದಿಗೆ ಕೆಲವು ಬಾರಿ ಸಂವಾದ ನಡೆಸುವ ಅವಕಾಶ ನಡೆಸುವ ಅವಕಾಶ ಸಿಕ್ಕಿದ್ದು ಜೀವನ ಮಹತ್ವದ ಕ್ಷಣಗಳಾಗಿವೆ. ಕೆಲವರ ವ್ಯಕ್ತಿತ್ವಗಳೇ ಹಾಗೆ. ಅವರಿಗೆ ಪ್ರಶಸ್ತಿ ಬಂದಿದೆ ಎನ್ನುವುದಕ್ಕಿಂತ ಅವರಿಂದ ಪ್ರಶಸ್ತಿಗಳಿಗೇ ಸಮ್ಮಾನ ಪಡೆಯುತ್ತದೆ. ಅಂತಹ ಮಹನೀಯರ ಸಾಲಿನಲ್ಲಿ ಎಸ್.ಎಲ್.ಭೈರಪ್ಪನವರು ಇದ್ದಾರೆ ಎಂದು ಸಂಸದರು ಸ್ಮರಿಸಿದ್ದಾರೆ

ಕನ್ನಡ ಸಾರಸ್ವತ ಲೋಕ ಮಾತ್ರವಲ್ಲದೇ, ಹಿಂದಿ, ಇಂಗ್ಲಿಷ್ ಸೇರಿದಂತೆ ಭಾರತೀಯ ಭಾಷೆಗಳಿಗೆ ಇವರ ಕಾದಂಬರಿಗಳು ಅನುವಾದಗೊಂಡಿದ್ದು, ಶ್ರೀಯುತರು ಕೋಟ್ಯಂತರ ಅಭಿಮಾನಿಗಳನ್ನು ಹೊಂದಿದ್ದರು. ಲೇಖನಿ ಮೂಲಕ ಎಲ್ಲರನ್ನೂ ಸೆಳೆದುಕೊಂಡಿದ್ದ ಶ್ರೀಯುತರು, ತಮ್ಮ ಆದಾಯವನ್ನು ಸಮಾಜ ಸೇವೆಗೆ ಮೀಸಲಿರಿಸಿ ಜನಮಾನಸದಲ್ಲಿ ವಿಶೇಷ ಸ್ಥಾನಮಾನ ಪಡೆದುಕೊಂಡಿದ್ದಾರೆ ಎಂದು ಯದುವೀರ್ ತಿಳಿಸಿದ್ದಾರೆ.

ಹಾಸನದ ಚನ್ನರಾಯಪಟ್ಟಣದಲ್ಲಿ ಜನಿಸಿದ್ದರೂ ಭೈರಪ್ಪನವರಿಗೂ, ಮೈಸೂರಿಗೂ ಅವಿನಾಭಾವ ಸಂಬಂಧವಿದೆ. ಪ್ರೌಢ ಶಿಕ್ಷಣ, ಪದವಿ ಹಾಗೂ ಸ್ನಾತಕೋತ್ತರ ಪದವಿಯನ್ನು ಸಾಂಸ್ಕೃತಿಕ ರಾಜಧಾನಿಯಲ್ಲೇ ಪೂರೈಸಿ ಇಲ್ಲಿಯೇ ನೆಲೆ ಕಂಡುಕೊಂಡಿದ್ದರು.

ಭೈರಪ್ಪನವರ ಮೂಲಕವೂ ಮೈಸೂರು ವಿಶೇಷ ಸ್ಥಾನ ಪಡೆದುಕೊಂಡಿದೆ. ಮತದಾನ, ವಂಶವೃಕ್ಷ, ಗೃಹಭಂಗ, ಗ್ರಹಣ, ದಾಟು, ಅನ್ವೇಷಣ, ಪರ್ವ, ಮಂದ್ರ, ಆವರಣ, ಯಾನ ಸೇರಿದಂತೆ ಹಲವಾರು ಕಾದಂಬರಿಗಳು ಇಂದಿಗೂ ಜನಮಾನಸದಲ್ಲಿ ಹಸಿರಾಗಿವೆ. ಅವರು ಕೋಟ್ಯಂತರ ಅಭಿಮಾನಿಗಳನ್ನು ಹೊಂದಿದ್ದಾರೆ. ಇವರ ಕೆಲವು ಕಾದಂಬರಿಗಳು ಚಲನಚಿತ್ರಗಳಾಗಿ ಅಭಿಮಾನಿಗಳಿಗೆ ಮುದ ನೀಡಿವೆ. ಭೈರಪ್ಪನವರ ನಿಧನದಿಂದ ನಿಜಕ್ಕೂ ತೀವ್ರ ದುಃಖವಾಗಿದೆ. ಅವರ ಆತ್ಮಕ್ಕೆ ಶಾಂತಿ ದೊರೆಯಲಿ. ಅವರ ಕುಟುಂಬವರ್ಗ, ಬಂಧು–ಬಳಗದವರಿಗೆ, ಅಪಾರ ಅಭಿಮಾನಿಗಳಿಗೆ ಅವರ ನಿಧನದ ದುಃಖ ಭರಿಸುವ ಶಕ್ತಿಯನ್ನು ಆ ಭಗವಂತ ಕರುಣಿಸಲಿ ಎಂದು ಪ್ರಾರ್ಥನೆ ಮಾಡುತ್ತೇನೆ ಎಂದು ಸಂಸದ ಯದುವೀರ್ ಒಡೆಯರ್ ಅಕ್ಷರ ನಮನ ಮೂಲಕ ಶ್ರದ್ಧಾಂಜಲಿ ಸಲ್ಲಿಸಿದ್ದಾರೆ.

ಮೂರನೇ ಪುಟದಿಂದ

ಎಸ್.ಎಲ್.ಭೈರಪ್ಪ ಇನ್ನಿಲ್ಲ

ಎಂಎ ಪದವಿ ಪಡೆದಿದ್ದರು. ಬರೋಡಾದ ಸಯ್ಯಾಜಿರಾವ್ ವಿಶ್ವವಿದ್ಯಾಲಯದಲ್ಲಿ 'ಸತ್ಯ ಮತ್ತು ಸೌಂದರ್ಯ' ಪ್ರಬಂಧಕ್ಕೆ ಪಿಎಚ್.ಡಿ ಪದವಿ ಪಡೆದ ನಂತರ ಅವರು, ಹುಬ್ಬಳ್ಳಿಯ ಕಾಡಸಿದ್ದೇಶ್ವರ ಕಾಲೇಜು, ಗುಜರಾತ್‌ನ ಸರ್ದಾರ್ ವಲ್ಲಭಬಾಯಿ ಪಟೇಲ್ ವಿಶ್ವವಿದ್ಯಾಲಯದಲ್ಲಿ ತತ್ವಶಾಸ್ತ್ರ ಪ್ರಾಧ್ಯಾಪಕರಾಗಿದ್ದರು. ದೆಹಲಿಯ ರಾಷ್ಟ್ರೀಯ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯಲ್ಲಿ (ಎನ್‌ಸಿಇಆರ್‌ಟಿ) 1967–71ರವರೆಗೆ ಉಪನ್ಯಾಸಕರಾಗಿ ಸೇವೆ ಸಲ್ಲಿಸಿ, ನಂತರ ಮೈಸೂರಿನ ಪ್ರಾದೇಶಿಕ ಶಿಕ್ಷಣ ಕಾಲೇಜಿಗೆ ವರ್ಗವಾದ ಅವರು, ತತ್ವಶಾಸ್ತ್ರ ಮತ್ತು ಶಿಕ್ಷಣ ವಿಜ್ಞಾನದ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ 1991ರಲ್ಲಿ ನಿವೃತ್ತರಾದರು.

ಕೃತಿಗಳು: ವಿದ್ಯಾರ್ಥಿಯಾಗಿದ್ದಾಗಲೇ 'ಭೀಮಕಾಯ', 'ಬೆಳಕು ಮೂಡಿತು' ಕಾದಂಬರಿಗಳನ್ನು ಬರೆದಿದ್ದ ಅವರ ಮೊದಲ ಕಾದಂಬರಿ 'ಧರ್ಮಶ್ರೀ' 1961ರಲ್ಲಿ ಪ್ರಕಟಗೊಂಡಿತ್ತು. ದೂರ ಸರಿದರು (1962), ಮತದಾನ, ವಂಶವೃಕ್ಷ (1965), ಜಲಪಾತ (1967), ನಾಯಿನೆರಳು (1968), ತಬ್ಬಲಿಯು ನೀನಾದೆ ಮಗನೆ (1970), ಗೃಹಭಂಗ (1970), ನಿರಾಕರಣ (1971), ಗ್ರಹಣ (1972), ದಾಟು (1973), ಅನ್ವೇಷಣ (1976), ಪರ್ವ (1979), ನೆಲೆ (1983), ಸಾಕ್ಷಿ (1986), ಅಂಚು (1990), ತಂತು (1993), ಸಾರ್ಥ (1998), ಮಂದ್ರ (2002), ಆವರಣ (2007), ಕವಲು (2010), ಯಾನ (2014), ಉತ್ತರ ಕಾಂಡ (2017) ಅವರ ಕಾದಂಬರಿಗಳು.

ಭಿತ್ತಿ (1996) ಅವರ ಆತ್ಮಕಥನ, ಸಾಹಿತ್ಯ ಮತ್ತು ಪ್ರತೀಕ (1966), ಸತ್ಯ ಮತ್ತು ಸೌಂದರ್ಯ (1967), ಕಥೆ ಮತ್ತು ಕಥಾವಸ್ತು (1969) ಅವರ ಸಾಹಿತ್ಯ ಮೀಮಾಂಸೆ ಮತ್ತು ಚಿಂತನಾ ಕೃತಿಗಳಾಗಿವೆ. ಹಿಂದೂಸ್ತಾನಿ ಸಂಗೀತದ ಬಗ್ಗೆ ವಿಶೇಷ ಆಸಕ್ತಿ ಹೊಂದಿದ್ದ ಅವರು 'ಗಂಗೂಬಾಯಿ ಹಾನಗಲ್' ಕೃತಿಯ ಸಂಪಾದಕರೂ ಆಗಿದ್ದರು.

ಪ್ರಶಸ್ತಿಗಳು: ವಂಶವೃಕ್ಷ ಕಾದಂಬರಿಗೆ 1966ರಲ್ಲಿ ರಾಜ್ಯ ಸಾಹಿತ್ಯ ಅಕಾಡೆಮಿ, ದಾಟು ಕಾದಂಬರಿಗೆ 1975ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ, 1985ರಲ್ಲಿ ಮಾಸ್ತಿ, 2005ರಲ್ಲಿ ಪಂಪ ಪ್ರಶಸ್ತಿ, 2010ರಲ್ಲಿ ಸರಸ್ವತಿ ಸಮ್ಮಾನ್, 2011ರಲ್ಲಿ ನಾಡೋಜ, 2014ರಲ್ಲಿ ಬೆಟಗೇರಿ ಕೃಷ್ಣಶರ್ಮ ಪ್ರಶಸ್ತಿ, 2017ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ನೃಪತುಂಗ ಪ್ರಶಸ್ತಿ ದೊರೆತಿದೆ.

2014ರಲ್ಲಿ ನ್ಯಾಷನಲ್ ರಿಸರ್ಚ್ ಪ್ರೊಫೆಸರ್, 2015ರಲ್ಲಿ ಸಾಹಿತ್ಯ ಅಕಾಡೆಮಿ ಫೆಲೋಶಿಪ್ ಗೌರವಕ್ಕೆ ಭಾಜನರಾಗಿದ್ದ ಅವರಿಗೆ ಕೇಂದ್ರ ಸರ್ಕಾರವು 2016ರಲ್ಲಿ ಪದ್ಮಶ್ರೀ, 2023ರಲ್ಲಿ ಪದ್ಮಭೂಷಣ ಪುರಸ್ಕಾರ ನೀಡಿತ್ತು.

ಕೃತಿಗಳ ಭಾಷಾಂತರ: ಡಾ.ಎಸ್.ಎಲ್. ಭೈರಪ್ಪ ಅವರ ಕಾದಂಬರಿಗಳು ಭಾರತದ ವಿವಿಧ ಭಾಷೆಗಳಿಗೆ ಅನುವಾದವಾಗಿವೆ. ವಂಶವೃಕ್ಷ, ಸಾಕ್ಷಿ ಮತ್ತು ಪರ್ವ ಕೃತಿಗಳು ಇಂಗ್ಲಿಷ್‌ಗೆ ಭಾಷಾಂತರಗೊಂಡಿವೆ.

ಚಲನಚಿತ್ರಕ್ಕೆ ಸ್ಫೂರ್ತಿ: 'ವಂಶವೃಕ್ಷ', 'ತಬ್ಬಲಿಯು ನೀನಾದೆ ಮಗನೇ' ಕಾದಂಬರಿಗಳನ್ನು ಗಿರೀಶ್ ಕಾರ್ನಾಡ್ ಮತ್ತು ಬಿ.ವಿ.ಕಾರಂತ ಚಲನಚಿತ್ರವಾಗಿಸಿದ್ದರು. ಮತದಾನ ಚಿತ್ರವಾಗಿ, ಗೃಹಭಂಗ ಧಾರಾವಾಹಿಯಾಗಿ ಟಿ.ಎನ್.ಸೀತಾರಾಮ್ ನಿರ್ದೇಶನ ಮಾಡಿದ್ದರು. ಗಿರೀಶ್ ಕಾಸರವಳ್ಳಿ 'ನಾಯಿನೆರಳು' ಕಾದಂಬರಿಯನ್ನು ಅದೇ ಹೆಸರಿನಲ್ಲಿ ತೆರೆಯ ಮೇಲೆ ತಂದಿದ್ದರು. ಚಿತ್ರಗಳಿಗೆ ರಾಷ್ಟ್ರ ಮತ್ತು ರಾಜ್ಯ ಪ್ರಶಸ್ತಿಗಳೂ ಸಂದಿದ್ದವು.

ಆಯಾ ಕಾಲದಲ್ಲಿ ಬಂದ ಅವರ ಕಾದಂಬರಿಗಳೆಲ್ಲಾ ಚರ್ಚೆಗೆ ಒಳಗಾಗಿವೆ. ಇಂಗ್ಲಿಷ್ ಭಾಷೆಯೂ ಸೇರಿದಂತೆ ಭಾರತೀಯ ಹಲವು ಭಾಷೆಗಳಿಗೆ ಭೈರಪ್ಪನವರ ಕಾದಂಬರಿಗಳು ಅನುವಾದಗೊಂಡಿವೆ. ಗೃಹಭಂಗ, ವಂಶವೃಕ್ಷ, ನೆಲೆ, ಸಾಕ್ಷಿ, ನಾಯಿನೆರಳು, ತಬ್ಬಲಿಯು ನೀನಾದೆ ಮಗನೆ, ದಾಟು, ಧರ್ಮಶ್ರೀ, ಪರ್ವ, ಭಿತ್ತಿ ಮುಂತಾದವು ಹಿಂದಿ, ಮರಾಠಿಯಲ್ಲಿ ಜನಪ್ರಿಯವಾಗಿವೆ. ಭೈರಪ್ಪನವರು ಭಾರತೀಯ ಮತ್ತು ಪಾಶ್ಚಾತ್ಯ ಸಂಗೀತಾಸಕ್ತರಾಗಿರುವುದರೊಂದಿಗೆ ಚಿತ್ರ ಮತ್ತು ಶಿಲ್ಪಕಲೆಯಲ್ಲೂ ಅಭಿರುಚಿ ಹೊಂದಿದ್ದರು. ಬಾಲ್ಯದಿಂದಲೇ ಪ್ರವಾಸದ ಗೀಳು ಹತ್ತಿಸಿಕೊಂಡಿದ್ದ ಇವರು, ಉತ್ತರ ಮತ್ತು ದಕ್ಷಿಣ ಧ್ರುವಗಳೂ ಒಳಗೊಂಡಂತೆ ವಿಶ್ವದ ಏಳೂ ಭೂಖಂಡಗಳಲ್ಲಿ ಪ್ರವಾಸ ಮಾಡಿದ್ದಾರೆ.

ಕರ್ನಾಟಕ ಆದಿಯಾಗಿ ಭಾರತ ಮತ್ತು ವಿದೇಶಗಳಲ್ಲೂ ಅವರ ಕಾದಂಬರಿಗಳ ಕುರಿತಾದ ವಿಚಾರಗೋಷ್ಠಿಗಳು ನಡೆದು, ಅವರ ಕಾದಂಬರಿಗಳ ಅಧ್ಯಯನ ಗ್ರಂಥ ಸಂಪುಟಗಳು ಹೊರಬಂದಿವೆ. ಭೈರಪ್ಪನವರ ಕಾದಂಬರಿಗಳು ಕರ್ನಾಟಕದ ಹಲವು ವಿಶ್ವವಿದ್ಯಾಲಯಗಳ ಪಠ್ಯಗಳಾಗಿ ಸ್ಥಾನವನ್ನು ಪಡೆದಿರುವುದಲ್ಲದೆ, 20ಕ್ಕೂ ಹೆಚ್ಚು ಸಂಶೋಧನಾ ವಿದ್ಯಾರ್ಥಿಗಳ ಅಧ್ಯಯನದ ವಿಷಯವೂ ಆಗಿವೆ. ಭೈರಪ್ಪನವರ 24 ಕಾದಂಬರಿಗಳನ್ನೂ ಹಾಗೂ ಸಾಹಿತ್ಯವಿಮರ್ಶೆ, ಸೌಂದರ್ಯಮೀಮಾಂಸೆ ಮತ್ತು ಸಂಸ್ಕೃತಿಯ ಕುರಿತಾಗಿ 5 ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಅವರ ಬಹುತೇಕ ಕಾದಂಬರಿಗಳು ಭಾರತದ 14 ಭಾಷೆಗಳಿಗೂ ಅನುವಾದಗೊಂಡು, ಆರು ಕಾದಂಬರಿಗಳು ಇಂಗ್ಲೀಷಿಗೆ ಅನುವಾದಗೊಂಡಿವೆ.

ಎಸ್.ಎಲ್.ಭೈರಪ್ಪ ನಿಧನಕ್ಕೆ ಸುತ್ತೂರು ಶ್ರೀಗಳ ಸಂತಾಪ



ಮೈಸೂರು, ಸೆ.24– ಖ್ಯಾತ ಕಾದಂಬರಿಕಾರರು, ಪದ್ಮಭೂಷಣ ಮತ್ತು ಸರಸ್ವತಿ ಸಮ್ಮಾನ್ ಪ್ರಶಸ್ತಿ ಪುರಸ್ಕೃತರೂ ಆದ ಡಾ.ಎಸ್.ಎಲ್.ಭೈರಪ್ಪನವರ ಅಗಲಿಕೆ ವಿಷಾದದ ಸಂಗತಿ ಎಂದು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಂತಾಪ ಸೂಚಿಸಿದ್ದಾರೆ.

ಡಾ.ಭೈರಪ್ಪನವರು 13ನೇ ವಯಸ್ಸಿಗೇ ಗಾಂಧೀಜಿಯವರ ಆದರ್ಶಗಳಿಂದ ಆಕರ್ಷಿತರಾಗಿ ಸ್ವಾತಂತ್ರ್ಯ ಚಳವಳಿಯಲ್ಲಿ ತೊಡಗಿಸಿಕೊಂಡಿದ್ದವರು. ಬರೋಡಾದ ಮಹಾರಾಜ ಸಯ್ಯಾಜಿರಾವ್ ವಿಶ್ವವಿದ್ಯಾಲಯದಿಂದ 'ಸತ್ಯ ಮತ್ತು ಸೌಂದರ್ಯ' ವಿಷಯದಲ್ಲಿ ಡಾಕ್ಟರೇಟ್ ಪಡೆದಿದ್ದರು. ವೃತ್ತಿಯಲ್ಲಿ ಉಪನ್ಯಾಸಕರಾಗಿ ಹುಬ್ಬಳ್ಳಿಯ ಪಿ.ಸಿ. ಜಾಬಿನ್ ಕಾಲೇಜು, ಗುಜರಾತಿನ ಸರ್ದಾರ್ ಪಟೇಲ್ ವಿಶ್ವವಿದ್ಯಾಲಯಗಳಲ್ಲಿ ಕಾರ್ಯನಿರ್ವಹಿಸಿದ್ದರು. ಆಳವಾದ ಸಂಶೋಧನೆ, ಅಧ್ಯಯನಗಳ ಹಿನ್ನೆಲೆಯುಳ್ಳ ಮಹತ್ವದ ಕಾದಂಬರಿಗಳನ್ನು ರಚಿಸಿದ್ದರು. ಅಂತೆಯೇ 1961ರಲ್ಲಿ 'ಧರ್ಮಶ್ರೀ' ಕಾದಂಬರಿ ಪ್ರಕಟವಾಯಿತು.

ಇದುವರೆವಿಗೆ 25 ಕಾದಂಬರಿಗಳು ಪ್ರಕಟವಾಗಿವೆ. ಗೃಹಭಂಗ, ವಂಶವೃಕ್ಷ, ನೆಲೆ, ಸಾಕ್ಷಿ, ನಾಯಿನೆರಳು, ತಬ್ಬಲಿಯು ನೀನಾದೆ ಮಗನೆ, ದಾಟು, ಧರ್ಮಶ್ರೀ, ಪರ್ವ, ಭಿತ್ತಿ ಮುಂತಾದವು ಹಿಂದಿ, ಮರಾಠಿ ಮತ್ತು ಇಂಗ್ಲಿಷ್ ಭಾಷೆಗಳ ಸೇರಿದಂತೆ ಹಲವಾರು ಭಾಷೆಗಳಿಗೆ ಅನುವಾದಗೊಂಡಿವೆ. ವಂಶವೃಕ್ಷ, ತಬ್ಬಲಿಯು ನೀನಾದೆ ಮಗನೆ, ಮತದಾನ ಕಾದಂಬರಿಗಳು ಚಲನಚಿತ್ರಗಳಾಗಿ ಪ್ರಶಸ್ತಿ ಗಳಿಸಿವೆ. ವಂಶವೃಕ್ಷಕ್ಕೆ 1966ರಲ್ಲಿ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, 1975ರಲ್ಲಿ ದಾಟು ಕಾದಂಬರಿಗೆ ರಾಜ್ಯ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿಗಳ ಪ್ರಶಸ್ತಿ ದೊರೆತಿವೆ. ಗೃಹಭಂಗ ಮತ್ತು ದಾಟು ಕಾದಂಬರಿಗಳು ಧಾರಾವಾಹಿಗಳಾಗಿಯೂ ಜನಪ್ರಿಯವಾಗಿವೆ.

ಡಾ. ಭೈರಪ್ಪನವರು ಹಲವಾರು ಪ್ರಶಸ್ತಿ, ಗೌರವ ಸನ್ಮಾನಗಳಿಗೆ ಭಾಜನರಾಗಿದ್ದರು. ಪದ್ಮಭೂಷಣ, ಸರಸ್ವತಿ ಸಮ್ಮಾನ್ ಪ್ರಶಸ್ತಿ, ಪಂಪ ಪ್ರಶಸ್ತಿ, ಎನ್‌ಟಿಆರ್ ರಾಷ್ಟ್ರೀಯ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕನ್ನಡ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು, ಗುಲ್ಬರ್ಗಾ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್, ಹಾಗೂ ಹಂಪಿವಿಶ್ವವಿದ್ಯಾಲಯದಿಂದ ನಾಡೋಜ ಪುರಸ್ಕಾರಗಳು ಸಂದಿದ್ದವು. ರಾಷ್ಟ್ರವಾದಿ ಮೌಲ್ಯಗಳಿಗೆ ಬದ್ಧರಾಗಿದ್ದ ಡಾ.ಭೈರಪ್ಪನವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಫೆಲೋ ಗೌರವ ಹಾಗೂ ರಾಷ್ಟ್ರೀಯ ಪ್ರಾಧ್ಯಾಪಕರೆಂಬ ಗೌರವಗಳು ದೊರೆತಿವೆ.

ಅವರ ಹುಟ್ಟೂರಾದ ಸಂತೇಶಿವರದ ಅಭಿವೃದ್ಧಿಗಾಗಿ ಮತ್ತು ಸಾಮಾಜಿಕ ಕಾರ್ಯಗಳಿಗೆ ನೆರವು ನೀಡಲು ಡಾ.ಎಸ್.ಎಲ್. ಭೈರಪ್ಪ ಪ್ರತಿಷ್ಠಾನ ಸ್ಥಾಪಿಸಿದ್ದರು. ಕರ್ನಾಟಕ ಸರ್ಕಾರದ ನೆರವಿನಿಂದ ಹುಟ್ಟೂರಿಗೆ ಕುಡಿಯುವ ನೀರಿನ ಖಾಯಂ ಯೋಜನೆಯನ್ನು ಕಾರ್ಯಗತಗೊಳಿಸಿದ್ದರು. ಇಂತಹ ಬಹುಮುಖ ವ್ಯಕ್ತಿತ್ವ ಹೊಂದಿದ್ದ ಡಾ.ಭೈರಪ್ಪನವರ ಅಗಲಿಕೆ ನಿಜಕ್ಕೂ ತುಂಬಲಾರದ ನಷ್ಟ. ದಿವಂಗತರ ಆತ್ಮಕ್ಕೆ ಚಿರಶಾಂತಿಯನ್ನು, ಅವರ ಕುಟುಂಬ ವರ್ಗದವರಿಗೆ, ಬಂಧು–ಬಾಂಧವರಿಗೆ ಹಾಗೂ ಅಸಂಖ್ಯಾತ ಅಭಿಮಾನಿಗಳಿಗೆ ಈ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತನು ನೀಡಲೆಂದು ಹಾರೈಸುತ್ತೇವೆ ಎಂದಿದ್ದಾರೆ.

ಎರಡು ದಿನಗಳ ಮಕ್ಕಳ ದಸರಾಕ್ಕೆ ತೆರೆ

ಪೋಷಕರು, ಶಿಕ್ಷಕರ ನಿಬ್ಬೆರಗಾಗಿಸಿದ ಬಾಲ ಪ್ರತಿಭೆಗಳು




'ಥಾರ್ ರೋಡ್' ನಾಟಕ ಪ್ರದರ್ಶನ ನೀಡಿದ ನಂಜನಗೂಡು ಕುಪ್ಪರವಳ್ಳಿ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿಗಳು.

ಆರಾಧ್ಯಳ ಹೂಲಾ ಹೂಮ್ ಮೋಡಿ....!

ವರ್ಲ್ಡ್ ಬುಕ್ ಆಫ್ ರೆಕಾರ್ಡ್ಸ್‌ನಲ್ಲಿ ದಾಖಲಾಗಿರುವ ಮಂಗಳೂರು ಮೂಲದ ಪುಟಾಣಿ ಆರಾಧ್ಯ ಎ.ಪಡಕೆ 'ಹೂಲಾ ಹೂಮ್' ಸಾಹಸಮಯ ನೃತ್ಯ ಪ್ರದರ್ಶನ ಮಕ್ಕಳ ದಸರಾದಲ್ಲಿ ಮೋಡಿ ಮಾಡಿತು. ಎರಡು ಕಾಲು ಮತ್ತು ಎರಡು ಕೈಗಳಲ್ಲಿ ಏಕಕಾಲದಲ್ಲಿ ನಾಲ್ಕು ರಿಂಗ್‌ಗಳನ್ನು ತಿರುಗಿಸಿದ ಆರಾಧ್ಯ, ದೊಡ್ಡ ರಿಂಗ್ ಅನ್ನು ನಿರಾಯಾಸವಾಗಿ ತಿರುಗಿಸಿ ನೆರೆದಿದ್ದವರಿಂದ ಶಿಳ್ಳೆ-ಚಪ್ಪಾಳೆ ಗಿಟ್ಟಿಸಿದರು.



ಪುಟಾಣಿ ಆರಾಧ್ಯ ಎ.ಪಡಕೆ 'ಹೂಲಾ ಹೂಮ್' ಸಾಹಸಮಯ ನೃತ್ಯ ಪ್ರದರ್ಶನ



ದೈವ ವೇಷಧಾರಿಯಾಗಿ ಕೆ.ಆರ್.ನಗರ ಹಂಪಾಪುರ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿ.

ಮೈಸೂರು, ಸೆ.24(ಎಂಕೆ)– ಕನ್ನಡ ನಾಡಿನ ಸಾಂಸ್ಕೃತಿಕ ಕಲಾ ಪರಂಪರೆ ಅನಾವರಣದೊಂದಿಗೆ ಸಾಹಸಮಯ ನೃತ್ಯ ಪ್ರದರ್ಶನಗಳ ಮೂಲಕ ಪೋಷಕರು, ಶಿಕ್ಷಕರ ಮನಸೂರೆಗೊಂಡ ಮಕ್ಕಳ ದಸರಾ ಸಡಗರ–ಸಂಭ್ರಮದೊಂದಿಗೆ ಸಂಪನ್ನಗೊಂಡಿತು. ಮೈಸೂರಿನ ಕರ್ನಾಟಕ ಕಲಾಮಂದಿರದಲ್ಲಿ ನಾಡಹಬ್ಬ ಮೈಸೂರು ದಸರಾ ಮಹೋತ್ಸವ–2025ರ ಅಂಗವಾಗಿ ಮಹಿಳಾ ಮತ್ತು ಮಕ್ಕಳ ದಸರಾ ಉಪಸಮಿತಿ ವತಿಯಿಂದ ಆಯೋಜಿಸಿದ್ದ 2 ದಿನಗಳ ಮಕ್ಕಳ ದಸರಾದಲ್ಲಿ ವಿವಿಧ ಕಲಾ ಪ್ರಕಾರಗಳ ಪ್ರದರ್ಶನದೊಂದಿಗೆ ತಮ್ಮೊಳಗಿನ ಕೌಶಲತೆಗಳನ್ನು ತೆರೆದಿಟ್ಟ ವಿವಿಧ ಶಾಲಾ ವಿದ್ಯಾರ್ಥಿಗಳು ಕಲಾ ಪ್ರೌಢಿಮೆ ಮೆರೆದರು.

ಗಾಯಕ ಅಮ್ಮರಾಮಚಂದ್ರ ಮತ್ತು ತಂಡ ಗೀತ ಗಾಯನದೊಂದಿಗೆ ಆರಂಭವಾದ ಎರಡನೇ ದಿನದ ಮಕ್ಕಳ ದಸರಾದಲ್ಲಿ ಹೆಚ್.ಡಿ.ಕೋಟೆ ಅನ್ವಯ ಶಾಲೆ, ಸಮರ್ಥನಂ ಬುದ್ಧಿ ವಿಕಲಚೇತನ ಮಕ್ಕಳ ಶಾಲೆ ಹಾಗೂ ಪಿರಿಯಾಪಟ್ಟಣ ಬೈಲುಕುಪ್ಪೆಯ ಚಿಲ್ಡ್ರನ್ ವಿಲೇಜ್ ಮಕ್ಕಳ ಪಾರಂಪರಿಕ ಕಲಾತ್ಮಕ ನೃತ್ಯ ನೆರೆದಿದ್ದವರ ಮನಸೂರೆಗೊಂಡಿತು.

ಹಾಗೆಯೇ ಕೆ.ಆರ್.ನಗರ ಹಂಪಾಪುರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಹುಣಸೂರು ಕರಿಮುದ್ದನಹಳ್ಳಿ ಸರ್ಕಾರಿ ಪ್ರೌಢಶಾಲೆ, ಕೇರ್ಗಳ್ಳಿಯ ಕೆಜಿಬಿವಿ, ಡೆಲ್ಲಿ ಪಬ್ಲಿಕ್ ಶಾಲೆ, ಕೆ.ಆರ್.ನಗರ ಆದರ್ಶ ವಿದ್ಯಾಲಯದ ಮಕ್ಕಳು ಸಾಮೂಹಿಕ ಜಾನಪದ ನೃತ್ಯದ ಮೂಲಕ ನಾಡಿನ ಸಾಂಸ್ಕೃತಿಕ ಪರಂಪರೆಯನ್ನು ಅನಾವರಣಗೊಳಿಸಿದರು.

ಭರತನಾಟ್ಯ ಸೊಬಗು: ವನಿತಾ ಸದನ ಪ್ರೌಢಶಾಲೆ ಹಾಗೂ ಸೋಸಲೆ ಆದರ್ಶ ವಿದ್ಯಾಲಯದ ಮಕ್ಕಳು ಕಲಾ ಪ್ರಕಾರಗಳಲ್ಲಿ ಒಂದಾದ ಭರತನಾಟ್ಯ ಪ್ರದರ್ಶನ ನೀಡಿದರೆ, ನಂಜನಗೂಡು ಜೆಎಸ್‌ಎಸ್ ಶಾಲೆ ಮಕ್ಕಳು ಮಣಿಪುರಿ ನೃತ್ಯದ ಮೂಲಕ ಅಪಾರ ಮೆಚ್ಚುಗೆ ಪಡೆದರು.

ಹಾಗೆಯೇ ಪ್ರಿಜಂ ಅಕಾಡೆಮಿ ಶಾಲಾ ಮಕ್ಕಳ ಸಾಹಸಮಯ ನೃತ್ಯ ರೂಪಕ, ಡಾ.ಬಿ.ಆರ್.ಅಂಬೇಡ್ಕರ್ ಮೆಟ್ರಿಕ್ ನಂತರ ವಿದ್ಯಾರ್ಥಿನಿಯರ ನಿಲಯದ ತಂಡ ಸಮೂಹ ನೃತ್ಯರೂಪಕ ನೋಡುಗರು ಕುಣಿದು ಕುಪ್ಪಳಿಸುವಂತೆ ಮಾಡಿತು. ಬಳಿಕ ಜಾದುಗಾರ ಕಡಬ ಶ್ರೀನಿವಾಸ್, ತಮ್ಮದೇ ಶೈಲಿಯಲ್ಲಿ ಹಾಸ್ಯದ ಮೂಲಕ ನಗಿಸುತ್ತಾ ಕಣ್ ಮುಂದೆಯೇ ಜಾದುಗಳನ್ನು ಮಾಡಿ, ನೆರೆದಿದ್ದವರನ್ನು ನಿಬ್ಬೆರಗಾಗಿಸಿದರು.

ಥಾರ್ ರೋಡ್: ದಿನಬೆಳಗಾದರೆ ಗುಂಡಿ ಬಿದ್ದ ಥಾರ್ ರೋಡ್‌ಗಳಿಂದಾಗುತ್ತಿರುವ ಅಪಘಾತಗಳ ಕುರಿತು ಮನವರಿಕೆ ಜೊತೆಗೆ ಎಚ್ಚರಿಕೆಯಿಂದ ವಾಹನ ಚಲಾಯಿಸುವಂತೆ 'ಥಾರ್ ರೋಡ್' ನಾಟಕ ಪ್ರದರ್ಶನದ ಮೂಲಕ ಅರಿವು ಮೂಡಿಸಿದ ನಂಜನಗೂಡು ಕುಪ್ಪರವಳ್ಳಿ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿಗಳು ಎಲ್ಲರ ಗಮನ ಸೆಳೆದರು.

ಸ್ಮರಣಿಕೆ ವಿತರಣೆ: ಮಕ್ಕಳ ದಸರಾದಲ್ಲಿ ಭಾಗವಹಿಸಿ, ಪ್ರದರ್ಶನ ನೀಡಿದ ಶಾಲಾ ತಂಡಗಳಿಗೆ ಮಹಿಳಾ ಮತ್ತು ಮಕ್ಕಳ ದಸರಾ ಉಪಸಮಿತಿ ವತಿಯಿಂದ ಸ್ಮರಣಿಕೆ ನೀಡಿ ಅಭಿನಂದಿಸಲಾಯಿತು. ಈ ವೇಳೆ ಪ್ರದರ್ಶನ ನೀಡಿದ ಮಕ್ಕಳ ಪೋಷಕರಿಗೂ ಅವಕಾಶ ಮಾಡಿಕೊಟ್ಟಿದ್ದು, ವಿಶೇಷವಾಗಿತ್ತು.

ಶ್ರೀರಂಗಪಟ್ಟಣ ದಸರಾಕ್ಕೆ ಮಹೇಂದ್ರನೇ ನಾಯಕ

ಕಾವೇರಿ, ಲಕ್ಷ್ಮಿ ಸಾಥ್

ಮೈಸೂರು, ಸೆ.24(ಎಂಟಿವೈ)– ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣದಲ್ಲಿ ಸೆ.25ರಂದು ನಡೆಯಲಿರುವ ದಸರಾ ಮಹೋತ್ಸವದಲ್ಲಿ ಸತತ ನಾಲ್ಕನೇ ಬಾರಿಗೆ ಮಹೇಂದ್ರ ಆನೆ ಅಂಬಾರಿ ಹೊರಲಿದ್ದು, ಅದಕ್ಕೆ ಕುಮ್ಕಿ ಆನೆಗಳಾದ ಕಾವೇರಿ ಮತ್ತು ಲಕ್ಷ್ಮೀ ಸಾಥ್ ನೀಡಲಿವೆ.

ಈ ಕುರಿತು ಡಿಸಿಎಫ್ ಡಾ.ಐ.ಬಿ.ಪ್ರಭುಗೌಡ ಪತ್ರಕರ್ತರಿಗೆ ಮಾಹಿತಿ ನೀಡಿದ್ದು, ಶ್ರೀರಂಗಪಟ್ಟಣ ದಸರಾ ಮಹೋತ್ಸವಕ್ಕೆ ಮೂರು ಆನೆಗಳನ್ನು ಕಳುಹಿಸಿಕೊಡಲು ನಿರ್ಧರಿಸಲಾಗಿದೆ. ಮುಂದಿನ ಗುರುವಾರ ಶ್ರೀರಂಗಪಟ್ಟಣದಲ್ಲಿ ದಸರಾ ನಡೆಯಲಿದೆ. ಹಾಗಾಗಿ ಈ ಬಾರಿಯೂ ಶ್ರೀರಂಗಪಟ್ಟಣದಲ್ಲಿ ಅಂಬಾರಿ ಹೊರಲು ಮಹೇಂದ್ರನನ್ನು ಆಯ್ಕೆ ಮಾಡಲಾಗಿದ್ದು, ಅದರೊಂದಿಗೆ ಕಾವೇರಿ ಮತ್ತು ಲಕ್ಷ್ಮಿಯನ್ನು ಕುಮ್ಕಿ ಆನೆಗಳಾಗಿ ಕಳುಹಿಸಿಕೊಡಲಾಗುತ್ತಿದೆ. ಬುಧವಾರ(ಸೆ.24) ಸಂಜೆ ಈ ಮೂರು ಆನೆಗಳನ್ನು ಅರಮನೆ ಆವರಣದ ಬಿಡಾರದಿಂದ ಲಾರಿಯಲ್ಲಿ ಶ್ರೀರಂಗಪಟ್ಟಣಕ್ಕೆ ಕಳುಹಿಸಲಾಗಿದೆ. ಸೆ.25 ರಂದು ಅಲ್ಲಿನ ದಸರಾ ಮಹೋತ್ಸವದಲ್ಲಿ ಪಾಲ್ಗೊಂಡ ಬಳಿಕ ಸಂಜೆ ವಾಪಸ್ ಮೈಸೂರು ಅರಮನೆ ಆವರಣಕ್ಕೆ ವಾಪಸ್ಸಾಗಲಿವೆ ಎಂದು ತಿಳಿಸಿದರು.

ಎರಡು ದಿನ ಕಾಲಾವಕಾಶ ಕೇಳಿದ್ದಾರೆ: ದಸರಾ ಆನೆಗಳ ಮುಂದೆ ಯುವತಿಯೊಬ್ಬಳು ಫೋಟೋ ಶೂಟ್ ಹಾಗೂ ರೀಲ್ಸ್ ಮಾಡಿರುವ ಸಂಬಂಧ ಯುವತಿಗೆ ಈಗಾಗಲೇ ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ನೀಡಲಾಗಿದೆ. ವಿಚಾರಣೆಗೆ ಹಾಜರಾಗಲು ಎರಡು ದಿನ ಕಾಲಾವಕಾಶ ಕೇಳಿದ್ದಾರೆ. ಅವರು ವಿಚಾರಣೆಗೆ ಬಂದಾಗ ಫೋಟೊ ಶೂಟ್‌ಗೆ ಅನುಮತಿ ಕೊಟ್ಟಿದ್ದು ಯಾರು, ಯಾರ‍್ಯಾರು ಬಂದಿದ್ದರು ಮುಂತಾದ ಮಾಹಿತಿ ಪಡೆಯಲಾಗುತ್ತದೆ. ಆ ಬಳಿಕ ನಿಯಮಾನುಸಾರ ದಂಡ ವಿಧಿಸಲಾಗುತ್ತದೆ ಎಂದರು.



ಮಹೇಂದ್ರ

ಸಂಜೆ ವೇಳೆ ಆನೆ ತಾಲೀಮು ದೊಡ್ಡ ಸವಾಲು: ದಸರಾ ಆರಂಭವಾಗಿದ್ದು, ದೀಪಾಲಂಕಾರ ನೋಡಲು ಹೆಚ್ಚಿನ ಜನ ಮೈಸೂರಿಗೆ ಬರುತ್ತಿದ್ದಾರೆ. ದಸರಾ ಆನೆ ನೋಡಲು ಬರುವವರ ಸಂಖ್ಯೆ ಹೆಚ್ಚಾಗುತ್ತಿದೆ. ಜಂಬೂ ಸವಾರಿಗೆ ಗಜಪಡೆಯನ್ನು ಸಜ್ಜುಗೊಳಿಸಲು ದೀಪಾಲಂಕಾರದ ನಡುವೆ ತಾಲೀಮಿಗೆ ಕರೆದೊಯ್ಯಬೇಕಾಗುತ್ತದೆ. ಆಗ ಜನ ರಸ್ತೆ ಬದಿ ಹೆಚ್ಚು ಸೇರಬಾರದು. ನಮಗೆ ಆನೆಗಳ ರಕ್ಷಣೆಯೊಂದಿಗೆ ಜನರ ರಕ್ಷಣೆಯೂ ಮುಖ್ಯ. ಆ ಕಾರಣದಿಂದ ಆನೆಗಳು ಬರುವಾಗ ಕಿರುಚುವುದನ್ನು ಮಾಡಬಾರದು. ದೂರದಿಂದ ನಿಂತುಕೊಂಡೇ ನೋಡಲಿ, ಹತ್ತಿರ ಬರಬಾರದು ಎಂದು ಮನವಿ ಮಾಡಿದರು.

ಇನ್ನೊಂದು ಬಾರಿ ಮಾತ್ರ ಭಾರ ಹೊರುವ ತಾಲೀಮು: ಸೋಮವಾರ(ಸೆ.22) ಸಂಜೆ ಪ್ರಶಾಂತನಿಗೆ ನಡೆಸಿದ ಮರದ ಅಂಬಾರಿ ಮತ್ತು ಭಾರ ಹೊರುವ ತಾಲೀಮನ್ನು ನೋಡಲು ಹೆಚ್ಚು ಜನ ಸೇರಿದ್ದರು. ಅಲ್ಲದೆ, ಟ್ರಾಫಿಕ್ ಜಾಮ್ ಉಂಟಾಗಿ, ಆನೆಗಳನ್ನು ಸುರಕ್ಷಿತವಾಗಿ ಅರಮನೆಗೆ ಕರೆದೊಯ್ಯುವುದು ಸವಾಲಾಗಿತ್ತು. ಈ ಹಿನ್ನೆಲೆಯಲ್ಲಿ ಇನ್ನು ಒಂದು ದಿನ ಮಾತ್ರ ಭಾರ ಹೊರಿಸುವ ತಾಲೀಮು ನಡೆಸಲಾಗುತ್ತದೆ ಎಂದು ಸ್ಪಷ್ಟಪಡಿಸಿದರು.

ದಸರಾ ಸಿಎಂ ಕಪ್ ಪಂದ್ಯಾವಳಿ

ಎರಡನೇ ದಿನವೂ ಓಟದಲ್ಲಿ ಶ್ರೇಯಾ ರಾಜೇಶ್, ಆರ್.ಜಿ.ದೀಕ್ಷಿತಾ ಎಂ.ಎಸ್.ಹರ್ಷಿತ್, ಶ್ರಾವಣಿ, ಪ್ರಣತಿ, ಪ್ರಜ್ವಲ್ ಎಂ.ಶೆಟ್ಟಿ ದಾಖಲೆ



800 ಮೀಟರ್ ಓಟದಲ್ಲಿ ಹೊಸ ದಾಖಲೆ ಬರೆದ ಮೈಸೂರಿನ ರೇಖಾ ಬಸಪ್ಪ(ಚೆಸ್ಟ್ ನಂ.327) ಮೊದಲ ಸ್ಥಾನದಲ್ಲಿ ಮುನ್ನುಗ್ಗುತ್ತಿರುವುದು.

ಮೈಸೂರು, ಸೆ.24(ಎಂಕೆ)– ಮೈಸೂರಿನ ಚಾಮುಂಡಿವಿಹಾರ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ರಾಜ್ಯಮಟ್ಟದ ದಸರಾ ಸಿಎಂ ಕಪ್ ಪಂದ್ಯಾವಳಿ(ದಸರಾ ಕ್ರೀಡಾಕೂಟ)ಯ ಎರಡನೇ ದಿನ ಐದು ದಾಖಲೆಗಳು ನಿರ್ಮಾಣವಾಗಿವೆ.

ಮಹಿಳೆಯರ ವಿಭಾಗದ 100 ಮೀಟರ್ ಹರ್ಡಲ್ಸ್ ಓಟದಲ್ಲಿ ಬೆಂಗಳೂರಿನ ಶ್ರೇಯಾ ರಾಜೇಶ್, 14.31 ಸೆಕೆಂಡ್‌ಗಳಲ್ಲಿ ಪೂರ್ಣಗೊಳಿಸುವ ಮೂಲಕ ಹೊಸ ದಾಖಲೆ (ಹಳೆ ದಾಖಲೆ 15.45 ಸೆಕೆಂಡ್) ಬರೆದರೆ, ಮೈಸೂರಿನ ಆರ್.ಜಿ.ದೀಕ್ಷಿತಾ ದ್ವಿತೀಯ ಹಾಗೂ ಅಕ್ಷತಾ ತೃತೀಯ ಸ್ಥಾನ ಪಡೆದರು. ಹಾಗೆಯೇ 100 ಮೀಟರ್ ಓಟದ ಸ್ಪರ್ಧೆಯಲ್ಲಿ ಬೆಂಗಳೂರಿನ ನಿಯೋಲ್, 12 ಸೆಕೆಂಡ್‌ಗಳಲ್ಲಿ ಪೂರ್ಣಗೊಳಿಸಿ ದಾಖಲೆ(ಹಳೆ ದಾಖಲೆ 12.24 ಸೆಕೆಂಡ್) ಸೃಷ್ಟಿಸಿದರೆ, ಮೈಸೂರಿನ ಎಂ.ಮಮತ ದ್ವಿತೀಯ ಹಾಗೂ ಬಳ್ಳಾರಿಯ ವೈಭವಿ ತೃತೀಯ ಸ್ಥಾನ ಪಡೆದರು.

ಪುರುಷರ ವಿಭಾಗದ 800 ಮೀಟರ್ ಓಟದ ಸ್ಪರ್ಧೆಯಲ್ಲಿ ಬೆಂಗಳೂರು ಗ್ರಾಮಾಂತರದ ಎಂ.ಎಸ್.ಹರ್ಷಿತ್, 1.50 ನಿಮಿಷದಲ್ಲಿ ಗುರಿ ತಲುಪುವ ಮೂಲಕ ಹೊಸ ದಾಖಲೆ ಬರೆದರೆ, ಬೆಂಗಳೂರಿನ ಎಸ್.ಕಮಲಕಣ್ಣನ್ ದ್ವಿತೀಯ, ಹೆಚ್.ವಿ.ಚಿಂತನ ತೃತೀಯ ಸ್ಥಾನ ಪಡೆದರು. ಮಹಿಳೆಯರ ವಿಭಾಗದ 800 ಮೀಟರ್ ಓಟದ ಸ್ಪರ್ಧೆಯಲ್ಲಿ ಮೈಸೂರಿನ ರೇಖಾ ಬಸಪ್ಪ, 2.15 ನಿಮಿಷದಲ್ಲಿ ಗುರಿಮುಟ್ಟಿ ನೂತನ ದಾಖಲೆ ಬರೆದರೆ, ಬೆಳಗಾಂನ ಶಿಲ್ಪ ಹೊಸಮನಿ ದ್ವಿತೀಯ ಹಾಗೂ ಅಕ್ಷರ ಮಜುಕರ್ ತೃತೀಯ ಸ್ಥಾನ ಪಡೆದರು.

ಮಹಿಳೆಯರ ವಿಭಾಗದ 400 ಮೀಟರ್ ಓಟದಲ್ಲಿ ಮೈಸೂರಿನ ಬಿ.ಶ್ರಾವಣಿ ಪ್ರಥಮ, ರೇಖಾ ಬಸಪ್ಪ ದ್ವಿತೀಯ, ಬೆಳಗಾವಿ ಮೇಘಾ ತೃತೀಯ ಸ್ಥಾನ ಪಡೆದರೆ, ಪುರುಷರ ವಿಭಾಗದ 110 ಮೀಟರ್ ಹರ್ಡಲ್ಸ್ ಓಟದಲ್ಲಿ ಬೆಳಗಾವಿಯ ಲಬ್ಬೈಕ್ ನಲ್ಬಂದ್ ಪ್ರಥಮ, ಬೆಂಗಳೂರಿನ ರಾಜನ್ ಅಪ್ಪಾ ಪಾಟೀಲ್ ದ್ವಿತೀಯ ಹಾಗೂ ಮೈಸೂರಿನ ಹೆಚ್.ಎಂ.ಹರ್ಷಿತ್ ತೃತೀಯ ಸ್ಥಾನ ಪಡೆದರು.

ಮಹಿಳೆಯರ ವಿಭಾಗದ 3000 ಮೀಟರ್ ಓಟದಲ್ಲಿ ಬೆಂಗಳೂರು ಗ್ರಾಮಾಂತರದ ಪ್ರಣತಿ ಪ್ರಥಮ, ಮೈಸೂರಿನ ಪ್ರಣಮ್ಯ ದ್ವಿತೀಯ ಹಾಗೂ ಬೆಂಗಳೂರು ಗ್ರಾಮಾಂತರದ ಮಹದೇವಿ ತೃತೀಯ ಸ್ಥಾನ ಪಡೆದರೆ, ಶಾಟ್‌ಪುಟ್‌ನಲ್ಲಿ ಬೆಂಗಳೂರಿನ ನಿವೇತಾ ಪ್ರಥಮ, ಎಂ.ರೆಡ್ಡಿ ಸಂಜನ ದ್ವಿತೀಯ ಹಾಗೂ ಮೈಸೂರಿನ ಬಿ.ಸುಷ್ಮಾ ತೃತೀಯ ಸ್ಥಾನ ಪಡೆದರು.

ಪುರುಷರ ಶಾಟ್‌ಪುಟ್‌ನಲ್ಲಿ ಮೈಸೂರಿನ ಪ್ರಜ್ವಲ್ ಎಂ.ಶೆಟ್ಟಿ ಪ್ರಥಮ, ಬೆಳಗಾವಿ ಗಣೇಶ್ ದ್ವಿತೀಯ ಹಾಗೂ ಬೆಂಗಳೂರಿನ ಅಜಯ್ ತೃತೀಯ ಸ್ಥಾನ ಪಡೆದರೆ, ಲಾಂಗ್‌ಜಂಪ್‌ನಲ್ಲಿ ಮೈಸೂರಿನ ಶ್ರೀದೇವಿಕಾ ಶೆಟ್ಟಿ ಪ್ರಥಮ, ಐಶ್ವರ್ಯ ದ್ವಿತೀಯ ಹಾಗೂ ಬೆಂಗಳೂರಿನ ಜಿ.ಮೋನಿಕಾ ತೃತೀಯ ಸ್ಥಾನ ಪಡೆದು ಸಂಭ್ರಮಿಸಿದರು.



ಲಾಂಗ್‌ಜಂಪ್‌ನಲ್ಲಿ ರೆಕಾರ್ಡ್ ಬರೆದ ಮೈಸೂರಿನ ಶ್ರೀದೇವಿಕಾ ಶೆಟ್ಟಿ ಜಿಗಿಯುತ್ತಿರುವುದು.

ಏರ್ ಶೋ ತಾಲೀಮಿಗೂ ಮುನ್ನವೇ 'ಸಾರಂಗ್' ರೋಮಾಂಚನಕಾರಿ ಪ್ರದರ್ಶನ

- ಬನ್ನಿಮಂಟಪದ ಪಂಜಿನ ಕವಾಯತು ಮೈದಾನದಲ್ಲಿ ಐದು ಹೆಲಿಕಾಪ್ಟರ್ ಸಾಹಸ ಪ್ರದರ್ಶನ
- ವಿವಿಧ ಫಾರ್ಮೆಟ್‌ನಲ್ಲಿ ಮಿಂಚಿನ ಸಂಚಾರ
- ಇಂದು ಸಂಜೆ 4 ಗಂಟೆಗೆ ಏರ್‌ಶೋ ರಿಹರ್ಸಲ್, ಸೆ.27ರಂದು ಏರ್ ಶೋ



ಮೈಸೂರು, ಸೆ.24(ಎಂಟಿವೈ)– ದಸರಾ ಮಹೋತ್ಸವದ ಅಂಗವಾಗಿ ಸೆ.27ರಂದು ನಡೆಯುವ ವೈಮಾನಿಕ ಪ್ರದರ್ಶನ(ಏರ್ ಶೋ)ದ ರಿಹರ್ಸಲ್(ತಾಲೀಮು) ಸೆ.25ರ ಸಂಜೆ 4 ಗಂಟೆಗೆ ನಡೆಯಲಿದ್ದು, ಮಂಗಳವಾರ ಭಾರತೀಯ ವಾಯುಸೇನೆಯ 'ಸಾರಂಗ್' ತಂಡದ ಐದು ಹೆಲಿಕಾಪ್ಟರ್‌ಗಳು ರೋಮಾಂಚನಕಾರಿ ಸಾಹಸ ಪ್ರದರ್ಶನ ನಡೆಸಿದವು.

ಈ ಸಾಲಿನ ದಸರಾ ಮಹೋತ್ಸವದಲ್ಲಿ ವೈಮಾನಿಕ ಪ್ರದರ್ಶನ ನೀಡಲು ಈಗಾಗಲೇ ವಾಯುಸೇನೆಯ ಒಂದು ತಂಡ ಹೆಲಿಕಾಪ್ಟರ್‌ವೊಂದರಲ್ಲಿ ವೈಮಾನಿಕ ಸಮೀಕ್ಷೆ ನಡೆಸಿದೆ. ಸೆ.27 ರಂದು ಏರ್ ಶೋ ನಡೆಯಲಿದ್ದು, ಅದಕ್ಕಾಗಿ ಸೆ.25ರಂದು ಸಂಜೆ 4 ಗಂಟೆಗೆ ಪೂರ್ವಾಭ್ಯಾಸ ಪ್ರದರ್ಶನ (ರಿಹರ್ಸಲ್)ಕ್ಕೆ ದಿನಾಂಕ ನಿಗದಿ ಮಾಡಲಾಗಿದೆ.

ಈ ಮಧ್ಯೆ ಇಂದು ಮಧ್ಯಾಹ್ನ 4 ಗಂಟೆಗೆ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದ ಬಳಿ ಆಗಸದಲ್ಲಿ ಒಮ್ಮೆಲೆ 'ಸಾರಂಗ್' ತಂಡದ ಐದು ಹೆಲಿಕಾಪ್ಟರ್‌ಗಳು ಪ್ರತ್ಯಕ್ಷವಾಗಿ ಹಾರಾಟ ಆರಂಭಿಸಿದವು. ದಿಢೀರ್ ಐದು ಹೆಲಿಕಾಪ್ಟರ್‌ಗಳು ಪ್ರತ್ಯಕ್ಷವಾಗಿದ್ದನ್ನು ಗಮನಿಸಿದ ಸ್ಥಳೀಯರು ಮನೆಯಿಂದ ಹೊರಗೆ ಬಂದು ಸಾಹಸ ಕಣ್ತುಂಬಿಕೊಂಡರು. ಕೆಲವರು ಕಟ್ಟಡದ ತಾರಸಿ ಮೇಲೆ ನಿಂತು ಸಾರಂಗ್ ತಂಡದ ರೋಮಾಂಚನಕಾರಿ ಪ್ರದರ್ಶನವನ್ನು ವೀಕ್ಷಿಸಿದರು.

ಆಗಸದಲ್ಲಿ ಅರ್ಧಗಂಟೆಗೂ ಹೆಚ್ಚು ಸಮಯ ವಿವಿಧ ಫಾರ್ಮೆಷನ್‌ನಲ್ಲಿ ಹಾರಾಟ ನಡೆಸಿದವು. ಅದರಲ್ಲೂ ವಿರುದ್ಧ ದಿಕ್ಕಿನಲ್ಲಿ ಪರಸ್ಪರ ಮುಖಾಮುಖಿಯಾಗಿ ಕ್ಷಣದಲ್ಲಿ ದಿಕ್ಕು ಬದಲಿಸುವ ಮೂಲಕ ನೋಡುಗರನ್ನು ತುದಿಗಾಲಿನಲ್ಲಿ ನಿಲ್ಲುವಂತೆ ಮಾಡಿದವು. ಅಲ್ಲದೆ, ಹೃದಯ ಚಿಹ್ನೆಯನ್ನು ಹೊಗೆ ಮೂಲಕ ಆಗಸದಲ್ಲಿ ಮೂಡಿಸಿ ಗಮನ ಸೆಳೆದವು. ಒಮ್ಮೆ ಐದು ಹೆಲಿಕಾಪ್ಟರ್‌ಗಳು ಒಟ್ಟಿಗೆ ಬಂದು ಎರಡು ಹೆಲಿಕಾಪ್ಟರ್‌ಗಳು ರಾಕೆಟ್‌ನಂತೆ ಮೇಲ್ಮುಖವಾಗಿ ಹಾರಾಟ ನಡೆಸಿದರೆ, ಹಿಂದಿನ ಎರಡು ಹೆಲಿಕಾಪ್ಟರ್‌ಗಳು ತಿರುವು ಪಡೆದುಕೊಂಡವು. ಮತ್ತೊಂದು ಪಲ್ಟಿ ಹೊಡೆದಂತೆ ತಿರುಗಿ ಮತ್ತೆ ಮುಂದೆ ಸಾಗಿತು.

ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಲ್ಯಾಂಡ್: ಪ್ರದರ್ಶನ ಬಳಿಕ ಸಾರಂಗ್ ತಂಡ ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಲ್ಯಾಂಡ್ ಆದವು. ಸಾರಂಗ್ ತಂಡದ ಸಿಬ್ಬಂದಿ ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಏರ್‌ಫೋರ್ಸ್ ಸೆಲೆಕ್ಷನ್ ಬೋರ್ಡ್‌ಗೆ ಬಂದು ವೈಮಾನಿಕ ಪ್ರದರ್ಶನ ಕುರಿತ ಸಭೆ ನಡೆಸಿದರು.

ಸೆ.25ರಂದು ರಿಹರ್ಸಲ್: ಬನ್ನಿಮಂಟಪದ ಪಂಜಿನ ಕವಾಯತು ಮೈದಾನದಲ್ಲಿ ಸೆ.25ರಂದು ಸಂಜೆ 4 ಗಂಟೆಗೆ ವೈಮಾನಿಕ ಪ್ರದರ್ಶನದ ಪೂರ್ವಾಭ್ಯಾಸ(ರಿಹರ್ಸಲ್) ಪ್ರದರ್ಶನ ನಡೆಯಲಿದೆ. ಪಾಸ್ ಹೊಂದಿರುವವರಿಗೆ ಮಾತ್ರ ಅವಕಾಶವಿದೆ.

ಸೆ.27ರಂದು ಸೂರ್ಯ ಕಿರಣ್ ಚಮತ್ಕಾರ: ದಸರಾ ಏರ್ ಶೋ ಸೆ.27 ರಂದು ನಡೆಯಲಿದ್ದು, ಆ ವೈಮಾನಿಕ ಪ್ರದರ್ಶನದಲ್ಲಿ ಸಾರಂಗ್ ತಂಡದ ಪ್ರದರ್ಶನದೊಂದಿಗೆ ಭಾರತೀಯ ಸೇನೆಯ ಸೂರ್ಯಕಿರಣ್ ವಿಮಾನದ ಚಮತ್ಕಾರ ನೋಡಬಹುದಾಗಿದೆ. ಮಿಂಚಿನ ವೇಗದಲ್ಲಿ ಮೈನವಿರೇಳಿಸುವ ಪ್ರದರ್ಶನ ನೀಡುವ ಸೂರ್ಯಕಿರಣ್ ನೋಡುಗರ ಎದೆ ಬಡಿತ ಹೆಚ್ಚಿಸಲಿದೆ.



ಮೈಸೂರಿನ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದ ಬಳಿ ಆಗಸದಲ್ಲಿ ಭಾರತೀಯ ವಾಯುಸೇನೆಯ 'ಸಾರಂಗ್' ತಂಡದ ಹೆಲಿಕಾಪ್ಟರ್‌ಗಳು ರೋಮಾಂಚನಕಾರಿ ಪ್ರದರ್ಶನ ನೀಡಿದವು.



ದಸರಾ ಉದ್ಘಾಟನೆ ವಿಷಯದಲ್ಲಿ ದಲಿತ ಮಹಿಳೆಗೆ ಅಪಮಾನ ಮಾಡಿದವರ ಗಡಿಪಾರಿಗೆ ಆಗ್ರಹ

ಮೈಸೂರು,ಸೆ.24(ಜಿಎ)–ದಲಿತ ಮಹಿಳೆಯರನ್ನು ದಸರಾ ಉದ್ಘಾಟನೆ ವಿಷಯದಲ್ಲಿ ಅಪಮಾನಿಸಿದ್ದಾರೆ. ಇವರನ್ನು ಸರ್ಕಾರ ಕೂಡಲೇ ಗಡಿಪಾರು ಮಾಡಬೇಕೆಂದು ಮೈಸೂರು ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಸಮಿತಿ ಪರಿಶಿಷ್ಟ ಜಾತಿ ವಿಭಾಗದ ಮಾಧ್ಯಮ ವಕ್ತಾರ ಎಂ.ನಂಜಪ್ಪ ಆಗ್ರಹಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದಸರಾ ಹಬ್ಬ ಮನೆ ಮನಗಳಲ್ಲಿ ಸಂಭ್ರಮ ಮೂಡಿಸುವಂತದ್ದಾಗಿದೆ. ಆದರೆ ಯತ್ನಾಳ್ ಒಂದು ಸಂದರ್ಭದಲ್ಲಿ ಮಾತನಾಡುವಾಗ ಕೇವಲ ಸನಾತನ ಧರ್ಮದ ಪ್ರತಿನಿಧಿ ಉದ್ಘಾಟಿಸಬೇಕು. ದಲಿತ ಮಹಿಳೆ ಸಹಾ ಉದ್ಘಾಟಿಸುವಂತಿಲ್ಲ ಎನ್ನುವ ಮೂಲಕ ಈ ನೆಲದ ಕಾನೂನಿಗೆ ವಿರುದ್ಧವಾಗಿ ಮಾತನಾಡಿದ್ದಾರೆಂದು ಕಿಡಿಕಾರಿದರು. ಇವರು ಜಾತಿ ಜಾತಿಗಳ ನಡುವೆ ಹೆಚ್ಚು ಕಂದಕ ಉಂಟು ಮಾಡುವ ಹೇಳಿಕೆಗಳನ್ನು ನೀಡುತ್ತಿದ್ದಾರೆ. ದಲಿತ ಸಮುದಾಯ ಕುರಿತ ಅವರ ಮಾತು ಇಡೀ ಸಮುದಾಯವನ್ನೇ ಅವಹೇಳನ ಮಾಡುವಂತಿದೆ. ಹೀಗಾಗಿ ಸರ್ಕಾರ ಕೂಡಲೇ ಅವರನ್ನು ಗಡಿಪಾರು ಮಾಡಬೇಕೆಂದು ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ಟಿ.ಜಗದೀಶ್, ರಾಮಸ್ವಾಮಿ, ಸಿದ್ದರಾಜು ಗಾಂಧಿನಗರ ಉಪಸ್ಥಿತರಿದ್ದರು.

ಮೈಸೂರು ಮಾನ್ಸೂನ್ ರೇಸ್

7ನೇ ದಿನ, ಗುರುವಾರ, 25–09–2025

ಇಂದಿನ ರೇಸ್‌ಗೆ ನಮ್ಮ ಆಯ್ಕೆ

ಮೊದಲನೇ ರೇಸ್ ಮಧ್ಯಾಹ್ನ 2.30 ಗಂಟೆಗೆ

I. ಶಿಂಷಾ ಪ್ಲೇಟ್–1600 ಮೀ. ರೇಟೆಡ್ 00 ರಿಂದ 25. ಮ.2.30ಕ್ಕೆ
1 ಡಬಲ್ ಸ್ಕಾಚ್ 2. ಮೈ ವಿಶನರಿ

II. ಶ್ರೀ ಕಂಠೀರವ ನರಸಿಂಹ ರಾಜ ಸ್ಪೋರ್ಟ್ಸ್ ಕ್ಲಬ್ ಟ್ರೋಫಿ ಡಿII–1400 ಮೀ. ರೇಟೆಡ್ 20 ರಿಂದ 45. ಮ.3.00ಕ್ಕೆ
1 ಟೊಟಲಿ ಎಪಿಕ್ 2. ಪೆಟ್ಟೀಸ್ ಚಾಯ್ಸ್

III. ರಂಗ ಫ್ಯಾಮಿಲಿ ಕಪ್–1800 ಮೀ. ರೇಟೆಡ್ 40 ರಿಂದ 65. ಮ.3.30ಕ್ಕೆ
1 ಸ್ಮಾಲ್ ಡೀಮ್ಸ್ 2 ವಿನ್‌ಫೀಲ್ಡ್

IV. ರಾಜಕುಮಾರಿ ಲೀಲಾವತಿ ದೇವಿ ಮೆಮೋರಿಯಲ್ ಟ್ರೋಫಿ–1600 ಮೀ. ರೇಟೆಡ್ 80 ಮತ್ತು ಮೇಲ್ವರ್ಗ. ಮ.4.00ಕ್ಕೆ
1. ರಾಕ್ ಬ್ಯಾಂಕ್ 2. ಮ್ಯಾಗ್ನಟಿಕ್


V. ಶ್ರೀ ಕಂಠೀರವ ನರಸಿಂಹ ರಾಜ ಸ್ಪೋರ್ಟ್ಸ್ ಕ್ಲಬ್ ಟ್ರೋಫಿ ಡಿI–1400 ಮೀ. ರೇಟೆಡ್ 20 ರಿಂದ 45. ಸಂ.4.30ಕ್ಕೆ
1 ನಾಟಿ ಅಫೇರ್ 2. ವಿಂಡ್ ಕ್ಲೇವರ್

VI. ಇಂದ್ರ ಧನುಷ್ ಪ್ಲೇಟ್–1100 ಮೀ. ರೇಟೆಡ್ 20 ರಿಂದ 45. ಮೈಸೂರ್ ಬೇಸ್ಡ್ ಹಾರ್ಸ್. ಸಂ.5.00ಕ್ಕೆ
1 ಜಸ್ಟ್ ಬ್ಲೂ 2 ಕೋಡ್ ಆಫ್ ಹಾನರ್

ದಿನದ ಅತ್ಯುತ್ತಮ	ರಾಕ್ ಬ್ಯಾಂಕ್
ಡಬ್ಬಲ್	ಟೊಟಲಿ ಎಪಿಕ್, ಜಸ್ಟ್ ಬ್ಲೂ
ಜಾಕ್‌ಪಾಟ್	2, 3, 4, 5 ಮತ್ತು 6
ಮಿನಿ ಜಾಕ್‌ಪಾಟ್	3, 4, 5 ಮತ್ತು 6
I ಟ್ರಿಬಲ್	1, 2 ಮತ್ತು 3
II ಟ್ರಿಬಲ್	4, 5 ಮತ್ತು 6
ಎಕ್ಸ್‌ಆಕ್ಟ್	1 ರಿಂದ 6

ಟಿಪ್‌ಸ್ಟರ್ ಪಿಜೆಸಿ

ಗೌರವಪೂರ್ಣ ಶ್ರದ್ಧಾಂಜಲಿ



ಬರಹಗಾರ, ಸರಸ್ವತಿ ಸಮ್ಮಾನ್ ಪ್ರಶಸ್ತಿ ಪುರಸ್ಕೃತ ಮತ್ತು NIE ಸೊಸೈಟಿ ಸದಸ್ಯರಾದ

ಎಸ್. ಎಲ್. ಭೈರಪ್ಪ ಅವರ

ಹಠಾತ್ ನಿಧನದ ಸುದ್ದಿ ತಿಳಿದು ನಮಗೆ ಆಘಾತವಾಗಿದೆ.
ಅವರ ಕುಟುಂಬಕ್ಕೆ ನಷ್ಟವನ್ನು ಭರಿಸಲು ಸರ್ವಶಕ್ತನು ಶಕ್ತಿಯನ್ನು ನೀಡಲಿ ಎಂದು ನಾವು ಪ್ರಾರ್ಥಿಸುತ್ತೇವೆ.

ದುಃಖತಪ್ತರು: ಡಾ.ಎಂ ಎಸ್ ರಂಗನಾಥ್, ಅಧ್ಯಕ್ಷರು
ಮತ್ತು ಆಡಳಿತ ಮಂಡಳಿ NIE ಸೊಸೈಟಿಯ ಸದಸ್ಯರು.

9 ವರ್ಷದ ಸವಿನೆನಪು



ರಾಮು (ರಾಮಪ್ಪ)

ನೀವು ನಮ್ಮನ್ನಗಲಿ ಇಂದಿಗೆ 9 ವರ್ಷ ಕಳೆದರೂ
ಸದಾ ನಿಮ್ಮ ನೆನಪಿನಲ್ಲಿರುವ

ದುಃಖತಪ್ತರು:
ಶ್ರೀಮತಿ ಬೋರಮ್ಮ ಲೇಟ್ ಸಿದ್ದರಾಮಯ್ಯನವರ ಕುಟುಂಬ,
ಅಣ್ಣ, ತಮ್ಮಂದಿರು, ಅಕ್ಕ, ತಂಗಿಯರು ಮತ್ತು ಕುಟುಂಬವರ್ಗದವರು ಮೈಸೂರು



ಹಸಿರು ನಮ್ಮ ಉಸಿರು

ಸಾರ್ವಜನಿಕ ಪ್ರಕಟಣೆ

ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ನಮ್ಮ ಕಕ್ಷಿದಾರರಾದ ಬೆಂಗಳೂರು ದಕ್ಷಿಣ–560070, ಜಯನಗರ, 7ನೇ ಬ್ಲಾಕ್, 10ನೇ ಕ್ರಾಸ್, ಮನೆ ನಂ.610 ರಲ್ಲಿ ವಾಸವಾಗಿರುವ ಶ್ರೀ. ಸಿ.ಚಿಕ್ಕೇಗೌಡ ರವರ ಮಗನಾದ **ಶ್ರೀ. ಸಿ.ಯಶವಂತ್** ರವರು ಷೆಡ್ಯೂಲ್ ಸ್ವತ್ತನ್ನು ಅಂದರೆ, ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ತಳೂರು ಗ್ರಾಮದ ಹಳೆ ಸರ್ವೆ ನಂ.34/1, ಹೊಸ ಸರ್ವೆ ನಂ.34/2 ರ ಒಟ್ಟು ವಿಸ್ತೀರ್ಣ 2 ಎಕರೆ 29 ಗುಂಟೆ ಜಮೀನಿನ ಪೈಕಿ 1 ಎಕರೆ 0–37.08 ಗುಂಟೆ ಜಮೀನು ನ್ಯಾಯಾಲಯದ ಅಂತಿಮ ಡಿಕ್ರಿ ಎಫ್.ಡಿ.ಪಿ. ಸಂಖ್ಯೆ: 100/2017 ರ ಆದೇಶದಂತೆ ಚಿಕ್ಕಮಂಚಮ್ಮ, ಹುಚ್ಚನಾಯಕ, ಜಯಲಕ್ಷ್ಮಮ್ಮ, ಮಣಿಯಮ್ಮ ಮತ್ತು ಸಣ್ಣಮಂಚಮ್ಮ ಉರುಫ್ ಸಣ್ಣಮಂಚಮ್ಮ ವಿ.ಯಲಗಚ್ ರವರಿಗೆ ಹಿಸ್ಸೆ ಬಂದಿದ್ದು, ಅದರಂತೆ ಅವರ ಹೆಸರಿಗೆ ಹೊಸ ಸರ್ವೆ ನಂ.34/5 ರ ವಿಸ್ತೀರ್ಣ 1 ಎಕರೆ 0–37.08 ಗುಂಟೆ ಜಮೀನು ಎಂ.ಆರ್.ಟಿ 68/2022–23 ರಂತೆ ಖಾತೆಯಾಗಿದ್ದು ಸರಿಯಷ್ಟೆ. ಸದರಿ ಷೆಡ್ಯೂಲ್ ಸ್ವತ್ತನ್ನು ನಮ್ಮ ಕಕ್ಷಿದಾರರು ಮೇಲ್ಕಂಡ ಚಿಕ್ಕಮಂಚಮ್ಮ, ಮತ್ತು ಇತರರಿಂದ ದಿನಾಂಕ 12.07.2023 ರಂದು ನೋಂದಾಯಿತ ಕ್ರಯಪತ್ರದ ಮೂಲಕ ಖರೀದಿಸಿ ಅವರ ಮಾಲೀಕತ್ವದಲ್ಲಿರುವ ಸ್ವತ್ತಾಗಿದ್ದು ಸರಿಯಷ್ಟೆ. ಮೇಲ್ಕಂಡ ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ತಳೂರು ಗ್ರಾಮದ ಹಳೆ ಸರ್ವೆ ನಂ.34/1, ಹೊಸ ಸರ್ವೆ ನಂ.34/2 ರ ಒಟ್ಟು ವಿಸ್ತೀರ್ಣ 2 ಎಕರೆ 29 ಗುಂಟೆ ಜಮೀನನ್ನು ಮೈಸೂರು ಸಿಟಿ–570 022, ರಾಮಕೃಷ್ಣನಗರ, ಡಿ.ವಿ.ಸಿ. ಬಡಾವಣೆ, ಉದಯರವಿ ರಸ್ತೆ, ಜಯಭಾರತಿ, ಮನೆ ನಂ.5 ರಲ್ಲಿ ವಾಸವಾಗಿರುವ ಮುದ್ದನಾಯಕ ರವರ ಮಗನಾದ ಎಂ. ಅಪ್ಪಣ್ಣ ಎಂಬುವವರು ಈ ಹಿಂದೆ ಅವರ ಹೆಸರಿಗೆ ಅನ್ಯಕಾಂತ ಮಾಡಿಸಿಕೊಂಡಿದ್ದು, ಸದರಿ ಸ್ವತ್ತಿನ ಪೈಕಿ ನಮ್ಮ ಕಕ್ಷಿದಾರರ ಮೇಲ್ಕಂಡ ಮಾರಾಟಗಾರರಿಗೆ ನ್ಯಾಯಾಲಯದ ಆದೇಶದಂತೆ ಷೆಡ್ಯೂಲ್ ಸ್ವತ್ತು ಹಿಸ್ಸೆ ಬಂದಿದ್ದು ಸರಿಯಷ್ಟೆ. ಸದರಿ ವಿಚಾರವು ಮೇಲ್ಕಂಡ ಎಂ.ಅಪ್ಪಣ್ಣ ರವರಿಗೆ ತಿಳಿದಿದ್ದರೂ ಸಹ ಇತ್ತೀಚೆಗೆ ಎಂ.ಅಪ್ಪಣ್ಣ ರವರು ತಳೂರು ಸರ್ವೆ ನಂ.34/1, ಹೊಸ ಸರ್ವೆ ನಂ.34/2 ರ ಒಟ್ಟು ವಿಸ್ತೀರ್ಣ 2 ಎಕರೆ 29 ಗುಂಟೆ ಜಮೀನನ್ನು ಅಕ್ರಮವಾಗಿ ಜಂಟಿ ಅಭಿವೃದ್ಧಿ ಕರಾರು ಪತ್ರವನ್ನು ಮಾಡುತ್ತಿರುವ ವಿಚಾರವು ನಮ್ಮ ಕಕ್ಷಿದಾರರ ಗಮನಕ್ಕೆ ಬಂದಿರುತ್ತದೆ. ಸಾರ್ವಜನಿಕರು ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಎಂ.ಅಪ್ಪಣ್ಣ ರವರಿಂದ ಯಾವುದೇ ಜಂಟಿ ಅಭಿವೃದ್ಧಿ ಕರಾರು ಅಥವಾ ಇನ್ನಿತರ ಯಾವುದೇ ವ್ಯವಹಾರ ಮಾಡಬಾರದೆಂದು ತಿಳಿಯಪಡಿಸುತ್ತೇವೆ. ಒಂದು ವೇಳೆ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಎಂ.ಅಪ್ಪಣ್ಣ ರವರೊಂದಿಗೆ ಯಾವುದೇ ವ್ಯಕ್ತಿಗಳು ಜಂಟಿ ಅಭಿವೃದ್ಧಿ ಕರಾರು ಹಾಗೂ ಇನ್ನಿತರೆ ವ್ಯವಹಾರಗಳನ್ನು ಮಾಡಿದಂತಹ ಪಕ್ಷದಲ್ಲಿ ಅದು ನಮ್ಮ ಕಕ್ಷಿದಾರರ ಷೆಡ್ಯೂಲ್ ಸ್ವತ್ತಿಗೆ ಬದ್ಧಪಡಿಸುವುದಿಲ್ಲವೆಂದು ಈ ಮೂಲಕ ಸಾರ್ವಜನಿಕರಲ್ಲಿ ತಿಳಿಯಪಡಿಸುತ್ತೇವೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ತಾಲ್ಲೂಕು, ಜಯಪುರ ಹೋಬಳಿ ತಳೂರು ಗ್ರಾಮದ ಸರ್ವೆ ಹಳೆ ಸರ್ವೆ ನಂ. 34/2 ರ ಒಟ್ಟು ವಿಸ್ತೀರ್ಣ 2 ಎಕರೆ 29 ಕುಂಟೆ ಜಮೀನಿನ ಪೈಕಿ ಹೊಸ ಸರ್ವೆ ನಂ. 34/5 ರ ವಿಸ್ತೀರ್ಣ 1 ಎಕರೆ 0–37.08 ಗುಂಟೆ ಜಮೀನು ಇದಕ್ಕೆ ಚೆಕ್ಕುಬಂದಿ:
ಪೂರ್ವಕ್ಕೆ : ಲಾ.ಹಿ.ನಂ.3 (ಕುಳ್ಳದಾಸಯ್ಯನ ತಿಮ್ಮ ದಾಸಯ್ಯ ರವರಿಗೆ ಸೇರಿದ ಸ್ವತ್ತು)
ಪಶ್ಚಿಮಕ್ಕೆ : ಲಾ.ಸ.ನಂ. 3 (ಅಪ್ಪಣ್ಣ ಮತ್ತು ಜೂಲನಾಯಕ ರವರಿಗೆ ಸೇರಿದ ಸ್ವತ್ತು,
ಉತ್ತರಕ್ಕೆ : ಉದ್ಬೂರು ಗ್ರಾಮದ ಗಡಿ,
ದಕ್ಷಿಣಕ್ಕೆ : ಬ್ಲಾಕ್ ನಂಬರ್ 1 ಸರ್ವೆ ನಂಬರ್ 34 / 2 ಸ್ವತ್ತು.

ಸಹಿ/– **ಎಂ.ವಿ. ಜಯಕುಮಾರ್** ಬಿ.ಎಸ್ಸಿ., ಎಲ್.ಎಲ್.ಬಿ.. ವಕೀಲರು
ಕಛೇರಿ ವಿಳಾಸ: ನಂ.2099, 1ನೇ ಮಹಡಿ, ಬಸವೇಶ್ವರ ರಸ್ತೆ,
101 ಗಣಪತಿ ದೇವಸ್ಥಾನದ ಹಿಂಭಾಗ, ಕೆ.ಆರ್.ಮೊಹಲ್ಲಾ,
ಮೈಸೂರು–04, ಮೊ.ನಂ.: 93433 1618
ಮೈಸೂರು
ದಿನಾಂಕ : **22.09.2025**

ಸಾರ್ವಜನಿಕ ತಿಳುವಳಿಕೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ನಮ್ಮ ಕಕ್ಷಿದಾರರು, ಇದೇ ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಬರಡನಪುರ ಗ್ರಾಮದಲ್ಲಿ ವಾಸವಾಗಿರುವ ಶ್ರೀ.ಮಾದಪ್ಪ ರವರ ಧರ್ಮಪತ್ನಿ ಶ್ರೀಮತಿ.ಶಿವಮ್ಮ ರವರ ಸಂಪೂರ್ಣ ಸ್ವಾಧೀನಾನುಭವ ಹಾಗೂ ಮಾಲೀಕತ್ವಕ್ಕೆ ಒಳಪಟ್ಟ ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಬರಡನಪುರ ಗ್ರಾಮ, ಸರ್ವೆ ನಂ.**112RS/3** ಇದರ ಒಟ್ಟು ವಿಸ್ತೀರ್ಣ **0.03** ಗುಂಟೆ ಜಮೀನು ಇದರ ಪೂರ್ವಕ್ಕೆ : ಸರ್ವೆ ನಂ. **115/RS10** (ಮುರುಡಪ್ಪ ರವರ ಜಮೀನು) ಪಶ್ಚಿಮಕ್ಕೆ : ಸರ್ವೆ ನಂ.**112/RS4** (ಚಂದ್ರು @ ಚಂದ್ರಪ್ಪ ನವರ ಜಮೀನು), ಉತ್ತರಕ್ಕೆ: ಸರ್ವೆ ನಂ.**112/RS1** (ಬಸವಣ್ಣನವರ ಜಮೀನು) ಹಾಗೂ ದಕ್ಷಿಣಕ್ಕೆ: ಸರ್ವೆ ನಂ. **12/ RS2** (ಸುವರ್ಣಮ್ಮ ನವರ ಜಮೀನು) ಈ ಮಧ್ಯೆ ಇರುವ ಮೇಲ್ಕಂಡ ಜಮೀನನ್ನು ನಮ್ಮ ಕಕ್ಷಿದಾರರು ನೋಂದಾಯಿತ ಕ್ರಯ ಪತ್ರದ ಮೂಲಕ ಕ್ರಯಕ್ಕೆ ಪಡೆಯಲು ಇಚ್ಛಿಸಿರುವುದು ಸರಿಯಷ್ಟೆ. ಈ ಮೇಲ್ಕಂಡ ಸ್ವತ್ತಿಗೆ ಸಂಬಂಧಪಟ್ಟಂತೆ ಯಾವುದಾದರು ತಂಟೆ ತಕರಾರುಗಳು ಹಾಗೂ ಕ್ಲೇಮ್ ಗಳಿದ್ದ ಪಕ್ಷದಲ್ಲಿ ಈ ಸಾರ್ವಜನಿಕ ತಿಳುವಳಿಕೆಯು ಪ್ರಕಟಣೆಯಾದ 7 ದಿನಗಳ ಒಳಗಾಗಿ ನಮ್ಮನ್ನು ಈ ಕೆಳಕಂಡ ವಿಳಾಸದ ಕಛೇರಿಯಲ್ಲಿ ಸೂಕ್ತ ದಾಖಲೆಗಳ ಸಮೇತವಾಗಿ ಖುದ್ದಾಗಿ ಅಥವಾ ಲಿಖಿತ ರೂಪದಲ್ಲಿ ತಮ್ಮ ತಕರಾರುಗಳನ್ನು ಸಲ್ಲಿಸತಕ್ಕದ್ದು, ಹಾಗೊಂದು ವೇಳೆ ಯಾವುದೇ ತಂಟೆ ತಕರಾರುಗಳು ಸದರಿ 7 ದಿನಗಳ ಒಳಗಾಗಿ ನಮ್ಮನ್ನು ತಲುಪದಿದ್ದ ಪಕ್ಷದಲ್ಲಿ, ತಮ್ಮ ಕಕ್ಷಿದಾರರು ಮೇಲೆ ಹೇಳಿದ ಸ್ವತ್ತನ್ನು ಖರೀದಿಸಲು ಸಂಪೂರ್ಣವಾಗಿ ಕಾನೂನು ಸಮ್ಮತವಾಗಿ ಹಕ್ಕುಳ್ಳವರಾಗಿರುತ್ತಾರೆ ಎಂದು ಈ ಮೂಲಕ ತಿಳಿಯಪಡಿಸಲಾಗಿರುತ್ತದೆ.

Sd/- N. Mahadevaswamy
B.A.L.,LLB., Advocate/Leagal Advisor,No, 376/A, 12th cross, Ramakrishna Nagara "G" block, Mysore-22. Mobile-9448038689
ದಿನಾಂಕ: 24–09–2025, ಸ್ಥಳ: ಮೈಸೂರು

ಸಾರ್ವಜನಿಕ ತಿಳುವಳಿಕೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ನಮ್ಮ ಕಕ್ಷಿದಾರರು. ಇದೇ ಮೈಸೂರು ಜಿಲ್ಲೆ. ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಬರಡನಪುರ ಗ್ರಾಮದಲ್ಲಿ ವಾಸವಾಗಿರುವ ಲೇಟ್, ಮುರುಡಪ್ಪ ರವರ ಮಗ ಶ್ರೀ.ಚಂದ್ರು @ ಚಂದಪ್ಪ ಹಾಗೂ ಇವರ ಧರ್ಮಪತ್ನಿ ಶ್ರೀಮತಿ.ರಾಜಮ್ಮ ಇವರುಗಳ ಸಂಪೂರ್ಣ ಸ್ವಾಧೀನಾನುಭವ ಹಾಗೂ ಮಾಲೀಕತ್ವಕ್ಕೆ ಒಳಪಟ್ಟ ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಬರಡನಪುರ ಗ್ರಾಮ, ನರ್ವೆ ನಂ.**112 RS/4** (ಹಳೆ ಸರ್ವೆ ನಂ.**112 RS3**) ಇದರ ಒಟ್ಟು ವಿಸ್ತೀರ್ಣ 0–25 ಗುಂಟೆ ಜಮೀನು ಇದರ ಪೂರ್ವಕ್ಕೆ : ಸರ್ವೆ ನಂ.**112/RS3**, ಪಶ್ಚಿಮಕ್ಕೆ : ಸರ್ವೆ ನಂ.**32/RS1, 32/RS11**, ಉತ್ತರಕ್ಕೆ: ಸರ್ವೆ ನಂ.**112/RS1** ಹಾಗೂ ದಕ್ಷಿಣಕ್ಕೆ: ಸರ್ವೆ ನಂ.**112/RS2** ಈ ಮಧ್ಯೆ ಇರುವ ಮೇಲ್ಕಂಡ ಜಮೀನನ್ನು ನಮ್ಮ ಕಕ್ಷಿ ದಾರರು ನೋಂದಾಯಿತ ಕ್ರಯ ಪತ್ರದ ಮೂಲಕ ಪ್ರಯಕ್ಕೆ ಪಡೆಯಲು ಇಚ್ಛಿಸಿರುವುದು ಸರಿಯಷ್ಟೆ. ಈ ಮೇಲ್ಕಂಡ ಸ್ವತ್ತಿಗೆ ಸಂಬಂಧಪಟ್ಟಂತೆ ಯಾವುದಾದರು ತಂಟೆ ತಕರಾರುಗಳು ಹಾಗೂ ಕ್ಲೈಮ್‌ಗಳಿದ್ದ ಪಕ್ಷದಲ್ಲಿ ಈ ಸಾರ್ವಜನಿಕ ತಿಳುವಳಿಕೆಯು ಪ್ರಕಟಣೆಯಾದ 7 ದಿನಗಳ ಒಳಗಾಗಿ ನಮ್ಮನ್ನು ಈ ಕೆಳಕಂಡ ವಿಳಾಸದ ಕಛೇರಿಯಲ್ಲಿ ಸೂಕ್ತ ದಾಖಲೆಗಳ ಸಮೇತವಾಗಿ ಖುದ್ದಾಗಿ ಅಥವಾ ಲಿಖಿತ ರೂಪದಲ್ಲಿ ತಮ್ಮ ತಕರಾರುಗಳನ್ನು ಸಲ್ಲಿಸತಕ್ಕದ್ದು, ಹಾಗೊಂದು ವೇಳೆ ಯಾವುದೇ ತಂಟೆ ತಕರಾರುಗಳು ಸದರಿ 7 ದಿನಗಳ ಒಳಗಾಗಿ ನಮ್ಮನ್ನು ತಲುಪದಿದ್ದ ಪಕ್ಷದಲ್ಲಿ, ನಮ್ಮ ಕಕ್ಷಿದಾರರು ಮೇಲೆ ಹೇಳಿದ ಸ್ವತ್ತನ್ನು ಖರೀದಿಸಲು ಸಂಪೂರ್ಣವಾಗಿ ಕಾನೂನು ಸಮ್ಮತವಾಗಿ ಹಕ್ಕುಳ್ಳವರಾಗಿರುತ್ತಾರೆ ಎಂದು ಈ ಮೂಲಕ ತಿಳಿಯಪಡಿಸಲಾಗಿರುತ್ತದೆ.

Sd/- N. Mahadevaswamy
B.A.L.,LLB., Advocate/Leagal Advisor,No, 376/A, 12th cross, Ramakrishna Nagara "G" block, Mysore-22. Mobile-9448038689
ದಿನಾಂಕ: 24–09–2025, ಸ್ಥಳ : ಮೈಸೂರು.

ಜಿಲ್ಲಾ ಪಂಚಾಯತ್ ಕಾರ್ಯಾಲಯ

ಜಿಲ್ಲಾ ಆಡಳಿತ ಭವನ, ನೆಲ ಮಹಡಿ, ಚಾಮರಾಜನಗರ ಜಿಲ್ಲೆ–571313
ದೂರವಾಣಿ ಸಂಖ್ಯೆ: 08226–224013 ಫ್ಯಾಕ್ಸ್ ಸಂಖ್ಯೆ: 08226–224014
ಇ–ಮೇಲ್: **ceochanagar@gmail.com**

ಸಂ:ಜಿಪಂಚಾ:ಆಡಳಿತ (2):06:2023-24 (K-22905) ದಿನಾಂಕ: 23–09–2025

Providing Services of Administrative Assistance, Account Assistance, Data Entry Operator, Driver, "D" Group, Security & House Keeping ಹುದ್ದೆಗಳನ್ನು **E- Procurement** ಮೂಲಕ ಪಡೆಯುವ ಬಗ್ಗೆ

E-PROCUREMENT TENDER NOTIFICATION
(Website: www.kppp.karnataka.gov.in)

ಚಾಮರಾಜನಗರ ಜಿಲ್ಲಾ ಪಂಚಾಯಿತಿ ಕಛೇರಿಯಲ್ಲಿ ಬೆರಳಚ್ಚುಗಾರರು, ವಾಹನ ಚಾಲಕರು ಮತ್ತು "ಡಿ" ಗ್ರೂಪ್ ನೌಕರರ ಹುದ್ದೆಗಳು ಖಾಲಿಯಿದ್ದು, ಖಾಲಿ ಹುದ್ದೆಗಳಿಗೆ ಎದುರಾಗಿ ಅರ್ಹತೆಯುಳ್ಳ **Data Entry Operator, Driver & "D" Groups** ಸೇವೆಯನ್ನು ಹಾಗೂ ಜಿಲ್ಲಾ ಸಂಪನ್ಮೂಲ ಕೇಂದ್ರಕ್ಕೆ ಆಡಳಿತ ಸಹಾಯಕ, ಲೆಕ್ಕ ಸಹಾಯಕ, ಗ್ರೂಪ್ "ಡಿ", ಸೆಕ್ಯೂರಿಟಿ, ಹೌಸ್ ಕೀಪಿಂಗ್ ಹುದ್ದೆಗಳನ್ನು ಒಂದು ವರ್ಷದ ಅವಧಿಗೆ ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಸಂಸ್ಥೆಯಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಮತ್ತು ಪಾರದರ್ಶಕ ಅಧಿನಿಯಮ **(KTPP)** 1999/2000ರ ಪ್ರಕಾರ ಇ–**Procurement** ಟೆಂಡರ್ ಮೂಲಕ ಪಡೆಯುವ ಅವಶ್ಯಕತೆ ಇರುತ್ತದೆ. ಸದರಿಯವರುಗಳ ಸೇವೆಯನ್ನು ಸಹ ಇ–**Procurement** ಟೆಂಡರ್ ಮೂಲಕ ಪಡೆಯಲು ಉದ್ದೇಶಿಸಿದೆ.

1) ಟೆಂಡರ್ ಪ್ರಕಟಣೆ ದಿನಾಂಕ.	ಸಂ:ಜಿಪಂಚಾ:ಆಡಳಿತ (2):06: 2023–24, ದಿನಾಂಕ: 22–09–2025
2) ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಪ್ರಾರಂಭಿಸುವ ದಿನಾಂಕ.	ದಿನಾಂಕ: 24–09–2025
3) ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ.	ದಿನಾಂಕ: 23–10–2025 ಸಂಜೆ 5 ಗಂಟೆಗೆ
4) ತಾಂತ್ರಿಕ ಲಕೋಟೆ ತೆರೆಯುವ ಸ್ಥಳ, ವೇಳೆ ಮತ್ತು ದಿನಾಂಕ.	ಜಿಲ್ಲಾ ಪಂಚಾಯತ್ ಕಾರ್ಯಾಲಯ, ಚಾಮರಾಜನಗರ. ದಿನಾಂಕ: 27–10–2025, ಬೆಳಿಗ್ಗೆ 11 ಗಂಟೆಗೆ
5) ಆರ್ಥಿಕ ಲಕೋಟೆಯನ್ನು ತೆರೆಯುವ ಸ್ಥಳ, ವೇಳೆ ಮತ್ತು ದಿನಾಂಕ.	ಕೊಠಡಿ ಸಂಖ್ಯೆ: 04, ಜಿಲ್ಲಾ ಪಂಚಾಯತ್ ಕಾರ್ಯಾಲಯ, ಚಾಮರಾಜನಗರ ದಿನಾಂಕ: 29–10–2025, ಬೆಳಿಗ್ಗೆ 10.30 ಗಂಟೆಗೆ
6) ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ. ಮೊತ್ತ.	ರೂ. 1,80,000/–
7) ಸಂಪರ್ಕಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ.	ಉಪ ಕಾರ್ಯದರ್ಶಿಗಳು, ಜಿಲ್ಲಾ ಪಂಚಾಯತ್, ಚಾಮರಾಜನಗರ. ದೂರವಾಣಿ ಸಂಖ್ಯೆ: 08226–224015

ಸಹಿ/– ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ,
ಜಿಲ್ಲಾ ಪಂಚಾಯತ್, ಚಾಮರಾಜನಗರ.

ಸಂ:ವಾಸಾಸಂಇ:ಚಾನಗರ:375:2025–26

ಮೈಸೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.,

ಮೆಗಾ ಡೈರಿ ಸಂಕೀರ್ಣ, ಬನ್ನೂರು ರಸ್ತೆ, ಆಲನಹಳ್ಳಿ ಅಂಚೆ, ಮೈಸೂರು – 570028.
ದೂರವಾಣಿ ಸಂಖ್ಯೆ:0821–2474475, ಫ್ಯಾಕ್ಸ್ ನಂ.0821–2474476,
ಇ–ಮೇಲ್ : purmymul@gmail.com

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಟೆಂಡರ್ ಮುಖಾಂತರ ಮಾತ್ರ)

ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟಕ್ಕೆ ಅವಶ್ಯವಿರುವ ಈ ಕೆಳಕಂಡ ಸಾಮಾಗ್ರಿಗಳನ್ನು ಖರೀದಿಸಲು /ಸೇವೆಯನ್ನು ಪಡೆಯಲು ಅರ್ಹ ಟೆಂಡರ್‌ದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಮುಖೇನ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ದಾಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ ಅಡಿ **https://kppp.karnataka.gov.in** ಅಪ್‌ಲೋಡ್ ಮಾಡಬಹುದಾಗಿರುತ್ತದೆ.

ಕ್ರ ಸಂ	ಟೆಂಡರ್ ಪ್ರಕಟಣೆ (ಅಲ್ಪಾವಧಿ ಟೆಂಡರ್)	ಸೇವೆಯ ವಿವರ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ
1	KMF/2025-26/ IND1667	ಒಕ್ಕೂಟಕ್ಕೆ ಅಗತ್ಯವಿರುವ ಆಗ್ರೋ ಬೇಸ್ಡ್ ಬ್ರಿಕೆಟ್ಸ್‌ಗಳನ್ನು ಖರೀದಿಸುವ ಬಗ್ಗೆ.	01.10.2025 ಮಧ್ಯಾಹ್ನ 03.12 ಗಂಟೆಯವರೆಗೆ
2	KMF/2025-26/ IND1668	ಒಕ್ಕೂಟಕ್ಕೆ ಅಗತ್ಯವಿರುವ ಪ್ಲಾಸ್ಟಿಕ್ ಪ್ಯಾಲೆಟ್ಸ್ ಅಥವಾ ರಿಸೈಕಲ್ಡ್ ಪಾಲಿಮರ್ ಕಂಪೋಸಿಟ್ ಪ್ಯಾಲೆಟ್ಸ್‌ಗಳನ್ನು ವಾರ್ಷಿಕ ದರ ಗುತ್ತಿಗೆ ಆಧಾರದಲ್ಲಿ ಖರೀದಿಸುವ ಬಗ್ಗೆ.	02.10.2025 ಸಂಜೆ 05.00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ ಖರೀದಿ ವಿಭಾಗವನ್ನು (6366430821,9482231739) ಸಂಪರ್ಕಿಸಬಹುದಾಗಿದೆ.
ಸಹಿ/–, ವ್ಯವಸ್ಥಾಪಕ ನಿರ್ದೇಶಕರು
ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟ ನಿ.,

